RNI:KARKAN/2021/85750 KPL/L/RNP/02/24-26

# ಕರುನಾಡ ಕಂದ

Volume 4 Issue 16 Date 01-07-2025 Page 16
ಸಂಪುಟ 4 ಸಂಚಿಕೆ 16 ಪುಟ 16
ಬೆಲೆ: 20/-
FORTNIGHTLY
ಪಾಕ್ಷಿಕ ಪತ್ರಿಕೆ

ಸಂಪಾದಕರು: ಬಸವರಾಜ ಬಳಿಗಾರ
ಫೋ.ನಂ: 9986366909

## ಮೂಲ ಉದ್ದೇಶವನ್ನೇ ಮರೆತ ಸರ್ಕಾರಿ ಆಸ್ಪತ್ರೆ..!?





## ಸರ್ಕಾರಿ ಭೂಗಳ್ಳರ ವಿರುದ್ಧ ಜಿಲ್ಲಾಡಳಿತ ದಿಟ್ಟ ಕ್ರಮ

## ಕರ್ನಾಟಕದ ಕಿರಣ್ ಬೇಡಿ: ಡಾ.ಶೋಭಾರಾಣಿ ವಿ.ಜೆ.






## ತುರ್ತು ಪರಿಸ್ಥಿತಿ ಹೇರಿದ ಕಾಂಗ್ರೆಸ್ ಕರಾಳ ಇತಿಹಾಸಕ್ಕೆ 50 ವರ್ಷ ಕುರಿತು ವಿಚಾರ ಸಂಕಿರಣ

## ಬೆಳಗಾವಿ: ಸಂಬಳ ನನ್ನ ಹಕ್ಕು, ಗಿಂಬಳ ನನ್ನ ತಾಕತ್ತು, ಕೆಲಸ ನನ್ನ ಮರ್ಜಿ

### ಗ್ರಾ.ಪಂ. ಸದಸ್ಯರ ಮಹಾ ಒಕ್ಕೂಟದ ವತಿಯಿಂದ ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮನವಿ

## ಪಂಚಾಯತಿಗಳಲ್ಲಿನ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಲು ಗಡುವು

## ಯೋಗ ಶಿಕ್ಷಕ ಯೋಗೇಂದ್ರ ಯದಲಾಪುರ



## ಏನಿದು ಭಾರತೀಯ ನ್ಯಾಯ ಸಂಹಿತೆ ಸೆಕ್ಷನ್ 196



## ವಾಸ್ತವ!



ಕರುನಾಡ ಕಂದ
ಸಂಪುಟ 04 । ಸಂಚಿಕೆ 16
ದಿನಾಂಕ: 01-07-2025 ಪುಟಗಳು:16

# ವೆಲ್ಫೇರ್ ಪಾರ್ಟಿ ವತಿಯಿಂದ ಸಾರ್ವಜನಿಕ ಸಭೆ



ದಿ. 28-06-2025 ರಂದು ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿಯಲ್ಲಿ ವೆಲ್ಫೇರ್ ಪಾರ್ಟಿ ವತಿಯಿಂದ ಸಾರ್ವಜನಿಕ ಸಭೆಯನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ರಾಜ್ಯಾಧ್ಯಕ್ಷ ಅಡ್ವೋಕೇಟ್ ತಾಹೇರ್ ಹುಸೇನ್ ರವರು ವಹಿಸಿದರು. ಪ್ರಾಸ್ತಾವಿಕವಾಗಿ ರಾಜ್ಯ ಕಾರ್ಯದರ್ಶಿ ಶ್ರೀ ಆಸೀಫ್ ಬಿಳೆಕುದ್ರಿ ರವರು ಭಾಷಣ ಮಾಡಿದರು.

ನಂತರ ರಾಜ್ಯಾಧ್ಯಕ್ಷರು ಸಭೆಯನ್ನು ಉದ್ದೇಶಿಸಿ ಮಾತನಾಡಿ ಪಕ್ಷದ ಧೋರಣೆ, ಕಾರ್ಯಚಟುವಟಿಕೆ ಮತ್ತು ಭವಿಷ್ಯದ ಗುರಿಗಳ ಬಗ್ಗೆ ಸಮಗ್ರವಾಗಿ ವಿವರಿಸಿದರು. ಸಭೆಯಲ್ಲಿ ಸಾರ್ವಜನಿಕರಿಂದ ಬಂದ ಪ್ರಶ್ನೆಗಳಿಗೆ ಉತ್ತರ ನೀಡಲಾಯಿತು.

ಕಾರ್ಯಕ್ರಮದಲ್ಲಿ ರಾಜ್ಯ ಮತ್ತು ಜಿಲ್ಲಾ ನಾಯಕರು ಉಪಸ್ಥಿತರಿದ್ದರು. ಸಭೆಯ ನಿರೂಪಣೆ ಶ್ರೀ ಸಮಿಯುಲ್ಲಾ ಸಯ್ಯದ್ ನಡೆಸಿಕೊಟ್ಟರು. ಜಿಲ್ಲಾ ಕಾರ್ಯದರ್ಶಿ ಶ್ರೀ ರಹಮತುಲ್ಲಾ ಧನ್ಯವಾದಗಳನ್ನು ಅರ್ಪಿಸಿದರು.

ಈ ಕಾರ್ಯಕ್ರಮದಲ್ಲಿ ಕಾಶೀಮಅಲಿ ಮನ್ಸೂರ್, ಜಾವೀದ್ ಕೆಂಭಾವಿ, ಜೈಭೀಮ್ ಮುತ್ತಗಿ, ಶಾಫೀಕ್ ಇನಾಮ್ ದಾರ್, ಅಕ್ಬರ್ ಮಕಾಂದಾರ್, ದಾವಲ್ ದೋಣಿ , ಹುಸೇನ್ ಪಟೇಲ್ ಪಟೇಲ್ ಭಾಗವಹಿಸಿದ್ದರು.

**ವರದಿ ನಜೀರ್ ಚೋರಗಸ್ತಿ, ಬಸವನಬಾಗೇವಾಡಿ**


# ನಿವೃತ್ತ ಶಿಕ್ಷಕರಿಗೆ ಬೀಳ್ಕೊಡುಗೆ ಸಮಾರಂಭ



**ವಿಜಯಪುರ/ ತಾಳಿಕೋಟೆ:** ಪಟ್ಟಣದ ಶ್ರೀ ಖಾಸ್ಗತೇಶ್ವರ ಸಂಸ್ಥೆಯಲ್ಲಿ ಸೇವೆ ಸಲ್ಲಿಸಿ ತಮ್ಮ ಜೀವನ ರೂಪಿಸಿಕೊಂಡು ತೃಪ್ತಿಕರವಾಗಿ ಸೇವೆಯಿಂದ ನಿವೃತ್ತರಾಗಿರುವುದು ನಮಗೆ ಹೆಮ್ಮೆ ಇದೆ ಅವರ ನಿವೃತ್ತ ಜೀವನ ಸುಖಮಯವಾಗಿರಲಿ ಎಂದು ವ್ಹಿ. ಸಿ. ಹಿರೇಮಠ ಹಾರೈಸಿದರು. ಅವರು ಪಟ್ಟಣದ ವೀರಶೈವ ವಿದ್ಯಾವರ್ಧಕ ಸಂಘದ ವಿರಕ್ತ ಶ್ರೀ ಸಭಾಭವನದಲ್ಲಿ ನಡೆದ ಸನ್ಮಾನ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿ ಪ್ರೌಢಶಾಲೆಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ಶಿಕ್ಷಕರಾದ ವಾಯ್. ಎಸ್.ನಾದ, ಶ್ರೀಮತಿ ಬಿ.ಟಿ.ಸಜ್ಜನ ಮತ್ತು ಶ್ರೀಮತಿ ಎಮ್.ಆರ್. ಕುಲಕರ್ಣಿ ಅವರಿಗೆ ಶುಭ ಹಾರೈಸಿದರು. ನಿವೃತ್ತ ಶಿಕ್ಷಕರು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು, ಶ್ರೀಮತಿ ಜೆ. ಎಸ್. ಮಸೂತಿಮಠ, ಎಮ್.ವಾಯ್. ಕೇಸರಿ ಮತ್ತು ಎಸ್. ಎಮ್. ಪಾಟೀಲರು ಮಾತನಾಡಿದರು. ಸನ್ಮಾನ ಕಾರ್ಯಕ್ರಮದ ವೇದಿಕೆಯಲ್ಲಿ ವೀ.ವಿ.ಸಂಘದ ವೈಸ್ ಚೇರಮನ್ ಬಿ.ಎನ್.ಹಿಪ್ಪರಗಿ, ಕಾರ್ಯದರ್ಶಿ ಎಮ್. ಎಸ್.ಸರಶೆಟ್ಟಿ, ಸಹ ಕಾರ್ಯದರ್ಶಿ ಕೆ.ಎಸ್. ಮುರಾಳ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಉಮೇಶ ಮಂಗೊಂಡ ಸ್ವಾಗತಿಸಿದರು, ಆರ್.ಜಿ.ರಾಠೋಡ ಸನ್ಮಾನ ಕಾರ್ಯಕ್ರಮ ನಿರ್ವಹಿಸಿದರು , ಡಾ. ಅನಿಲಕುಮಾರ ಇರಾಜ ನಿರೂಪಿಸಿದರು.

**ವರದಿ :ನಜೀರ್ ಚೋರಗಸ್ತಿ**

# ಬೆಂಗಳೂರು ಕಿಶೋರ ಚೆಸ್ ಚಾಂಪಿಯನ್




**ಬೆಂಗಳೂರು :** ಹರಿಯಾಣ ರಾಜ್ಯದಲ್ಲಿ ಜರುಗಿದ ರಾಷ್ಟ್ರೀಯ ಚೆಸ್ ಚಾಂಪಿಯನ್ ಶಿಪ್ ನಲ್ಲಿ ಬೆಂಗಳೂರಿನ ಪ್ರಖ್ಯಾತ ಲೇಖಕಿ, ಕಾದಂಬರಿಗಾರ್ತಿ ಹಾಗೂ ಕರ್ನಾಟಕ ಸರಕಾರದ ವಾರ್ತಾ ಮತ್ತು ಪ್ರಚಾರ ಇಲಾಖೆಯ ನಿವೃತ್ತ ನಿರ್ದೇಶಕಿ ಶ್ರೀಮತಿ ವೈ. ಕೆ. ಸಂಧ್ಯಾ ಶರ್ಮ ಹಾಗೂ ಖ್ಯಾತ ರಂಗ ಕರ್ಮಿ ಎಸ್. ವಿ. ಕೃಷ್ಣ ಶರ್ಮಾ ಇವರುಗಳ ಮೊಮ್ಮಗ ಚಿ. ಅದ್ವೀಕ್ ಅಭಿನವ್ ಕೃಷ್ಣ ಎರಡನೇ ಸ್ಥಾನ ಪಡೆದು ಇಟಲಿಯಲ್ಲಿ ಮುಂಬರುವ ದಿನಗಳಲ್ಲಿ ಜರುಗುವ ಅಂತಾರಾಷ್ಟ್ರೀಯ ಚೆಸ್ ಟೂರ್ನಮೆಂಟ್ ಇದರಲ್ಲಿ ಭಾಗವಹಿಸುವ ಅವಕಾಶ ಗಿಟ್ಟಿಸಿದ್ದಾನೆ. ಚಿ .ಅದ್ವೀಕ್ ಅವರ ಸಾಧನೆಗಾಗಿ ಇಂಡಿಯನ್ ದಿವ್ಯಾಂಗ ಎಂಪವರ್ ಮೆಂಟ್ ಅಸೋಸಿಯೇಷನ್ ಇದರ ಸಂಸ್ಥಾಪಕ ಅಧ್ಯಕ್ಷ ಶ್ರೀ ಕೊಡಕ್ಕಲ್ ಶಿವಪ್ರಸಾದ್ ಅವರು ಅಭಿನಂದಿಸಿದ್ದಾರೆ.

**– ಕರುನಾಡ ಕಂದ**

# ನಿವೃತ್ತ ಕೃಷಿ ಅಧಿಕಾರಿ ಬೀಳಗಿಯವರ ಬೀಳ್ಕೊಡುವ ಸಮಾರಂಭ



**ವಿಜಯಪುರ/ ತಾಳಿಕೋಟೆ:** ಪಟ್ಟಣದ ರೈತ ಸಂಪರ್ಕ ಕೇಂದ್ರದಲ್ಲಿ ಕೃಷಿ ಅಧಿಕಾರಿಯಾಗಿ ಸೇವೆ ಸಲ್ಲಿಸಿ ನಿವೃತ್ತರಾದ ಎಮ್. ಎಚ್. ಬೀಳಗಿ ಇವರನ್ನು ಇಲಾಖೆ ವತಿಯಿಂದ ಸನ್ಮಾನಿಸಿ ಬೀಳ್ಕೊಡಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ನೌಕರರ ಸಂಘದ ಅಧ್ಯಕ್ಷ ಅರವಿಂದ ಹೂಗಾರ ಅವರು ಮಾತನಾಡಿ ಸರ್ಕಾರಿ ನೌಕರರ ನಿವೃತ್ತಿ ಮತ್ತು ಪದೋನ್ನತಿ ಒಂದು ಸಹಜ ಪ್ರಕ್ರಿಯೆಯಾಗಿದೆ ಆದರೆ ನಾವು ನಮ್ಮ ಸೇವಾ ಅವಧಿಯಲ್ಲಿ ಎಷ್ಟು ಕರ್ತವ್ಯ ನಿಷ್ಠೆ ಹಾಗೂ ಪ್ರಾಮಾಣಿಕತೆಯಿಂದ ಕೆಲಸ ಮಾಡಿದ್ದೇವೆ ಎಂಬುದು ಮುಖ್ಯವಾಗುತ್ತದೆ, ಈ ಇಲಾಖೆಯಲ್ಲಿ 38 ವರ್ಷಗಳ ಸೇವೆಯನ್ನು ಸಲ್ಲಿಸಿದ ಎಂ. ಎಚ್. ಬೀಳಗಿಯವರು ಇಲಾಖೆ ಅಭಿಮಾನ ಪಡುವ ರೀತಿಯಲ್ಲಿ ಸೇವೆಯನ್ನು ಸಲ್ಲಿಸಿ ಎಲ್ಲರ ಪ್ರೀತಿಗೆ ಪಾತ್ರರಾಗಿದ್ದಾರೆ ಅವರ ವಿಶ್ರಾಂತ ಬದುಕು ಸುಖಕರವಾಗಿರಲೆಂದು ಹಾರೈಸುತ್ತೇನೆ ಎಂದರು.

ಇಲಾಖೆಯ ನಿವೃತ್ತ ನೌಕರ ಹೆಚ್. ವೈ. ಮಸರಕಲ್ಲ ಮಾತನಾಡಿ ಎಂ. ಎಚ್. ಬೀಳಗಿ ಅವರು ಕಡು ಬಡತನದ ಕುಟುಂಬದ ಹಿನ್ನೆಲೆಯಿಂದ ಬಂದವರು ಬಹಳ ಕಷ್ಟಪಟ್ಟು ಓದಿ ಸರ್ಕಾರಿ ನೌಕರಿಯನ್ನು ಪಡೆದು ಈ ಇಲಾಖೆಯಲ್ಲಿ ಪ್ರಾಮಾಣಿಕತೆಯಿಂದ ಕೆಲಸ ಮಾಡಿದ್ದಾರೆ ಅವರ ಆದರ್ಶ ಬದುಕು ಹಾಗೂ ಸೇವಾ ನಿಷ್ಠೆ ಇಂದಿನ ಯುವಕ–ರಿಗೆ ಮಾದರಿಯಾಗಿದೆ ಅವರ ವಿಶ್ರಾಂತ ಬದುಕು ನೆಮ್ಮದಿದಾಯಕವಾಗಿ ಇರಲೆಂದು ಹಾರೈಸುತ್ತೇನೆ ಎಂದರು.

ಸಾಮಾಜಿಕ ಕಾರ್ಯಕರ್ತ ಎಸ್.ಎ.ನಾಲಬಂದ, ನಿವೃತ್ತ ಶಿಕ್ಷಕಿ ಲಾಲಬಿ ಎಂ.ಬೀಳಗಿ, ರಾಜು ರುದ್ರವಾಡಿ, ಸಂಗಮೇಶ ಪಾಟೀಲ, ಲತೀಫ್ ಬೀಳಗಿ, ಎಂ. ಎಸ್.ಖಾಜಿ, ಎಂ.ಎಸ್.ಕೋರವಾರ, ಎನ್.ಎ.ಖಾಜಿ, ಆಸೀಫ್ ಬೀಳಗಿ ಮಾತನಾಡಿದರು.

ಸನ್ಮಾನ ಸ್ವೀಕರಿಸಿದ ನಿವೃತ್ತ ಕೃಷಿ ಅಧಿಕಾರಿ ಬೀಳಗಿ ಮಾತನಾಡಿ ನಿಮ್ಮ ಪ್ರೀತಿ ವಿಶ್ವಾಸಕ್ಕೆ ನಾನು ಚಿರಋಣಿಯಾಗಿರುವೆ ನನ್ನ ಸೇವೆಯ ಕಾಲದಲ್ಲಿ ಸಂಘದ ಅಧ್ಯಕ್ಷರಾದ ಅರವಿಂದ ಹೂಗಾರ ನನ್ನ ಸಹೋದ್ಯೋಗಿಗಳು ಹಾಗೂ ಒಳ್ಳೆಯ ಮಿತ್ರರ ಸಹಕಾರ ಮಾರ್ಗದರ್ಶನದಿಂದಾಗಿ ನಾನು ನನ್ನ ಸೇವೆಯನ್ನು ಪ್ರಾಮಾಣಿಕತೆಯಿಂದ ಮಾಡಲು ಸಾಧ್ಯವಾಗಿದೆ ಅವರಿಗೆ ನಾನು ಚಿರಋಣಿಯಾಗಿರುವೆ ಎಂದರು.

ಇದೇ ಸಂದರ್ಭದಲ್ಲಿ ನಿವೃತ್ತ ಕೃಷಿ ಅಧಿಕಾರಿ ಬೀಳಗಿ ಅವರಿಗೆ ಇಲಾಖೆ ವತಿಯಿಂದ ಹಾಗೂ ವಿವಿಧ ಸಂಘ–ಸಂಸ್ಥೆಗಳ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.

ಕೃಷಿ ಅಧಿಕಾರಿ ಮಹೇಶ ಜೋಶಿ ಕಾರ್ಯಕ್ರಮ ನಿರೂಪಿಸಿದರು. ಸಂಗಮೇಶ ಪಾಟೀಲ ವಂದಿಸಿದರು. ಕಾರ್ಯಕ್ರಮದಲ್ಲಿ ಬಾಗವಾನ ಜಮಾತ್ ಅಧ್ಯಕ್ಷ ಸದ್ದಾಂ ಬೀಳಗಿ, ಕೊಹಿನೂರ ಸಂಘದ ಅಧ್ಯಕ್ಷ ಕಾಸೀಮಸಾಬ ಜಕಾತಿ, ಅಬ್ಬಾಸಲಿ ನಿಡಗುಂದಿ, ಮೈನು ಕೊರ್ತಿ, ಆದಮಸಾಬ ಡಾಲಾಯತ್, ಮೋದಿನ ಹೊನ್ನುಟಗಿ, ರಾಜಅಹ್ಮದ್ ಬೆಣ್ಣೂರ, ಮಶಾಕ್ ಮುರಾಳ ಹಾಗೂ ಇಲಾಖೆಯ ಸಿಬ್ಬಂದಿಗಳು ಭಾಗವಹಿಸಿದ್ದರು.

**ವರದಿ ನಜೀರ್ ಚೋರಗಸ್ತಿ**

ಕರುನಾಡ ಕಂದ

ಸಂಪುಟ 04 । ಸಂಚಿಕೆ 16
ದಿನಾಂಕ: 01-07-2025 ಪುಟಗಳು:16


# ತುರ್ತು ಪರಿಸ್ಥಿತಿ ಹೇರಿದ ಕಾಂಗ್ರೆಸ್ ಕರಾಳ ಇತಿಹಾಸಕ್ಕೆ 50 ವರ್ಷ ಕುರಿತು ವಿಚಾರ ಸಂಕಿರಣ






ಬೆಳಗಾವಿ ಜಿಲ್ಲೆಯ ಅಥಣಿಯ ವಿಜಯಪುರ ರಸ್ತೆಯ ಶಿವಯೋಗಿ ನಗರದಲ್ಲಿರುವ ಕ್ಲೌಡ್ 9 ಸಭಾಂಗಣದಲ್ಲಿ ಭಾರತೀಯ ಜನತಾ ಪಾರ್ಟಿ ಅಥಣಿ ಮಂಡಲ ವತಿಯಿಂದ ತುರ್ತು ಪರಿಸ್ಥಿತಿ ವಿಚಾರ ಸಂಕಿರಣವನ್ನು ಬಿಜೆಪಿಯ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಹಾಗೂ ಮಾಜಿ ಶಾಸಕರಾದ ಸನ್ಮಾನ್ಯ ಶ್ರೀ ಪಿ. ರಾಜೀವ ಅವರು ಮಂಡಿಸಿದರು.

ಇದೇ ವೇಳೆ ಅಥಣಿಯ ಮಾಜಿ ಜನಪ್ರಿಯ ಶಾಸಕರಾದ ಶ್ರೀ ಸನ್ಮಾನ್ಯ ಮಹೇಶ್ ಕುಮಟಳ್ಳಿ, ಚಿಕ್ಕೋಡಿ ಜಿಲ್ಲಾ ಬಿಜೆಪಿ ಅಧ್ಯಕ್ಷರಾದ ಸತೀಶ್ ಅಪ್ಪಾಜಿಗೋಳ್, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಅಮೃತ್ ಕುಲಕರ್ಣಿ, ಜಿಲ್ಲಾ ಉಪಾಧ್ಯಕ್ಷರಾದ ನಿಂಗಪ್ಪ ನಂದೀಶ್ವರ, ಅಥಣಿ ಬಿಜೆಪಿ ಮಂಡಳದ ಅಧ್ಯಕ್ಷರಾದ ಡಾ. ರವಿ ಸಂಖ, ಮಾಜಿ ಪುರಸಭೆ ಸದಸ್ಯರಾದ ರಾಜೇಂದ್ರ ಐಹೊಳೆ, ಗಿರೀಶ್ ಬುಟಾಳಿ, ಅಥಣಿ ಮಹಿಳಾ ಮೋರ್ಚಾದ ಅಧ್ಯಕ್ಷರಾದ ಸರಸ್ವತಿ ನ್ಯಾಮಗೌಡ, ನಾನಾಸಾಬ ಅವತಾಡೆ, ನಿಂಗಪ್ಪ ಕೋಕಲೆ, ಬಾಬಾಸಾಬ ಕೆಂಚನ್ನವರ್, ಸಿದ್ದಪ್ಪ ಮುದುಕನ್ನವರ್, ಸಿದ್ದು ಪಾಟೀಲ ಸೇರಿದಂತೆ ಇನ್ನೂ ಅನೇಕ ಮುಖಂಡರುಗಳು ಮತ್ತು ಬಿಜೆಪಿಯ ಕಾರ್ಯಕರ್ತರು ಪಾಲ್ಗೊಂಡಿದ್ದರು.

**ವರದಿಗಾರ : ವಿಠ್ಠಲ ಖೋಕಾಟೆ**



ಶ್ರೀ ಮರುಳಸಿದ್ದಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ನರಸಾಪುರ ,ಬಾದಾಮಿ ತಾಲ್ಲೂಕು ಬಾಗಲಕೋಟೆ ಜಿಲ್ಲೆ ಅವರೊಂದಿಗೆ ಕರುನಾಡ ಕಂದ.

## ಪಂಚ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ



ವಿಜಯಪುರ ಜಿಲ್ಲೆಯ ತಾಳಿಕೋಟೆ ತಾಲೂಕು ಪಂಚ ಗ್ಯಾರಂಟಿ ಯೋಜನೆಯ ಕಾರ್ಯಾಲಯದಲ್ಲಿ ಪಂಚ ಗ್ಯಾರಂಟಿ ಯೋಜನೆಗಳ ತಾಲೂಕು ಅಧ್ಯಕ್ಷರಾದ ಶ್ರೀ ಸಂಗಮೇಶ ದೇಸಾಯಿ ರವರ ಅಧ್ಯಕ್ಷತೆಯಲ್ಲಿ ತಾಲೂಕ ಪಂಚ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ ಜರುಗಿತು. ಮಾನ್ಯ ತಾ. ಪಂ. ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀ ನಿಂಗಪ್ಪ ಎಸ್. ಮಸಳಿ ರವರು ಉಪಸ್ಥಿತರಿದ್ದರು.

ಸದರಿ ಸಭೆಯಲ್ಲಿ ಪಂಚ ಗ್ಯಾರಂಟಿ ಯೋಜನೆಗಳ ಪರಿಣಾಮಕಾರಿ ಅನುಷ್ಠಾನದ ಕುರಿತು ಚರ್ಚಿಸಲಾಯಿತು.

ಇದೇ ಸಮಯದಲ್ಲಿ ವಿಜಯಪುರ ಜಿಲ್ಲೆಯ ಪಂಚ ಗ್ಯಾರಂಟಿ ಯೋಜನೆಗಳ ಸದುಪಯೋಗ ಪಡೆದುಕೊಂಡವರ ಯಶೋಗಾಥೆಯ ಪುಸ್ತಕ ಬಿಡುಗಡೆ ಮಾಡಲಾಯಿತು. ಈ ಸಂದರ್ಭದಲ್ಲಿ ಆಹಾರ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಸಾರಿಗೆ ಇಲಾಖೆ, ಹೆಸ್ಕಾಂ ಅಧಿಕಾರಿಗಳು ಹಾಗೂ ಪಂಚ ಗ್ಯಾರಂಟಿ ಯೋಜನೆಯ ತಾಲೂಕ ಸಮಿತಿಯ ಸದಸ್ಯರುಗಳು ಭಾಗವಹಿಸಿದ್ದರು.

**ವರದಿ ನಜೀರ್ ಅಹ್ಮದ್ ಚೋರಗಸ್ತಿ**



ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಮಾಸ್ತಮರ್ಡಿ ಪೀಠ ಮಠದ ಡಾಕ್ಟರ್ ವೀರ ಪ್ರಭು ಶ್ರೀಗಳಿಗೆ ಕರುನಾಡ ಕಂದ ಪತ್ರಿಕೆ ವಿತರಿಸಿದ ಸಂದರ್ಭ.

## ಕೂಡಲೇ ಹುಲಿಯನ್ನು ಸೆರೆಹಿಡಿಯುವಂತೆ ಗ್ರಾಮಸ್ಥರ ಒತ್ತಾಯ



**ಚಾಮರಾಜನಗರ/ ಗುಂಡ್ಲುಪೇಟೆ:** ಕರ್ನಾಟಕ ಕಾವಲು ಪಡೆಯ ವತಿಯಿಂದ ಗುಂಡ್ಲುಪೇಟೆ ತಾಲ್ಲೂಕಿನ ಬೆಂಡರವಾಡಿ ಗ್ರಾಮ ಬಾಳೆ ಎಲೆ ಮಾದಯ್ಯ ಟ್ರಸ್ಟ್ ಹಾಗೂ ಬೆಂಡರವಾಡಿ ಗ್ರಾಮಸ್ಥರ ನೇತೃತ್ವದಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಾದ ಸುರೇಶ್ ಕುಮಾರ್ ರವರ ಜೊತೆ ಪುತ್ತನಪುರ, ವಡ್ಡನಹೊಸಹಳ್ಳಿ, ಬಸವಾಪುರ, ಅಣ್ಣೂರು ಕೇರಿ ಐದು ಗ್ರಾಮಸ್ಥರು ಜೊತೆಗೂಡಿ ಸಭೆ ನಡೆಸಿದರು. ಗ್ರಾಮಗಳ ಸುತ್ತಮುತ್ತ ವನ್ಯ ಜೀವಿಗಳಾದ ಹುಲಿ, ಚಿರತೆಗಳ ಕಾಟ ಇರುವುದರಿಂದ ಗ್ರಾಮಸ್ಥರು ಭಯಭೀತರಾಗಿದ್ದಾರೆ ಕೂಡಲೇ ಹುಲಿಯನ್ನು ಸೆರೆಹಿಡಿಯಬೇಕು ಎಂದು ಗ್ರಾಮಸ್ಥರು ಹೇಳಿಕೊಂಡರು.

ಈ ಸಂದರ್ಭದಲ್ಲಿ ಕಾವಲು ಪಡೆಯ ತಾಲ್ಲೂಕು ಅಧ್ಯಕ್ಷರಾದ ಎ. ಅಬ್ದುಲ್ ಮಾಲಿಕ್ ಹಾಗೂ ಕನ್ನಡಪರ ಹಿರಿಯ ಹೋರಾಟಗಾರರಾದ ಬ್ರಹ್ಮಾನಂದ್, ಪರಿಸರ ಸಂರಕ್ಷಣಾ ಸಮಿತಿ ತಾಲ್ಲೂಕು ಅಧ್ಯಕ್ಷರಾದ ಪಿ. ಬಾಲು ಮಾತನಾಡಿ ಇತ್ತೀಚಿನ ದಿನಗಳಲ್ಲಿ ಕಾಡು ಪ್ರಾಣಿಗಳ ಕಾಟದಿಂದ ರೈತರು ಸಾಕು ಪ್ರಾಣಿಗಳನ್ನು ಕಳೆದುಕೊಂಡು ಸಾಲಗಾರರಾಗುತ್ತಿದ್ದಾರೆ, ಜೆಣಟಿಜಜಜಿಟಿಜಜತೆಗೆ ಅವರಿಗೆ ಜೀವದ ಭಯವೂ ಇದೆ ಆದ್ದರಿಂದ ತಕ್ಷಣ ಹುಲಿ ಸೆರೆ ಹಿಡಿಯುವ ಕಾರ್ಯಾಚರಣೆ ನಡೆಸಬೇಕೆಂದು ಒತ್ತಾಯಿಸಿದರು.

ಇದೇ ವೇಳೆ ಅಧಿಕಾರಿಗಳಾದ ಸುರೇಶ್ ಕುಮಾರ್ ರವರು ಮಾತನಾಡಿ 15 ದಿನಗಳಲ್ಲಿ ಹುಲಿ ಸೆರೆಹಿಡಿಯುವ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಆರ್.ಎಫ್.ಓ. ಶಿವುಕುಮಾರ್, ಕಾವಲು ಪಡೆಯ ತಾಲ್ಲೂಕು ಗೌರವಾಧ್ಯಕ್ಷರಾದ ರಾಮೇಗೌಡ, ಟೌನ್ ಸಂಚಾಲಕರಾದ ಮಿಮಿಕ್ರಿರಾಜು, ಸಾಹಿತಿ ಕಾಳಿಂಗಸ್ವಾಮಿ ಸೇರಿದಂತೆ ಮುಖಂಡರು ಹಾಗೂ ಗ್ರಾಮಸ್ಥರು ಹಾಜರಿದ್ದರು.

**ವರದಿ ಗುಂಡ್ಲುಪೇಟೆ ಕುಮಾರ್**

ಕರುನಾಡ ಕಂದ
ಸಂಪುಟ 04 । ಸಂಚಿಕೆ 16
ದಿನಾಂಕ: 01-07-2025 ಪುಟಗಳು:16

# ಹೊಲಿಗೆ ಯಂತ್ರ ಹಾಗೂ ಯು.ಪಿ.ಎಸ್ ಬ್ಯಾಟರಿ ವಿತರಣೆ ಕಾರ್ಯಕ್ರಮ



**ಬೆಳಗಾವಿ/ ಅಥಣಿ :** ದಿನಾಂಕ 23/ 06 /2025 ರಂದು ಬೆಳಿಗ್ಗೆ 10:30 ಕ್ಕೆ ಅಥಣಿಯ ಪುರಸಭೆ ಸಭಾಭವನದಲ್ಲಿ 2021 ಮತ್ತು 2022ನೇ ಸಾಲಿನ 15 ನೇ ಹಣಕಾಸು ಯೋಜನೆ ಅಡಿಯಲ್ಲಿ ಆಟೋ ಟಿಪ್ಪರ್, ಸ್ವಚ್ಛ ಭಾರತ ಮಿಷನ್ 1.0 ಯೋಜನೆ ಅಡಿಯಲ್ಲಿ 1 ಸ್ಕಿಡ್ ಲೋಡರ್, ಸ್ವಚ್ಛ ಭಾರತ್ ಮಿಷನ್ 1.0 ಯೋಜನೆ ಅಡಿಯಲ್ಲಿ 2 ಟ್ರ್ಯಾಕ್ಟರ್, ಮತ್ತು 2022-23 ನೇ ಸಾಲಿನ ಮುಖ್ಯಮಂತ್ರಿ ಅಮೃತ ನಗರೋತ್ಥಾನ ಯೋಜನೆ ಅಡಿಯಲ್ಲಿ ಆಯ್ಕೆಯಾದ 206 ಹೊಲಿಗೆ ಯಂತ್ರದ ಫಲಾನುಭವಿಗಳಿಗೆ ಹಾಗೂ 53 ಇನ್ವರ್ಟರ್ ಫಲಾನುಭವಿಗಳಿಗೆ, ಮಾಜಿ ಉಪ ಮುಖ್ಯಮಂತ್ರಿಗಳು ಹಾಗೂ ಅಥಣಿಯ ಜನಪ್ರಿಯ ಶಾಸಕರಾದ ಲಕ್ಷ್ಮಣ ಸವದಿ ಅವರು ವಿತರಣೆ ಮಾಡಿದರು.

ಇದೇ ವೇಳೆ ಮಾತನಾಡಿದ ಶಾಸಕರು ಅಥಣಿ ಪಟ್ಟಣ ಅಭಿವೃದ್ಧಿ ಪಥದಲ್ಲಿ ಸಾಗುತ್ತಿದ್ದು ಪಟ್ಟಣ ಇನ್ನೂ ಸುಂದರವಾಗಿ ಕಾಣಲು ಎಲ್ಲಾ ಪುರಸಭೆ ಸದಸ್ಯರು ಕೈ ಜೋಡಿಸಿದಾಗ ಮಾತ್ರ ಸಾಧ್ಯವಾಗುತ್ತದೆ ಅಥಣಿ ತಾಲೂಕಿನ ಸೌಂದರ್ಯಕ್ಕೆ ತಾಲೂಕಿನ ಡಿವೈಡರ್ ಹಾಗೂ ರಸ್ತೆಯ ಎರಡೂ ಬದಿಗಳಲ್ಲಿ ಮರಗಳನ್ನು ನೆಟ್ಟು ಬೆಳೆಸಿ ಮೀರಜ್ ರಸ್ತೆ ಹಾಗೂ ವಿಜಯಪುರ ರಸ್ತೆಯಲ್ಲಿ ಸ್ವಾಗತ ದ್ವಾರಗಳನ್ನು ನಿರ್ಮಿಸೋಣ ತಾಲೂಕಿನ ಅಭಿವೃದ್ಧಿ ಕಾರ್ಯಕ್ಕೆ ತಾವೆಲ್ಲರೂ ಕೈ ಜೋಡಿಸಬೇಕಿದೆ ಎಂದರು.

ಸ್ವತಃ ನಾನು ಕೂಡಾ 50 ಮರಗಳನ್ನು ಕೊಡುತ್ತೇನೆ ಎಂದು ಲಕ್ಷ್ಮಣ್ ಸವದಿ ಅವರು ಹೇಳಿದರು ಮತ್ತು ನಮ್ಮ ಶಿಕ್ಷಣ ಇಲಾಖೆಯ ನಮ್ಮ ಕ್ಷೇತ್ರದ ಸುಮಾರು 25 ಸಾವಿರ ವಿದ್ಯಾರ್ಥಿಗಳನ್ನು ಗುರುತಿಸಿ ಒಬ್ಬ ವಿದ್ಯಾರ್ಥಿಗೆ ಒಂದು ಸಸಿಯನ್ನು ಕೊಟ್ಟು ಆ ವಿದ್ಯಾರ್ಥಿಯ ಶಾಲೆಯಲ್ಲಿ ನಾಲ್ಕು ಅಥವಾ ಐದು ವರ್ಷ ವಿದ್ಯಾಭ್ಯಾಸ ಮುಗಿಯುವವರೆಗೆ ಆ ಗಿಡಕ್ಕೆ ವಿದ್ಯಾರ್ಥಿ ಹೆಸರು ಹಾಕಿ ಮತ್ತು ಬೋರ್ಡ್ ಹಾಕಿ ಈ ವರ್ಷದ ಮೊದಲನೇ ಹಂತಕ್ಕೆ 25 ಸಾವಿರ ಸಸಿಗಳನ್ನು ನೆಡುವ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ ಎಂದು ಹೇಳಿದರು.

ಇದೇ ವೇಳೆ ಅಥಣಿ ಪುರಸಭೆ ಸರ್ವ ಸದಸ್ಯರಿಂದ ಶಾಸಕರಿಗೆ ಸನ್ಮಾನ ಮಾಡಲಾಯಿತು.

ಈ ಸಮಾರಂಭದಲ್ಲಿ ಅಥಣಿ ಪುರಸಭೆ ಅಧ್ಯಕ್ಷರಾದ ಶ್ರೀಮತಿ ಶಿವಲೀಲಾ ಬುಟಾಳಿ, ಉಪಾಧ್ಯಕ್ಷರಾದ ಶ್ರೀಮತಿ ಭುವನೇಶ್ವರಿ ಯಂಕಚ್ಚಿ, ಪುರಸಭೆ ಮುಖ್ಯಾಧಿಕಾರಿಗಳಾದ ಶ್ರೀ ಅಶೋಕ ಗುಡಿಮನಿ ಪುರಸಭೆ ಸದಸ್ಯರಾದ ಕಲ್ಲೇಶ್ ಮಡ್ಡಿ , ಸಂತೋಷ್ ಸಾವಡಕರ, ಸರ್ವ ಸದಸ್ಯರು, ಪುರಸಭೆ ಸಿಬ್ಬಂದಿ ವರ್ಗದವರು ಹಾಗೂ ಫಲಾನುಭವಿಗಳು ಉಪಸ್ಥಿತರಿದ್ದರು.

**ವರದಿಗಾರ ವಿಠ್ಠಲ ಝೋಕಾಟೆ**

# 8 ನೆಯ ವರ್ಷದ ರಾಜ್ಯಮಟ್ಟದ ಪ್ರತಿಭಾ ಪುರಸ್ಕಾರ ಸಮಾರಂಭ



ಬೆಳಗಾವಿ ಜಿಲ್ಲೆಯ ಅಥಣಿ ನಗರದಲ್ಲಿ ಆದಿ ಬಣಜಿಗ ಯುವ ವೇದಿಕೆ ಅಥಣಿ ಇವರು ಏರ್ಪಡಿಸಿದ್ದ 2024 ಮತ್ತು 2025 ನೇ ಸಾಲಿನ ರಾಜ್ಯಮಟ್ಟದ 8 ನೆಯ ವರ್ಷದ ಪ್ರತಿಭಾ ಪುರಸ್ಕಾರ ಸಮಾರಂಭ ಜರುಗಿತು.

ಎಸ್.ಎಸ್.ಎಲ್.ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ದರ್ಜೆಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ ಹಾಗೂ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭವನ್ನು ಅಥಣಿಯ ಶಿವಣಗಿ ಕಾರ್ಯಾಲಯದಲ್ಲಿ ಮಾಜಿ ಉಪ ಮುಖ್ಯಮಂತ್ರಿಗಳು ಹಾಗೂ ಅಥಣಿಯ ಜನಪ್ರಿಯ ಶಾಸಕರಾದ ಶ್ರೀ ಲಕ್ಷ್ಮಣ ಸವದಿಯವರು ಸಸಿಗೆ ನೀರು ಹಾಕುವುದರ ಮೂಲಕ ಚಾಲನೆ ನೀಡಿದರು.

ಇದೇ ಸಮಾರಂಭದಲ್ಲಿ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರಿಗೆ ಸನ್ಮಾನದೊಂದಿಗೆ ಪುರಸ್ಕಾರ ಮಾಡಲಾಯಿತು. ಮತ್ತು ಶಾಸಕರಾದ ಲಕ್ಷ್ಮಣ ಸವದಿ ಅವರಿಗೆ ಆದಿ ಬಣಜಿಗ ಯುವ ವೇದಿಕೆ ವತಿಯಿಂದ ಕೂಡಾ ಸನ್ಮಾನ ನೆರವೇರಿತು.

ಈ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ದಿವ್ಯಸಾನಿಧ್ಯವನ್ನು ಶೆಟ್ಟರ ಮಠದ ಪ.ಪೂ.ಶ್ರೀ ಮ.ನಿ.ಪ್ರ.ಮರುಳಸಿದ್ಧ ಮಹಾಸ್ವಾಮಿಗಳು ವಹಿಸಿಕೊಂಡಿದ್ದರು.

ಹಿರಿಯ ಮುಖಂಡರಾದ ಶ್ರೀ ರಾಜಣ್ಣ ಕೊರವಿ, ಶ್ರೀ ಗಂಗಾಧರ ಸಂಬಣ್ಣಿ, ಶ್ರೀ ಡಾ.ದಯಾನಂದ ಕರೆಣ್ಣವರ ಹಾಗೂ ಆದಿಬಣಜಿಗ ಸಮಾಜ ಅಥಣಿ ಅಧ್ಯಕ್ಷರಾದ ಶ್ರೀ ಚಂದ್ರಶೇಖರ ಬಳ್ಳೊಳ್ಳಿ, ಆದಿಬಣಜಿಗ ಯುವ ವೇದಿಕೆ ಅಥಣಿ ನೂತನ ಅಧ್ಯಕ್ಷರಾದ ಶ್ರೀ ರಾಜು ಆಲಬಾಳ, ಹಾಲಿ ಅಧ್ಯಕ್ಷರಾದ ಶ್ರೀ ಅಶೋಕ ಮಾರಾಪೂರ ಶಿವಯೋಗಿ ನಗರದ ಮುಖಂಡರಾದ ಸುರೇಶ ಆಲಬಾಳ ಹಾಗೂ ಸಮಾಜದ ಮುಖಂಡರು ಮತ್ತು ವಿದ್ಯಾರ್ಥಿಗಳು , ಪಾಲಕರು ಹಾಗೂ ಬಹಳ ಜನಸಂಖ್ಯೆಯಲ್ಲಿ ಜನಸ್ತೋಮ ಪಾಲ್ಗೊಂಡಿತ್ತು.

**ವರದಿ. ವಿಠ್ಠಲ ಝೋಕಾಟೆ**

# ಶಾಸಕರಿಂದ ಗುದ್ದಲಿ ಪೂಜೆ



**ಬೆಳಗಾವಿ :** ದಿ 28/6/25 ರಂದು ರಾಯಬಾಗ ಗ್ರಾಮೀಣ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ವಾರ್ಡ್ ನಂಬರ್ 03 ಮತ್ತು 4 ರ ವ್ಯಾಪ್ತಿಯಲ್ಲಿ ಕೇಂದ್ರ ಸರ್ಕಾರದ ಅನುದಾನದ ಯೋಜನೆ ಅಡಿಯಲ್ಲಿ ಜಲಜೀವನ ಮಿಷನ್ (ಕುಡಿಯುವ ನೀರಿನ ಟ್ಯಾಂಕ್ )ಗೆ ಮಾನ್ಯ ಶ್ರೀ ದುರ್ಯೋಧನ ಐಹೊಳೆ ಜನಪ್ರಿಯ ಶಾಸಕರು ರಾಯಬಾಗ ಇವರು ಗುದ್ದಲಿ ಪೂಜೆಯನ್ನು ನೆರವೇರಿಸಿದರು.

ಈ ಸಂದರ್ಭದಲ್ಲಿ ಅಣ್ಣಾ ಸಾಹೇಬ್ ಕೆಮಲಾಪುರೆ, ಸದಾಶಿವ ಹಳಿಂಗಳಿ, ನಿಂಗಪ್ಪ ಪೂಜಾರಿ, ಸಿದ್ದಪ್ಪ ಪೂಜಾರಿ, ಪ್ರಕಾಶ್ ಹೆಗಡೆ, ಗೋಪಾಲ್ ಕೊಚೇರಿ, ಮಲ್ಲು ಪೂಜಾರಿ, ದುಂಡಪ್ಪ ಬಂತೆ, ಸಂತೋಷ್ ದೀಪಾವಳಿ, ಅಶೋಕ್ ಸಿಂಗೆ, ಮಾರುತಿ ಗೋರ್ಪಡೆ, ಮಾರುತಿ ನಾವಿ, ಬಾದುಷಾ ಡಾಂಗೆ ಗ್ರಾ. ಪಂ. ಸದಸ್ಯರು, ಮಜ್ಜಿದು ಡಾಂಗೆ ಗ್ರಾ.ಪಂ ಸದಸ್ಯರು, ವಸಂತ ಗ್ರಾ.ಪಂ. ಸದಸ್ಯರು, ಸುಭಾಷ್ ಪೂಜಾರಿ, ಸುಭಾಷ್ ಭಜಂತ್ರಿ ಕುಡಿಯುವ ನೀರು ಸಹಾಯಕ ಇಂಜಿನಿಯರ್ ಜಿಲ್ಲಾ ಪಂಚಾಯಿತಿ ರಾಯಬಾಗ, ಲೋಹಿತ್ ಕಾಂಬಳೆ ಜೂನಿಯರ್ ಇಂಜಿನಿಯರ್ ರಾಯಬಾಗ, ಗುತ್ತಿಗೆದಾರ ಗಂಗಣ್ಣವರ್ ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

**ವರದಿ :ಸಂಗಮೇಶ ಕಾಂಬಳೆ**



**ಬಾಗಲಕೋಟೆ ಜಿಲ್ಲೆ ಬಾದಾಮಿ ವಕೀಲರು ಶ್ರೀ ಯುತ ಆರ್. ವೈ. ಕಂಬಾರ ಮತ್ತು ಸಿಬ್ಬಂದಿಯೊಂದಿಗೆ ಕರುನಾಡ ಕಂದ.**



**ಬಾಗಲಕೋಟೆ/ ಬಾದಾಮಿ:** ನವ ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಒಕ್ಕೂಟದ ಬಾಗಲಕೋಟೆ ಜಿಲ್ಲಾಧ್ಯಕ್ಷರು ಭರಮಪ್ಪ ನಾಯಕ್, ಜಿಲ್ಲಾ ಸಂಚಾಲಕರು ಮಾರುತಿ ಮೆಣಸಗಿ ಹಾಗೂ ಸದಸ್ಯರು ಕರುನಾಡ ಕಂದ ಪತ್ರಿಕೆಯೊಂದಿಗೆ.

ಕರುನಾಡ ಕಂದ
ಸಂಪುಟ 04 | ಸಂಚಿಕೆ 16
ದಿನಾಂಕ: 01-07-2025 ಪುಟಗಳು:16

# ಅಥಣಿಯಲ್ಲಿ ಪೊಲೀಸ್ ಇಲಾಖೆಯಿಂದ ಸಂಚಾರ ನಿಯಮ ಜಾಗೃತಿ ಜಾಥಾ ಕಾರ್ಯಕ್ರಮ



**ಬೆಳಗಾವಿ:** ಬೆಳಗಾವಿ ಜಿಲ್ಲಾ ಪೊಲೀಸ್, ಅಥಣಿ ಉಪ ವಿಭಾಗದ ಅಥಣಿ ನಗರದಲ್ಲಿ ಪೊಲೀಸ್ ಇಲಾಖೆ ಮತ್ತು ಶಿಕ್ಷಣ ಇಲಾಖೆಯ ಸಂಯುಕ್ತ ಆಶ್ರಯದ ವತಿಯಿಂದ ಅಥಣಿಯಲ್ಲಿ ಸಂಚಾರ ನಿಯಮ ಕುರಿತು ಜಾಗೃತಿ ಜಾಥಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಈ ಕಾರ್ಯಕ್ರಮದಲ್ಲಿ ವಾಹನ ಚಾಲನೆ ಮಾಡುವಾಗ ಸೀಟ್ ಬೆಲ್ಟ್ ಹಾಕಿಕೊಳ್ಳಬೇಕು, ಮೊಬೈಲ್ ಬಳಕೆ ಮಾಡಬಾರದು, ಮದ್ಯಪಾನ ಮಾಡಬಾರದು, ಧೂಮಪಾನ ಮಾಡಬಾರದು, ಅತೀ ವೇಗವಾಗಿ ಚಲಿಸಬಾರದು ಹೀಗೆ ಇನ್ನೂ ಅನೇಕ ವಾಹನ ಜಾಗೃತಿ ಕಾರ್ಯಕ್ರಮಗಳು ನಡೆದವು.

ಈ ಕಾರ್ಯಕ್ರಮದ ಜೊತೆಯಾಗಿ ಶಿಕ್ಷಣ ಇಲಾಖೆಯವರು ಕೂಡಾ ಜೊತೆಯಾಗಿ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

ಈ ಕಾರ್ಯಕ್ರಮದಲ್ಲಿ ಪಿಎಸ್ಐ ಮತ್ತು ಪೊಲೀಸ್ ಇಲಾಖೆಯ ಎಲ್ಲಾ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು ಮತ್ತು ಅಥಣಿಯ ಸಿದ್ಧಾಂತ ಮೆಡಿಕಲ್ ಕಾಲೇಜಿನ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಕೂಡಾ ಭಾಗವಹಿಸಿ ಈ ಕಾರ್ಯಕ್ರಮಕ್ಕೆ ಶೋಭೆ ತಂದರು.

**ವರದಿ : ವಿಠ್ಠಲ ಖೋಕಾಟೆ**




**ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಾ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಶ್ರೀ ಸಂಜೀವ ಜುನ್ನೂರ ಅವರೊಂದಿಗೆ ಕರುನಾಡ ಕಂದ.**

# ಎಂ.ಕೆ. ಹುಬ್ಬಳ್ಳಿ ಪಟ್ಟಣದಲ್ಲಿ ನೂತನ ಇಂದಿರಾ ಕ್ಯಾಂಟೀನ್ ಉದ್ಘಾಟನೆಗೆ ದಿನಗಣನೆ



ಬೆಳಗಾವಿ ಜಿಲ್ಲೆಯ ಚೆನ್ನಮ್ಮನ ಕಿತ್ತೂರು ಮತಕ್ಷೇತ್ರದ ಶಾಸಕರಾದ ಬಾಬಾ ಸಾಹೇಬ್ ಪಾಟೀಲ್ ರವರ ವಿಶೇಷ ಪ್ರಯತ್ನದ ಪ್ರತಿಫಲವಾಗಿಎಂ ಕೆ ಹುಬ್ಬಳ್ಳಿ ಪಟ್ಟಣದಲ್ಲಿ ನೂತನವಾಗಿ ಇಂದಿರಾ ಕ್ಯಾಂಟೀನ್ ನಿರ್ಮಾಣ ಕಾರ್ಯ ಬಹುತೇಕ ಪೂರ್ಣಗೊಂಡಿದ್ದು ಕೆಲವೇ ದಿನಗಳಲ್ಲಿ ಸಾರ್ವಜನಿಕರ ಸೇವೆಗೆ ಲೋಕಾರ್ಪಣೆಗೊಳ್ಳಲಿದೆ ಈ ಮೂಲಕ ಕ್ಷೇತ್ರದ ಜನರಿಗೆ ಕಡಿಮೆ ಬೆಲೆಯಲ್ಲಿ ಊಟ ನೀಡುವ ವ್ಯವಸ್ಥೆ ನೀಡಲಾಗುತ್ತದೆ ಇದರ ಸದುಪಯೋಗವನ್ನು ಎಲ್ಲರೂ ಪಡೆದು ಕೊಳ್ಳಬೇಕೆಂದು ಶಾಸಕರಾದ ಬಾಬಾಸಾಹೇಬ ಪಾಟೀಲರು ತಿಳಿಯಪಡಿಸಿದರು.

**ವರದಿ ಮಂಜು. ಎಮ್. ಚಿಕ್ಕಣ್ಣವರ**

# ಭೂಮಿ ಪೂಜೆ ಸಮಾರಂಭ



**ಬಾಗಲಕೋಟೆ** :ಬಾದಾಮಿ ತಾಲೂಕಿನ ಎಸ್. ಎಚ್ - 14 ರಿಂದ ನರಸಾಪುರ -ವಡವಟ್ಟಿ -ಕಳಸ ಜಿ. ಮು. ರಸ್ತೆ ಕಿ.ಮೀ ರವರೆಗೆ ರಸ್ತೆ ಸುಧಾರಣೆ ಮಾಡುವುದು

ಲೆಕ್ಕ ಶೀರ್ಷಿಕೆ : 2023-24 ನೇ ಸಾಲಿನ ಅಪೆಂಡಿಕ್ಸ - ಇ ಜಿಲ್ಲಾ ಮುಖ್ಯರಸ್ತೆ ( 50584-04-337-0-01-154 )

ಗುತ್ತಿಗೆದಾರರ ಹೆಸರು : ಶ್ರೀ .ಎಮ್. ಎಮ್ ಹಡಪದ ಕ್ಲಾಸ್ -1 ಗುತ್ತಿಗೆದಾರರು

ಅಂದಾಜು ಮೊತ್ತ : ರೂ 100.00 ಲಕ್ಷಗಳು ಈ ಕಾಮಗಾರಿಯ ಭೂಮಿ ಪೂಜೆಯನ್ನು ಸನ್ಮಾನ್ಯ ಶ್ರೀ ಭೀಮಸೇನ ಬಿ. ಚಿಮ್ಮನಕಟ್ಟಿ ಜನಪ್ರಿಯ ಶಾಸಕರು ಬಾದಾಮಿ ಮತಕ್ಷೇತ್ರ ಇವರ ಅಮೃತ ಹಸ್ತದಿಂದ ನೆರವೇರಿತು.

ಈ ಕಾರ್ಯಕ್ರಮಕ್ಕೆ ಅಧ್ಯಕ್ಷರು, ಉಪಾಧ್ಯಕ್ಷರು, ಗ್ರಾ.ಪಂ.ಸದಸ್ಯರು, ಊರಿನ ಮುಖಂಡರಾದ ಶ್ರೀಕಾಂತ ಅಡಪಟ್ಟಿ, ಎಚ್. ಜಿ. ಖಾನಾಪುರ ( ನಿವೃತ್ತ ಶಿಕ್ಷಕರು), ಸುರೇಶಗೌಡ ಯೋಗಪ್ಪನವರ, ಶಂಕ್ರಪ್ಪ ಕಂಬಾರ, ವೀರಯ್ಯ ಹಿರೇಮಠ, ಪೂಜಾ , ವಿಜಯಪುರ ಮತ್ತು ಬಾಗಲಕೋಟೆ ಹಾಲು ಉತ್ಪಾದಕರ ಸಂಘದ ಅಧ್ಯಕ್ಷರು ಈರನಗೌಡ ಕರೀಗೌಡರ, ಬೀರಪ್ಪ ಪೇಂಟಿ ಇನ್ನೂ ಮುಂತಾದವರು ಆಗಮಿಸಿದ್ದರು.


**ವರದಿ : ನಿಂಬಯ್ಯ ಕುಲಕರ್ಣಿ**

# ಮಲಪ್ರಭಾ ಮಲ್ಟಿ ಸ್ಪೆಷಾಲಿಟಿ ಕಟ್ಟಡ ಉದ್ಘಾಟನೆ



ಬೆಳಗಾವಿ ಜಿಲ್ಲೆಯ ಬೈಲಹೊಂಗಲ ನಗರದ ಸೋಮವಾರಪೇಟೆಯಲ್ಲಿ ನೂತನವಾಗಿ ಕಟ್ಟಲಾದ ಮಲಪ್ರಭಾ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಕಟ್ಟಡದ ಉದ್ಘಾಟನೆಯನ್ನು ಇತ್ತೀಚೆಗೆ ಸಂಸದರಾದ ಜಗದೀಶ್ ಶೆಟ್ಟರ್ ನೆರವೇ-ರಿಸಿದರು. ಈ ಸಂದರ್ಭದಲ್ಲಿ ವಿಶ್ವನಾಥ್ ಪಾಟೀಲ್,ಮಾಜಿ ಶಾಸಕರಾದ ಜಗದೀಶ್ ಮೆಟಗುಡ್ಡ ಮತ್ತು ಮಹಾಂತೇಶ್ ದೊಡ್ಡಗೌಡರ ,ಜೆ ಡಿ ಎಸ್ ಜಿಲ್ಲಾಧ್ಯಕ್ಷ ಶಂಕರ ಮಾಡಲಗಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿಗಳಾದ ಡಾ. ಈಶ್ವರಪ್ಪ ಗಡಾದ, ಬೈಲಹೊಂಗಲ ತಾಲೂಕ ಆರೋಗ್ಯ ಅಧಿಕಾರಿ ಡಾ. ಸಂಜಯ ಸಿದ್ದಣ್ಣವರ ಉಪಸ್ಥಿತರಿದ್ದರು.

**ವರದಿ ಮಂಜು. ಎಮ್. ಚಿಕ್ಕಣ್ಣವರ**




**ಬೆಳಗಾವಿ : ತಾಲೂಕು ಖಜಾನೆ ಇಲಾಖೆ ಸಹಾಯಕ ನಿರ್ದೇಶಕರು ಉಪ ಖಜಾನೆ ಕಾರ್ಯಾಲಯ ಬೈಲಹೊಂಗಲ ಎಸ್ .ಎಮ್.ಕಟ್ಟಿಮನಿ ಅವರೊಂದಿಗೆ ಕರುನಾಡ ಕಂದ.**


ಕರುನಾಡ ಕಂದ
ಸಂಪುಟ 04 | ಸಂಚಿಕೆ 16
ದಿನಾಂಕ: 01-07-2025 ಪುಟಗಳು:16

# ಮಹಾತಪಸ್ವಿ ಶ್ರೀ ಮುರುಗೇಂದ್ರ ಶಿವಯೋಗಿಗಳ 190ನೇ ಜಯಂತೋತ್ಸವ

**ಬೆಳಗಾವಿ :** ದಿ. 26/06/2025 ರಂದು ಅಥಣಿ ನಗರದ ಸುಕ್ಷೇತ್ರ ಗಚ್ಚಿನ ಮಠದ ಆವರಣದಲ್ಲಿ ಜಂಗಮ ಜ್ಯೋತಿ ಮಹಾತಪಸ್ವಿ ಶ್ರೀ ಮುರುಗೇಂದ್ರ ಶಿವಯೋಗಿಗಳ ಜಯಂತಿಯನ್ನು ಅತೀ ಅದ್ದೂರಿಯಿಂದ ಆಚರಣೆ ಮಾಡಲಾಯಿತು.

ಸಾಯಂಕಾಲ 6:00 ಗಂಟೆಗೆ ಧರ್ಮಸಭೆಯನ್ನು ನಡೆಸಲಾಯಿತು. ಇದರ ದಿವ್ಯ ಸಾನಿಧ್ಯವನ್ನು ಪೂಜ್ಯಶ್ರೀ ಶಿವಬಸವ ಮಹಾಸ್ವಾಮಿಗಳು ವಹಿಸಿದ್ದರು. ಪೂಜ್ಯಶ್ರೀ ಶಿವಕುಮಾರ ಮಹಾಸ್ವಾಮಿಗಳು, ಪೂಜ್ಯಶ್ರೀ ಮಹಾಲಿಂಗಯ್ಯ ಮಹಾಸ್ವಾಮಿಗಳು, ವೈದ್ಯರಾದ ರಾಮ ಕುಲಕರ್ಣಿ, ಮುಖಂಡರಾದ ಶ್ರೀ ಗಿರೀಶ್ ಬುಟಾಳಿ, ಶಿವಕುಮಾರ್ ಉಮ್ರಾಣಿ, ಮುಖಂಡರಾದ ಶಿವಾನಂದ ದಿವಾನಮಳ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಶ್ರೀ ಸಂಜು ಪಾರ್ಥನಳ್ಳಿ ಮತ್ತು ಸುಷ್ಮಾ ನಂದಗಾವ ಸಂಗಡಿಗರಿಂದ ಸುಗಮ ಸಂಗೀತ ಕಾರ್ಯಕ್ರಮ ನೆರವೇರಿತು. ಬಹಳಷ್ಟು ಜನ ಭಕ್ತಾದಿಗಳು ಮುರುಗೇಂದ್ರ ಶಿವಯೋಗಿಗಳ ಜಯಂತೋತ್ಸವದಲ್ಲಿ ಪಾಲ್ಗೊಂಡು ಶಿವಯೋಗಿಗಳ ಕೃಪೆಗೆ ಪಾತ್ರರಾದರು, ಈ ಕಾರ್ಯಕ್ರಮದಲ್ಲಿ ಅನ್ನದಾಸೋಹವೂ ನೆರವೇರಿತು.





**ವರದಿ: ವಿಠ್ಠಲ ಝೋಕಾಟೆ**

# ಕ.ರ.ವೇ. ಶ್ರೀ ಪ್ರವೀಣ್ ಕುಮಾರ ಶೆಟ್ಟಿ ಬಣದ ಘಟಕಗಳ ಉದ್ಘಾಟನೆ ಕುರಿತು ಪೂರ್ವಭಾವಿ ಸಭೆ



ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲ್ಲೂಕು ಕರ್ನಾಟಕ ರಕ್ಷಣಾ ವೇದಿಕೆ ಶ್ರೀ ಪ್ರವೀಣ್ ಕುಮಾರ್ ಶೆಟ್ಟಿ ಬಣ ಬಾಗಲಕೋಟೆ ಜಿಲ್ಲಾ ಘಟಕದ ವತಿಯಿಂದ ಬೀಳಗಿ ತಾಲೂಕು ಘಟಕ ಹಾಗೂ ಗ್ರಾಮ ಘಟಕಗಳ ಉದ್ಘಾಟನೆ ಕುರಿತು ಬೀಳಗಿ ತಾಲೂಕು ಘಟಕದ ತಂಡದ ಸದಸ್ಯರು ಜೊತೆ ಪೂರ್ವಭಾವಿ ಸಭೆ ನಡೆಸಿದರು.

ಈ ಸಂದರ್ಭದಲ್ಲಿ ಮುತ್ತುರಾಜ ಅರಗಿನಶೆಟ್ಟಿ ಕ. ರ. ವೇ ಜಿಲ್ಲಾಧ್ಯಕ್ಷರು ಬಾಗಲಕೋಟೆ, ತೌಫಿಕ್ ಮುಜಾವರ್, ನಾಗರಾಜ್ ಹಾಗೂ ಬೀಳಗಿ ತಾಲೂಕ ಘಟಕದ ವತಿಯಿಂದ ಡೊಂಗ್ರಿಸಾಬ್ ನರಗುಂದ ,ಶಾನವಾಜ್ ಮುಲ್ಲಾ, ಯಲ್ಲಪ್ಪ ಛಲವಾದಿ, ಸಲೀಂ ಮುಜಾವರ, ಕಾಜೀಸಾಬ್ ಚೌದರಿ, ಅನಿಲ , ರಾಜು ಮುಜಾವರ ಉಪಸ್ಥಿತರಿದ್ದರು.

**ವರದಿ : ಅಬ್ದುಲಸಾಬ ನಾಯ್ಕರ್**

# ನರಸಾಪುರ ಗ್ರಾಮದಲ್ಲಿ ಅಂತರರಾಷ್ಟ್ರೀಯ ಯೋಗ ದಿನ ಆಚರಣೆ



ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲೂಕ ನರಸಾಪುರ ಗ್ರಾಮದ ಸರಕಾರಿ ಮಾದರಿಯ ಪ್ರಾಥಮಿಕ ಶಾಲೆಯಲ್ಲಿ ಅಂತರರಾಷ್ಟ್ರೀಯ ಯೋಗ ದಿವಸ ಆಚರಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಆರ್. ಆರ್. ನಾಗನೂರ, ಮುಖ್ಯ ಗುರುಮಾತೆಯರು, ಶರಣಪ್ಪಗೌಡ. ಟಿ.ಪಾಟೀಲ, ಎಸ್.ಡಿ.ಎಮ್.ಸಿ.ಅಧ್ಯಕ್ಷರು ಶ್ರೀಮತಿ ಸವಿತಾ. ಎಸ್.ಅಡಪಟ್ಟಿ, ಎಸ್ ಡಿ ಎಮ್ ಸಿ ಉಪಾಧ್ಯಕ್ಷರು ಶ್ರೀ.ಎಮ್.ಟಿ.ತಳವಾರ, ಶ್ರೀಮತಿ ಆರತಿ ಕಡರಕೊಪ್ಪ, ಶ್ರೀಮತಿ ಶೈಲಜಾ ಪೂಜಾರ, ಶ್ರೀ.ಬಿ.ಡಿ.ಮುನ್ನೆನಿ, ಶ್ರೀಮತಿ ರೇಣುಕಾ ಹಾಗರಗಿ, ಶ್ರೀ ವಿಠ್ಠಲ ಆರ್.ಅಡಪಟ್ಟಿ, ಶ್ರೀಮತಿ ಪ್ರೇಮಾ.ಎಚ್.ದಶವಂತರ ಹಾಗೂ ಎಸ್ ಡಿ ಎಮ್ ಸಿ. ಸರ್ವ ಸದಸ್ಯರು,ಮುದ್ದು ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿನಿಯರು, ಭಾಗಿಯಾಗಿದ್ದರು.

**ವರದಿ ಅಬ್ದುಲಸಾಬ ನಾಯ್ಕರ**

# ವಿವಿಧ ಕಾಮಗಾರಿಗಳಿಗೆ ಶಾಸಕರಿಂದ ಭೂಮಿ ಪೂಜೆ



**ಬಾಗಲಕೋಟೆ/ ಬಾದಾಮಿ :** ಮಾನ್ಯ ಶಾಸಕರಾದ ಶ್ರೀ ಭೀಮಸೇನ ಬಿ. ಚಿಮ್ಮನಕಟ್ಟಿ ಅವರು ಬಾದಾಮಿ ಮತಕ್ಷೇತ್ರದ ನೀರಲಕೇರಿಗ್ರಾಮದಲ್ಲಿ ವಿವಿಧ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿದರು.

**ಕಾಮಗಾರಿಗಳ ವಿವರ,**

1. ನೀರಲಕೇರಿ ಗ್ರಾಮದ ಪಶು ಚಿಕಿತ್ಸಾಲಯ ಕಟ್ಟಡ ನಿರ್ಮಾಣದ ಅಂದಾಜು ಮೊತ್ತ 38 ಲಕ್ಷ.
2. ನೀರಲಕೇರಿ ಗ್ರಾಮದ ಅಂಬೇಡ್ಕರ್ ಸಮುದಾಯ ಭವನ ನಿರ್ಮಾಣದ ಅಂದಾಜು ಮೊತ್ತ 10 ಲಕ್ಷ.
3. ನೀರಲಕೇರಿ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಕೊಠಡಿ ನಿರ್ಮಾಣದ ಅಂದಾಜು ಮೊತ್ತ 8 ಲಕ್ಷ.
4. ನೀರಲಕೇರಿ ಗ್ರಾಮದ ಬೀರಲಿಂಗೇಶ್ವರ ದೇವಾಸ್ಥಾನ ಅಭಿವೃದ್ಧಿ 10 ಲಕ್ಷ.
5. ನೀರಲಕೇರಿ ಗ್ರಾಮದ ನೀರು ನಿರ್ವಹಣೆಯ ವಿಸ್ತೃತ ಯೋಜನಾ ವರದಿಯ ಅಭಿವೃದ್ಧಿಗೆ ಮಂಜೂರಾದ ಮೊತ್ತ 3ಕೋಟಿ 9 ಲಕ್ಷ.
6. ನೀರಲಕೇರಿ ಗ್ರಾಮದ ಅಮೋಘಸಿದ್ದೇಶ್ವರ ದೇವಸ್ಥಾನ ಅಭಿವೃದ್ಧಿ 10 ಲಕ್ಷ.
7. ನೀರಲಕೇರಿ ಗ್ರಾಮದ ಅಲ್ಪಸಂಖ್ಯಾತರ ಬೀದಿಯಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ 10 ಲಕ್ಷ.
8. ನೀರಲಕೇರಿ ಗ್ರಾಮದ ಪಾಂಡುರಂಗ ದೇವಸ್ಥಾನದ ಅಭಿವೃದ್ಧಿ.

**ವರದಿ ನಿಂಬಯ್ಯ ಕುಲಕರ್ಣಿ**

# ನೂತನ ಎಕ್ಸ್ ರೇ, ಡಯಾಲಿಸಿಸ್ ಯಂತ್ರೋಪಕರಣಗಳ ಲೋಕಾರ್ಪಣೆ



**ಬೆಳಗಾವಿ / ಬೈಲಹೊಂಗಲ:** ರಾಜ್ಯದಲ್ಲಿ ಮಾದರಿಯ ಆಸ್ಪತ್ರೆ ಎಂದು ಹೆಸರಾಗಿರುವ ಬೈಲಹೊಂಗಲ ಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ನೂತನ ಎಕ್ಸ್ ರೇ, ಡಯಾಲಿಸಿಸ್ ಯಂತ್ರೋಪಕರಣಗಳ ಲೋಕಾರ್ಪಣೆ ಮಾಡಿ 40 ವರ್ಷ ಮೇಲ್ಪಟ್ಟವರಿಗೆ ಉಚಿತ ಕನ್ನಡಕಗಳನ್ನು ನೀಡಿದ ನಂತರ ಶಾಸಕರಾದ ಮಹಾಂತೇಶ್ ಎಸ್ ಕೌಜಲಗಿಯವರು ಆಸ್ಪತ್ರೆಯ ಎಲ್ಲಾ ಸಿಬ್ಬಂದಿಗಳ ಸಮ್ಮುಖದಲ್ಲಿ ತಾಲೂಕಿನ ಎಲ್ಲಾ ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ತಿಳಿಯಪಡಿಸಿದರು.

ಈ ಸಂದರ್ಭದಲ್ಲಿ ಪುರಸಭೆ ಸದಸ್ಯರು ,ಪಟ್ಟಣದ ಗುರುಹಿರಿಯರು ಉಪಸ್ಥಿತರಿದ್ದರು.

**ವರದಿ ಮಂಜು. ಎಮ್. ಚಿಕ್ಕಣ್ಣವರ**

ಕರುನಾಡ ಕಂದ
ಸಂಪುಟ 04 । ಸಂಚಿಕೆ 16
ದಿನಾಂಕ: 01-07-2025 ಪುಟಗಳು:16

# ಯೋಗ ಶಿಕ್ಷಕ ಯೋಗೇಂದ್ರ ಯದಲಾಪುರೆ



ಯೋಗ ಭಾರತದ ಸನಾತನ ಧರ್ಮದ ಕೊಡುಗೆಯಾಗಿದ್ದು ಮನುಷ್ಯ ಪರಿಪೂರ್ಣ ಆರೋಗ್ಯವಂತ ವ್ಯಕ್ತಿಯಾಗಲು ಯೋಗ ತುಂಬಾ ಸಹಕಾರಿಯಾಗಿದೆ.

ಬಲವಾದ ಜೀವನ ಶೈಲಿ, ಒತ್ತಡದ ಬದುಕಿನ ಇಂದಿನ ಯುಗದಲ್ಲಿ ಪ್ರತಿಯೊಬ್ಬರೂ ಆರೋಗ್ಯದ ಬಗ್ಗೆ ಸ್ವಲ್ಪ ಗಮನ ಹರಿಸಬೇಕಾದ ಅನಿವಾರ್ಯತೆ ಎದುರಾಗಿದೆ, ಆರೋಗ್ಯವೇ ಭಾಗ್ಯ ಕೇವಲ ಮಾತಿನಲ್ಲಷ್ಟೆ ಅಲ್ಲ ಅದನ್ನು ಕಾರ್ಯರೂಪಕ್ಕೆ ತರಬೇಕಾದ ಸಂಕಲ್ಪ ಪ್ರತಿಯೊಬ್ಬರೂ ಮಾಡಬೇಕಾಗಿದೆ.

ಮಾನವ ಕುಲವೊಂದೇ ಧರ್ಮ, ಜಾತಿಯಿಂದು ಭೇದ ಮಾಡದೆ ಎಲ್ಲರನ್ನೂ ಸಮನಾಗಿ ತಿಳಿದು ಯಾವುದೇ ಪ್ರತಿಫಲ ಬಯಸದೆ “ ಯೋಗವೇ ಜೀವ ಜೀವನವೇ ಯೋಗ “ವಾಗಿಸಿದ ಸುಮಾರು ಜನರಿಗೆ ಯೋಗವನ್ನು ಹೇಳಿಕೊಟ್ಟು ಅವರ ಆರೋಗ್ಯ ಬದುಕಿಗೆ ಅಡಿಪಾಯ ಹಾಕೋ ನಿಟ್ಟಿನಲ್ಲಿ ನಿಸ್ವಾರ್ಥ ಸೇವೆ ಮಾಡುತ್ತಿರುವರಲ್ಲಿ ಯೋಗ ಶಿಕ್ಷಕ ಯೋಗೇಂದ್ರ ಯದಲಾಪುರೆಯವರು ಒಬ್ಬರು.



ಬೀದರ್ ಜಿಲ್ಲೆಯ ಬೀದರ್ ತಾಲೂಕಿನ ಯದಲಾಪುರೆ ಗ್ರಾಮದ ಸಾಮಾನ್ಯ ಕೃಷಿ ಕುಟುಂಬದಲ್ಲಿ ಜನಿಸಿದ ಯೋಗೇಂದ್ರ ಯದಲಾಪುರೆಯವರು ಪ್ರಾಥಮಿಕ ಶಿಕ್ಷಣವನ್ನು ಸ್ವಗ್ರಾಮ, ಪ್ರೌಢ ಶಿಕ್ಷಣವನ್ನು ಸಮೀಪದ ಕಮಠಾಣ ಶಾಲೆಯಲ್ಲಿ ಹಾಗೂ ಮುಂದಿನ ಅಭ್ಯಾಸವನ್ನು ಬೀದರನಲ್ಲಿ ಮುಗಿಸಿ ನಂತರ ಶಾಲಾ ಶಿಕ್ಷಕರಾಗಿ ನೇಮಕಗೊಂಡು ಸೇವೆ ಸಲ್ಲಿಸುವ ಜೊತೆಗೆ ಬಾಬಾ ರಾಮದೇವ ಅವರ ಆಶೀರ್ವಾದ ಹಾಗೂ ಖ್ಯಾತ ವರಿಷ್ಠ, ದಕ್ಷಿಣ ಭಾರತ ಪತಂಜಲಿಯ ಯೋಗ ಸಮಿತಿಯ ಪೂಜ್ಯ ಭವರಲಾಲ ಆರ್ಯ ಅವರ ಮಾರ್ಗದರ್ಶನದಲ್ಲಿ ಯೋಗ ಶಿಬಿರಗಳನ್ನು ನಿತ್ಯ ನಿರಂತರ ಬೀದರ ಜಿಲ್ಲೆಯಾದ್ಯಂತ ಕಳೆದ ಎರಡು ದಶಕಗಳಿಂದ ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದ್ದಾರೆ. ಅದೇ ರೀತಿ ನಗರದ ವಿವಿಧ ಶಾಲೆ ಕಾಲೇಜುಗಳಲ್ಲಿ ಹಳ್ಳಿ ಹಳ್ಳಿಗಳಲ್ಲಿ ಸಂಚರಿಸಿ ಉಚಿತವಾಗಿ ಯೋಗ ಶಿಬಿರಗಳನ್ನು ನಡೆಸುವ ಮೂಲಕ ಜನರಲ್ಲಿ ಉತ್ತಮ ಆರೋಗ್ಯ ಜೀವನಶೈಲಿ ಸ್ವಾಭಿಮಾನ, ಸಮಾಜದ ಬಗ್ಗೆ ಕಳಕಳಿ ಹಾಗೂ ಯುವ ಸಮುದಾಯದಲ್ಲಿ ದೇಶಭಕ್ತಿಯ ಬೀಜವನ್ನು ಬಿತ್ತುವ, ಆಯುರ್ವೇದಿಕ್ ಗಿಡಮೂಲಿಕೆಗಳ ಉಪಯೋಗ ಜೀವನ ಕ್ರಿಯೆ ಬಗ್ಗೆ ವಿಶೇಷ ಉಪನ್ಯಾಸ ನೀಡುವ ಮೂಲಕ ಜನರಲ್ಲಿ ಆರೋಗ್ಯ ಅರಿವು ಜಾಗೃತಿಯನ್ನು ಮೂಡಿಸುವ ಪಣವನ್ನು ತೊಟ್ಟು ಅದನ್ನು ಶ್ರೀಯುತರು ಯಶಸ್ವಿಯಾಗಿ ನಿಭಾಯಿಸುತ್ತಿದ್ದಾರೆ.

ದಿನಾಲೂ ಮುಂಜಾನೆ ಸುಪ್ರಭಾತದ ಸಮಯದಲ್ಲಿ, ಆಹ್ಲಾದಕರ ವಾತಾವರಣ, ತಣ್ಣನೆಯ ಪರಿಶುದ್ಧ ಗಾಳಿ ಪ್ರಶಾಂತ ಪರಿಸರದ ಮಧ್ಯೆ ಬೀದರ್ ನಗರದ ಬಿ. ವಿ. ಬಿ ಮಹಾವಿದ್ಯಾಲಯದ ಆವರಣದಲ್ಲಿ ಚಿಕ್ಕ ಮಕ್ಕಳಿಂದ ಹಿಡಿದು ವ್ಯಾಪಾರಿಗಳಿಗೆ, ಸರ್ಕಾರಿ ನೌಕರರಿಗೆ, ಯುವತಿಯರಿಗೆ ಹಾಗೂ ವಿದ್ಯಾರ್ಥಿಗಳಿಗೆ ಪ್ರಾಣಾಯಾಮ, ಧ್ಯಾನ ಯೋಗ ಕಲಿಸುವುದರ ಮುಖಾಂತರ ಜನಮಾನಸದಲ್ಲಿ ತಮ್ಮ ಹೆಸರನ್ನು ಅಚ್ಚೊತ್ತಿದ್ದಾರೆ.

**ಡಾ. ವಿಜಯ ಸಂಕೇಶ್ವರ ಪ್ರೇರಣೆ**

ಸಮಾಜಕ್ಕೆ ಏನಾದರೂ ಕೊಡಗೆ ನೀಡಬೇಕು ಎಂಬುದು ನನ್ನ ಆಶಯವಾಗಿತ್ತು ಅದನ್ನು ಯೋಗದ ರೂಪದಲ್ಲಿ ನನ್ನ ಅಳಿಲು ಸೇವೆ ಸಲ್ಲಿಸುತ್ತಿರುವೆ ಅನ್ನುವ ಸಾರ್ಥಕತೆ ಭಾವನೆಯನ್ನು ವ್ಯಕ್ತಪಡಿಸಿರುವ ಶ್ರೀಯುತರಿಗೆ ವಿ ಆರ್ ಎಲ್ ಸಮೂಹ ಸಂಸ್ಥೆಯ ಅಧ್ಯಕ್ಷರು ಡಾ. ವಿಜಯ ಸಂಕೇಶ್ವರ ಅವರ ಪ್ರೋತ್ಸಾಹ ನುಡಿಗಳಾದ “ಪರಿಶ್ರಮ ಮತ್ತು ಪ್ರಾಮಾಣಿಕತೆಯಿಂದ ನಿತ್ಯ ಕೆಲಸ ಮಾಡಿದ ವ್ಯಕ್ತಿ ಉನ್ನತ ಸ್ಥಾನಕ್ಕೆ ಹೋಗುತ್ತಾರೆ” ಅನ್ನುವ ಅವರ ಮಾತುಗಳೇ ಸದಾ ಸ್ಫೂರ್ತಿದಾಯಕವೆಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ.

ಶ್ರೀಯುತ ಯೋಗೇಂದ್ರರವರು ಯು. ಎ. ಈ. ಮತ್ತು ಅಭುದಾಬಿಯಲ್ಲಿ ಕೂಡಾ ಪ್ರವಾಸ ಮಾಡಿ ಅಲ್ಲಿ ಕೂಡಾ ಯೋಗ ಶಿಬಿರವನ್ನು ನಡೆಸಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಕೂಡಾ ಭಾರತದ ಸಂಸ್ಕೃತಿ, ಆಚಾರ ವಿಚಾರ ಮತ್ತು ಯೋಗದ ಮಹತ್ವದ ಕುರಿತು ತಮ್ಮ ಅಸ್ಮಿತೆಯನ್ನು ಮೆರೆದಿರುವ ಧನ್ಯತಾ ಭಾವವನ್ನು ವ್ಯಕ್ತಪಡಿಸುತ್ತಾರೆ.

**ಪರಿಸರ ಪ್ರೇಮಿ**

ಯೋಗೇಂದ್ರ ಯದಲಾಪುರೆಯವರು ಪರಿಸರ ಪ್ರೇಮಿ ಕೂಡಾ ಆಗಿದ್ದು ಮಕ್ಕಳಿಗೆ ಶಿಕ್ಷಣ ಮತ್ತು ಯೋಗದ ಜೊತೆ ಜೊತೆಗೆ ಪರಿಸರ ಸಂರಕ್ಷಣೆ ಜಾಗೃತಿಯನ್ನು ಮೂಡಿಸುವ ಕೈಂಕರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಶಾಲೆಗಳಲ್ಲಿ ವಿವಿಧ ರೀತಿ ತರಕಾರಿಗಳ ಜೊತೆ ಜೊತೆಗೆ ಗಿಡಮರಗಳನ್ನು ಬೆಳೆಸಿ ಪೋಷಿಸಿ ತಾವೇ ಬೆಳೆಸಿದ ತಾಜಾ ತರಕಾರಿಯನ್ನು ಶಾಲಾ ಮಕ್ಕಳ ಬಿಸಿಯೂಟಕ್ಕೆ ಬಳಸುತ್ತಾರೆ. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸೇರಿದಂತೆ ಹಲವಾರು ಸಂಘ ಸಂಸ್ಥೆಗಳೊಂದಿಗೆ ನಿಕಟವಾದ ಸಂಬಂಧ ಹೊಂದಿರುವ ಇವರು ಇದುವರೆಗೆ ವಿವಿಧಡೆ ಸಾವಿರಾರು ಗಿಡಮರಗಳನ್ನು ಹಚ್ಚಿ ಪರಿಸರ ಪ್ರಜ್ಞೆ ಮೆರೆದಿದ್ದಾರೆ.

**ಸಾಹಿತಿಗಳಾಗಿ...**

ನಾಡು ನುಡಿ ಜಲ ಶಾಂತಿ ಸೌಹಾರ್ದತೆ ವಿಷಯವಾಗಿ ಅಪಾರ ಕಾಳಜಿ ಹೊಂದಿರುವ ಶ್ರೀಯುತರು ತಮ್ಮ ವೃತ್ತಿ ಶಿಕ್ಷಣ ಜೊತೆಗೆ ಮಕ್ಕಳಲ್ಲಿ ಸಾಹಿತ್ಯ, ಸಂಸ್ಕಾರ ದೇಶಾಭಿಮಾನದ ಅರಿವು ಮೂಡಿಸುತ್ತಿರುವ ಜೊತೆ ಜೊತೆಗೆ ಕಥೆ, ಕವನ, ಲೇಖನ, ಚುಟುಕುಗಳು ಬರೆಯುವ ಮೂಲಕ ಒಬ್ಬ ಸೃಜನಶೀಲ ಬರಹಗಾರರಾಗಿ, ಕಾರ್ಯಕ್ರಮಗಳ ನಿರೂಪಕರಾಗಿ, ಕವಿಗಳಾಗಿ ಸಾಹಿತಿಗಳಾಗಿ ಸಾಹಿತ್ಯ ಕ್ಷೇತ್ರದಲ್ಲಿ ಕೂಡಾ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

**ಸೇವೆಗಳು**

ಶ್ರೀ ಯೋಗೇಂದ್ರ ಯದಲಾಪುರೆಯವರು ಸದ್ಯ ಬೀದರ ಜಿಲ್ಲಾ ಪತಂಜಲಿ ಯೋಗ ಸಮಿತಿ ಜಿಲ್ಲಾಧ್ಯಕ್ಷರಾಗಿ ಸೇವೆ ಸಲ್ಲಿಸುವ ಜೊತೆಗೆ ಕರ್ನಾಟಕ ಸರ್ಕಾರಿ ನೌಕರರ ಸಂಘದ ಜಿಲ್ಲಾ ಕಾರ್ಯದರ್ಶಿ, ಕರ್ನಾಟಕ ಸಾಹಿತ್ಯ ಪರಿಷತ್ ಗೌರವ ಕಾರ್ಯದರ್ಶಿ, ಶರಣ ಸಾಹಿತ್ಯ ಪರಿಷತ್ ತಾಲೂಕು ಅಧ್ಯಕ್ಷರು, ಜ್ಞಾನ ವಿಜ್ಞಾನ ಸಮಿತಿಯ ಕೋಶಾಧ್ಯಕ್ಷರು, ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಸದಸ್ಯರು, ಜಾನಪದ ಪರಿಷತ್ ನಗರ ಘಟಕದ ಅಧ್ಯಕ್ಷರು, ಇಂಟರ್ನ್ಯಾಷನಲ್ ನ್ಯಾಚುರೋಪತಿ ಆರ್ಗನೈಜೇಷನ್ ಜಿಲ್ಲಾ ಉಪಾಧ್ಯಕ್ಷರು ಹಲವಾರು ಸಂಘ ಸಂಸ್ಥೆಗಳ ಪ್ರತಿನಿಧಿಯಾಗಿ ಕಾರ್ಯ ಚಟುವಟಿಕೆಗಳನ್ನು ನಿಭಾಯಿಸುತ್ತಿದ್ದಾರೆ.

**ಪ್ರಶಸ್ತಿ ಮತ್ತು ಪುರಸ್ಕಾರಗಳು**

ಶ್ರೀ ಯೋಗೇಂದ್ರರವರ ಅವಿರತ ಸಮಾಜ ಮುಖಿ ಸೇವೆಯನ್ನು ಗುರುತಿಸಿ ಕನ್ನಡ ಪರ ಸಂಘಟನೆಗಳು ಸೇರಿದಂತೆ ಹಲವಾರು ಸಂಘ ಸಂಸ್ಥೆಗಳು ಗೌರವ ಪುರಸ್ಕಾರ ನೀಡಿ ಗೌರವಿಸಿವೆ. ಆದರ್ಶ ಶಿಕ್ಷಕ ಪ್ರಶಸ್ತಿ, ರೋಟರಿ ಕ್ಲಬ್ ನ್ಯಾಷನಲ್ ಬಿಲ್ಡರ್ ಪ್ರಶಸ್ತಿ, ಯೋಗರತ್ನ ಪ್ರಶಸ್ತಿ, ಉತ್ತಮ ಸಮಾಜ ಸೇವಕ ಪ್ರಶಸ್ತಿ, ಪ್ರಶಸ್ತಿ, ಯೋಗಿರಾಜ ಪ್ರಶಸ್ತಿ ಹಾಗೂ ಜಿಲ್ಲಾ ಮತ್ತು ರಾಜ್ಯಮಟ್ಟದ ಪ್ರಶಸ್ತಿಗಳಿಗೆ ಪಾತ್ರರಾಗಿರುವ ಇವರಿಗೆ ವಿವಿಧ ಮಠಾಧೀಶರು, ಗಣ್ಯರು ಸನ್ಮಾನಿಸಿ ಗೌರವಿಸಿ ಬೆನ್ನು ತಟ್ಟಿದ್ದಾರೆ.

ಇಂತಹ ನಿಷ್ಕಲ್ಮಶ, ನಿಸ್ವಾರ್ಥದಿಂದ ಸೇವೆ ಸಲ್ಲಿಸುತ್ತಿರುವ ಶ್ರೀ ಯೋಗೇಂದ್ರ ಯದಲಾಪುರೆಯವರಿಗೆ ಸಮಾಜ, ಸರ್ಕಾರ ಬೆನ್ನು ತಟ್ಟಿ ಇನ್ನೂ ಉನ್ನತ ಮಟ್ಟದ ಪ್ರಶಸ್ತಿ ಪುರಸ್ಕಾರ ನೀಡಲೆಂದು ಹಾರೈಸುತ್ತೇನೆ...




ಓಂಕಾರ ಪಾಟೀಲ
ಕಾರ್ಯದರ್ಶಿಗಳು
ಜಿಲ್ಲಾ ಮಕ್ಕಳ ಸಾಹಿತ್ಯ ಪರಿಷತ್, ಬೀದರ್
ಮೊ:6360413933.

# ಹುಟ್ಟು ಹಬ್ಬದ ನಿಮಿತ್ತವಾಗಿ ಹಣ್ಣು ಹಂಪಲು ವಿತರಣೆ



ಬೆಳಗಾವಿ ಜಿಲ್ಲೆಯ ಬೈಲಹೊಂಗಲ ಮತಕ್ಷೇತ್ರದ ಮಾಜಿ ಶಾಸಕರಾದ ಡಾ. ವಿಶ್ವನಾಥ್ ಐ. ಪಾಟೀಲ್ ಅವರ 61ನೇ ಹುಟ್ಟು ಹಬ್ಬದ ನಿಮಿತ್ಯವಾಗಿ ತಾಲೂಕ ಸಾರ್ವಜನಿಕ ಸರ್ಕಾರಿ ಆಸ್ಪತ್ರೆಯಲ್ಲಿದ್ದ ರೋಗಿಗಳಿಗೆ ಹಣ್ಣು ಹಂಪಲ ನೀಡುವುದರೊಂದಿಗೆ, ಸಂಸ್ಕೃತಿ ನಿರಾಶ್ರಿತರ ಫೌಂಡೇಶನ್ ದಲ್ಲಿರುವ ಜನರಿಗೂ ಸಹ ಅಭಿಮಾನಿ ಬಳಗದಿಂದ ಹಣ್ಣು ಹಂಪಲ ನೀಡುವುದರ ಮೂಲಕ ತಮ್ಮ ಹುಟ್ಟುಹಬ್ಬವನ್ನು ಆಚರಿಸಲಾಯಿತು.

ವರದಿ ಮಂಜು. ಎಮ್. ಚಿಕ್ಕಣ್ಣವರ



ಬೆಳಗಾವಿ ಜಿಲ್ಲೆಯ ಯರಗಟ್ಟಿ ತಾಲೂಕಾ ತಹಶೀಲ್ದಾರ ಹಾಗೂ ತಾಲೂಕ ಕಾರ್ಯನಿರ್ವಾಹಕ ದಂಡಾಧಿಕಾರಿಗಳಾದ ಶ್ರೀ ಎಮ್. ವಿ. ಗುಂಡಪ್ಪಗೋಳ ಅವರೊಂದಿಗೆ ಕರುನಾಡ ಕಂದ.

ಕರುನಾಡ ಕಂದ
ಸಂಪುಟ 04 । ಸಂಚಿಕೆ 16
ದಿನಾಂಕ: 01-07-2025 ಪುಟಗಳು:16

# ಕೇಂದ್ರ ಪುರಸ್ಕೃತ ಅಮೃತ 2.0 ಯೋಜನೆಗೆ ಶಂಕುಸ್ಥಾಪನೆ !

## ಗುರುಮಠಕಲ್ ಸಮಗ್ರ ಅಭಿವೃದ್ಧಿಗೆ ಆಡಳಿತ ಕಛೇರಿಗಳನ್ನು ತರುವೆ- ಕಂದಕೂರು

**ಯಾದಗಿರಿ/ ಗುರುಮಠಕಲ್:** ಅಮೃತ 2.0 ಯೋಜನೆ ಮಾಜಿ ಶಾಸಕ ದಿ. ನಾಗನಗೌಡ ಕಂದಕೂರು ಅವರ ಕನಸಿನ ಯೋಜನೆಯಾಗಿದ್ದು ಅವರ ಅವಧಿಯಲ್ಲಿಯೇ ಅನುಮೋದನೆಯಾಗಿತ್ತು, ಬಹು ಪ್ರಯತ್ನದ ನಂತರ 24.75 ಕೋಟಿ ರೂ. ವೆಚ್ಚದ ಕುಡಿಯುವ ನೀರಿನ ಯೋಜನೆ ಈಗ ಕಾರ್ಯರೂಪಕ್ಕೆ ಬರುತ್ತಿರುವುದು ಸಂತೋಷದ ವಿಷಯ ಎಂದು ಶಾಸಕ ಶರಣಗೌಡ ಕಂದಕೂರು ಹೇಳಿದರು.

ಪಟ್ಟಣದ ಹೊರವಲಯದಲ್ಲಿ ಬುಧವಾರ ನಗರಾಭಿವೃದ್ಧಿ ಇಲಾಖೆ ಹಾಗೂ ಯಾದಗಿರಿ ಜಿಲ್ಲಾಡಳಿತ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಬೆಂಗಳೂರು ಮತ್ತು ಗುರುಮಠಕಲ್ ಪುರಸಭೆ ಸಂಯುಕ್ತಾಶ್ರಯದಲ್ಲಿ ಗುರುಮಠಕಲ್ ಪಟ್ಟಣಕ್ಕೆ ಭೀಮಾನದಿ ಮೂಲದಿಂದ ಕೇಂದ್ರ ಪುರಸ್ಕೃತ ಅಮೃತ 2.0 ಯೋಜನೆಯಡಿಯಲ್ಲಿ ಕುಡಿಯುವ ನೀರು ಸರಬರಾಜು ಯೋಜನೆಯ ಅಂದಾಜು ಮೊತ್ತ 2475 ಲಕ್ಷ ರೂ. ಗಳ ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು.

ಈ ಯೋಜನೆಯಡಿ ಪ್ರತಿ ನಿತ್ಯ ಗುರುಮಠಕಲ್ ಪಟ್ಟಣದ ವ್ಯಾಪ್ತಿಯಲ್ಲಿ ಬರುವ 23 ವಾರ್ಡಗಳ 25,966 ಜನಸಂಖ್ಯೆಗೆ 135 ಲೀಟರ್ ಪ್ರತಿದಿನ ಪ್ರತಿಯೊಬ್ಬರಿಗೂ ಸರಬರಾಜು ಮಾಡುವುದರ ಜೊತೆಗೆ ಮುಂದಾಲೋಚನೆ ದೃಷ್ಟಿಯಿಂದ 2055 ನೆಯ ಸಾಲಿನ ಜನಸಂಖ್ಯೆಗೆ ಅನುಗುಣವಾಗಿ ಸಾರ್ವಜನಿಕರು ಕುಡಿಯುವ ನೀರಿನ ಪ್ರಯೋಜನ ಪಡೆಯಲಿದ್ದಾರೆ ಎಂದು ಅವರು ಹೇಳಿದರು.

ಗುರುಮಠಕಲ್ ಸಮಗ್ರ ಅಭಿವೃದ್ಧಿಗೆ ಬೇಕಾಗುವ ಎಲ್ಲಾ ಕಚೇರಿಗಳ ಸ್ಥಾಪನೆಗೆ ಸಂಬಂಧ ಪಟ್ಟ ಸಚಿವರುಗಳ ಜೊತೆ ಚರ್ಚಿಸಿದ್ದು ಶೀಘ್ರದಲ್ಲಿ ಸಮುದಾಯ ಆರೋಗ್ಯ ಕೇಂದ್ರಕ್ಕೆ ಹೆಚ್ಚುವರಿಯಾಗಿ 50 ಬೆಡ್ ಒದಗಿಸಲಾಗುವುದು,





> **"ಯೋಜನೆ ಅನುಮೋದನೆಗೆ ಸಹಕರಿಸಿದ ಸಚಿವ ಸುರೇಶ ಭೈರತಿ ಹಾಗೂ ಮಾಜಿ ಕಾರ್ಯದರ್ಶಿ ಅಜಯ ನಾಗಭೂಷಣ ಅವರಿಗೆ ವಿಶೇಷ ಅಭಿನಂದನೆ ವ್ಯಕ್ತಪಡಿಸಿ, ಗುರುಮಠಕಲ್ ಪಟ್ಟಣಕ್ಕೆ ನೂತನ ಪೊಲೀಸ್ ಠಾಣೆ, ನೊಂದಣಿ ಕಾರ್ಯಾಲಯ, ಜಿಇಓ ಕಛೇರಿಗಳನ್ನು ತರಲು ಸಂಬಂಧ ಪಟ್ಟ ಸಚಿವರೊಂದಿಗೆ ಮಾತನಾಡಲಾಗಿದ್ದು ತಾಲೂಕಿನ ಸಮಗ್ರ ಅಭಿವೃದ್ಧಿಗೆ ಕಾರ್ಯನಿರ್ವಹಿಸುವೆ".**
> **-ಶರಣಗೌಡ ಕಂದಕೂರು**
> **ಶಾಸಕರು, ಗುರುಮಠಕಲ್ ಮತಕ್ಷೇತ್ರ.**

ಒಂದೇ ಸೂರಿನಡಿ ಎಲ್ಲಾ ಇಲಾಖೆ ಕಾರ್ಯ ನಿರ್ವಹಿಸಲು ಪ್ರಜಾ ಸೌಧ ನಿರ್ಮಿಸಲು ಹಳೆಯ ಪೊಲೀಸ್ ವಸತಿ ಗೃಹ ಸ್ಥಳದಲ್ಲಿ 8.60 ಕೋಟಿ ವೆಚ್ಚದಲ್ಲಿ ಮೊದಲ ಹಂತದ ಅನುದಾನ ಮಂಜೂರಾಗಿದೆ, ರಿಂಗ್ ರೋಡ್ ನಿರ್ಮಾಣಕ್ಕೆ ಎಲ್ಲಾ ತರಹದ ಸಿದ್ದತೆ ನಡೆದಿದೆ. ಅಪರಾಧ ತಡೆಗೆ ಈಗಾಗಲೇ ತಾಲೂಕಿನಾದ್ಯಂತ 60ಕ್ಕೂ ಹೆಚ್ಚು ಸಿಸಿಟಿವಿ ಕ್ಯಾಮರಾ ಅಳವಡಿಸಿರುವ ಕುರಿತಾಗಿ ಅವರು ತಿಳಿಸಿದರು.

ಈ ವೇಳೆ ಪುರಸಭೆ ಅಧ್ಯಕ್ಷೆ ಜಯಶ್ರೀ ಪೊಲೀಸ್ ಪಾಟೀಲ್, ಪುರಸಭೆ ಉಪಾಧ್ಯಕ್ಷೆ ರೇಣುಕಾ ಪಡಿಗೆ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಕಾರ್ಯಪಾಲಕ ಅಭಿಯಂತರರು ನರಸಿಂಹರಡ್ಡಿ ಎನ್, ಯಾದಗಿರಿ ಕರ್ನಾಟಕ ನಗರ ನೀರು ಸರಬರಾಜು, ಗುರುಮಠಕಲ್ ತಾಲೂಕ ಪಂಚಾಯತ್ ಕಾರ್ಯ ನಿರ್ವಾಹಕ ಅಧಿಕಾರಿಗಳಾದ ಅಂಬರೀಷ ಪಾಟೀಲ, ಶರಣಗೌಡ ಎಇ, ವೀರಣ್ಣ ದೊಡಮನಿ ಗುರುಮಠಕಲ್ ಆರಕ್ಷಕ ನಿರೀಕ್ಷಕರು, ಶಾಂತ ಗೌಡ ಬಿರಾದಾರ ತಹಸೀಲ್ದಾರ್, ಭಾರತೀ ದಂಡೋತಿ ಮುಖ್ಯಾಧಿಕಾರಿ, ಶರಣ ಬಸವ ಸಿಪಿಡಿಓ, ಸುಭಾಷ್ ಕಟಕಟಿ ಜೆಡಿಎಸ್ ಮುಖಂಡರಾದ ಶರಣು ಅವಂಟಿ, ಗುರುಮಠಕಲ್ ಪುರಸಭೆ ಕಿ. ಅಭಿಯಂತರರು ಶ್ರೀ ಅಬ್ದುಲ್ ಅಲೀಮ್, ಪುರಸಭೆ ಸದಸ್ಯರು ಮತ್ತು ನಾಮ ನಿರ್ದೇಶಕ ಸದಸ್ಯರು ಕಾರ್ಯಕ್ರಮದಲ್ಲಿ ಹಾಜರಿದ್ದರು.

**ವರದಿ ಜಗದೀಶ್ ಕುಮಾರ್ ಭೂಮಾ**

# ವರುಣ್ ಚಕ್ರವರ್ತಿ ಅವರ ಮನವಿಗೆ ಸ್ಪಂದಿಸಿದ ಪೊಲೀಸ್ ಇಲಾಖೆ

## ವಿದ್ಯಾರ್ಥಿಗಳಿಗೆ ಪೋಕ್ಸೋ ಕಾಯ್ದೆ ಕಾನೂನು ಅರಿವು ಮೂಡಿಸುವ ಬಗ್ಗೆ ವರುಣ್ ಚಕ್ರವರ್ತಿ ಅವರ ಮನವಿಗೆ ಸ್ಪಂದಿಸಿದ ಪೊಲೀಸ್ ಇಲಾಖೆ



ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿ ಅವರಿಗೆ ವರುಣ್ ಚಕ್ರವರ್ತಿ ಅವರು ಮನವಿ ಮಾಡಿದಂತೆ ಅಪ್ರಾಪ್ತ ಹೆಣ್ಣು ಮಕ್ಕಳ ರಕ್ಷಣೆಗಾಗಿ ರೂಪಿಸಿರುವ ಪೋಕ್ಸೋ ಕಾಯ್ದೆ ಬಗ್ಗೆ ವಿದ್ಯಾರ್ಥಿಗಳು ಅರಿವು ಹೊಂದುವ ಅಗತ್ಯ ಇದೆ ಹೆಣ್ಣು ಮಕ್ಕಳ ಮೇಲೆ ನಿರಂತರವಾಗಿ ನಡೆಯುತ್ತಿದ್ದ ಅತ್ಯಾಚಾರ, ದೌರ್ಜನ್ಯ ತಡೆಗಟ್ಟಲು 2012ರಲ್ಲಿ ಅಂದಿನ ಕೇಂದ್ರ ಸರ್ಕಾರ ಪೋಕ್ಸೋ ಕಾಯ್ದೆಯನ್ನು ಜಾರಿಗೊಳಿಸಿತು. ಅಪ್ರಾಪ್ತ ಹೆಣ್ಣು ಮಕ್ಕಳ ರಕ್ಷಣೆಗಾಗಿ ಈ ಕಾಯ್ದೆ ರೂಪಿಸಲಾಗಿದೆ ಅಪ್ರಾಪ್ತ ಹೆಣ್ಣು ಮಕ್ಕಳನ್ನು ಚುಡಾಯಿಸುವುದು, ಕೈ ಸನ್ನೆ ಮಾಡುವುದು, ಮುಟ್ಟಿ ಮಾತನಾಡಿಸುವುದು ಸೇರಿದಂತೆ ದುರ್ನಡತೆ ತೋರುವುದು, ಪೋಕ್ಸೋ ಕಾಯ್ದೆ ಪ್ರಕಾರ ಅಪರಾಧ.

ಈ ನಿಟ್ಟಿನಲ್ಲಿ ಹೆಣ್ಣು ಮಕ್ಕಳಿಗೆ ಅರಿವು ಮೂಡಿಸಬೇಕು. ಬಾಲಕಿಯರ ಮೇಲಿನ ದೌರ್ಜನ್ಯ ಪ್ರಕರಣಗಳು ಹೆಚ್ಚುತ್ತಿವೆ, ಪೋಕ್ಸೋ ಅಡಿ ಅಂತಹ ಅಪರಾಧಗಳಿಗೆ ಶಿಕ್ಷೆಯಾಗುತ್ತದೆ. ಈ ಬಗ್ಗೆ ಶಾಲಾ ಕಾಲೇಜುಗಳಲ್ಲಿ ಹೆಚ್ಚಿನ ಅರಿವು ಮೂಡಿಸಬೇಕು. ಶಾಲಾ ಮತ್ತು ಕಾಲೇಜು ಹಂತದಲ್ಲಿ ವಿದ್ಯಾರ್ಥಿಗಳಿಗೆ ಹೆಚ್ಚಿನ ತಿಳಿವಳಿಕೆ ಮೂಡಿಸಬೇಕಿದೆ. ಲೈಂಗಿಕ ದೌರ್ಜನ್ಯಕ್ಕೆ ಒಳಗಾದಲ್ಲಿ ಕಾಯ್ದೆ ಅನ್ವಯ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ, ಜತೆಗೆ ಕುಟುಂಬದ ಮರ್ಯಾದೆ ಹೋಗಲಿದೆ, ಶಿಕ್ಷಕರು, ಉಪನ್ಯಾಸಕರು ಈ ಬಗ್ಗೆ ಮಕ್ಕಳಿಗೆ ಬುದ್ದಿವಾದ ಹೇಳಬೇಕು. ಕಾನೂನು ಅರಿವು ನೀಡಿದಲ್ಲಿ ಅಂಥ ಕೃತ್ಯಕ್ಕೆ ಕಡಿವಾಣ ಹಾಕಬಹುದು.

**ಜವಾಬ್ದಾರಿಯುತ ಇಲಾಖೆಯವರು ಮಕ್ಕಳಿಗೆ ಕಾಯ್ದೆಗಳ ಬಗ್ಗೆ ತಿಳಿ ಹೇಳುವ ಕಾರ್ಯಕ್ರಮಗಳನ್ನು ಹೆಚ್ಚಾಗಿ ಹಮ್ಮಿಕೊಳ್ಳಬೇಕು**

1) ತಾಲೂಕಿನ ಎಲ್ಲಾ ಶಾಲಾ ಕಾಲೇಜುಗಳಿಗೆ, ಪದವಿ ಪೂರ್ವ ಕಾಲೇಜುಗಳ ವಿದ್ಯಾರ್ಥಿಗಳಿಗೆ ಹೆಚ್ಚಿನ ಕಾನೂನು ಅರಿವು ಅಗತ್ಯವಿದೆ. ಮುಖ್ಯವಾಗಿ ಕಾಲೇಜುಗಳಲ್ಲಿ ಬಾಲಕಿಯರು, ಟೀನೇಜ್ ಪ್ರೆಗ್ನೆನ್ಸಿ ಪ್ರಕರಣಗಳು ಹೆಚ್ಚು ಕಂಡು ಬರುತ್ತಿವೆ. ಆದ್ದರಿಂದ ಎಲ್ಲಾ ಪ್ರೌಢಶಾಲೆ, ಪದವಿ ಪೂರ್ವ ಕಾಲೇಜುಗಳು, ಐ.ಟಿ.ಐ. ಡಿಪ್ಲೋಮೋ ಮತ್ತು ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಪೋಕ್ಸೋ ಕುರಿತಂತೆ ಹೆಚ್ಚಿನ ಅರಿವು ಮೂಡಿಸಬೇಕು".

2) ಈ ಕಾಲೇಜುಗಳ ಪ್ರಾಂಶುಪಾಲರಿಗೆ ಮಕ್ಕಳ ರಕ್ಷಣಾ ನೀತಿ ಮತ್ತು ಪೋಕ್ಸೋ ಕಾಯ್ದೆ ಬಗ್ಗೆ ತರಬೇತಿ ಆಯೋಜಿಸಿ, ಕಾಲೇಜುಗಳಲ್ಲಿ ಕಡ್ಡಾಯವಾಗಿ ಪಾಲಿಸಬೇಕಾದ ಕ್ರಮಗಳ ಕುರಿತಂತೆ ತಿಳಿಸಬೇಕು ಹದಿಹರೆಯದ ವಿದ್ಯಾರ್ಥಿಗಳು ಪೋಕ್ಸೋ ಪ್ರಕರಣಗಳಲ್ಲಿ ಸಿಲುಕಲು ಶೇ. 70ರಷ್ಟು ಸೋಷಿಯಲ್ ಮೀಡಿಯಾಗಳ ಬಳಕೆ ಕಾರಣವಾಗಿದ್ದು, ವಿದ್ಯಾರ್ಥಿಗಳಿಗೆ ಸುರಕ್ಷಿತ ರೀತಿಯಲ್ಲಿ ಮೊಬೈಲ್ ಬಳಕೆ ಮಾಡುವ ಬಗ್ಗೆ ಶಾಲಾ ಕಾಲೇಜುಗಳಲ್ಲಿ ಶಿಕ್ಷಕರು ಮತ್ತು ಮನೆಗಳಲ್ಲಿ ಪೋಷಕರು ಜಾಗೃತಿ ಮೂಡಿಸಬೇಕಿದೆ.

3) ತಾಲೂಕಿನ ಎಲ್ಲಾ ಶಾಲೆಗಳಲ್ಲಿ ಕಡ್ಡಾಯವಾಗಿ ಮಕ್ಕಳ ರಕ್ಷಣಾ ನೀತಿ ಬಗ್ಗೆ ತರಬೇತಿ ಆಯೋಜಿಸಿ ಶಿಕ್ಷಕರಿಗೆ ಮಾಹಿತಿ ನೀಡಬೇಕು, ಮಕ್ಕಳ ರಕ್ಷಣಾ ನೀತಿ ಸಮರ್ಪಕವಾಗಿ ಅನುಷ್ಠಾನವಾಗಬೇಕು, ಮಕ್ಕಳ ಹಕ್ಕುಗಳ ಕ್ಲಬ್ ರಚಿಸಬೇಕು. ವಿವಿಧ ಇಲಾಖೆಗಳಲ್ಲಿ ಮಕ್ಕಳಿಗಾಗಿ ರೂಪಿಸಿರುವ ಯೋಜನೆಗಳು ಮತ್ತು ಅನುದಾನದ ಸಂಪೂರ್ಣ ಸದ್ಬಳಕೆ ಆಗಬೇಕು.

4) ಆರೋಗ್ಯ ಇಲಾಖೆಯ ಮೂಲಕ ಎಲ್ಲಾ ಶಾಲಾ ಮಕ್ಕಳ ಆರೋಗ್ಯ ಪರಿಶೀಲನೆ ನಡೆಸಿ, ಅಗತ್ಯವಿದ್ದಲ್ಲಿ ಮಕ್ಕಳಿಗೆ ಹೆಚ್ಚಿನ ಚಿಕಿತ್ಸೆ ನೀಡಬೇಕು. ಹದಿ ಹರೆಯದವರ ಗರ್ಭಧಾರಣೆಯ ಕುರಿತಂತೆ ಖಾಸಗಿ ಸ್ಕ್ಯಾನಿಂಗ್ ಸೆಂಟರ್‌ಗಳಲ್ಲಿ ಪರಿಶೀಲನೆ ನಡೆಸಿ, ವರದಿಯನ್ನು ಸಂಬಂಧಪಟ್ಟ ಇಲಾಖೆಗೆ ನೀಡದೆ ಇರುವ ಬಗ್ಗೆ ಎಚ್ಚರ ವಹಿಸಬೇಕು ಮತ್ತು ಭ್ರೂಣ ಲಿಂಗಪತ್ತೆ ನಡೆಯದಂತೆ ಕೂಡಾ ಪರಿಶೀಲಿಸಬೇಕು.

5) ಗ್ರಾಮ ಪಂಚಾಯತ್ ಸೇರಿದಂತೆ ಎಲ್ಲಾ ನಗರ, ಸ್ಥಳೀಯ ಸಂಸ್ಥೆಗಳಲ್ಲಿನ ಅನುದಾನದಲ್ಲಿ 25% ನ್ನು 18 ವರ್ಷದೊಳಗಿನ ಮಕ್ಕಳಿಗೂ ಮೀಸಲಿಡಬೇಕು. 5% ವಿಕಲಚೇತನ ಅನುದಾನದಲ್ಲಿ ವಿಕಲಚೇತನ ಮಕ್ಕಳಿಗೆ ಸೌಲಭ್ಯಗಳನ್ನು ನೀಡಿ, 2% ಕ್ರೀಡಾ ಅನುದಾನದಲ್ಲಿ ಮಕ್ಕಳಿಗೆ ಸೌಲಭ್ಯಗಳನ್ನು ನೀಡಬೇಕು. ಹಾಸ್ಟೆಲ್ ವಿದ್ಯಾರ್ಥಿಗಳ ಆರೋಗ್ಯವನ್ನು ಆರೋಗ್ಯ ಇಲಾಖೆ ಮೂಲಕ ಪರೀಕ್ಷಿಸಿ, ಅವರ ಆರೋಗ್ಯಕ್ಕೆ ಒತ್ತು ನೀಡಿ, ಮಕ್ಕಳ ಮನೋವಿಕಾಸಕ್ಕೆ ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳಬೇಕು. ಎಂದು ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲೂಕು ಶಿಕ್ಷಣಾಧಿಕಾರಿ ಅವರಿಗೆ ವರುಣ್ ಚಕ್ರವರ್ತಿ ಮತ್ತು ಹರೀಶ್, ಮನೋಜ್ ನಾಯಕ್, ಅಯೂಬ್ ಮನವಿ ಮಾಡಿದರು. ಮನವಿಗೆ ತಕ್ಷಣ ಸ್ಪಂದಿಸಿದಂತ ಹಾಸನ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ, ಶಿಕ್ಷಣ ಇಲಾಖೆಗೆ ವರುಣ್ ಚಕ್ರವರ್ತಿ ಅವರು ಧನ್ಯವಾದಗಳನ್ನು ಅರ್ಪಿಸಿದ್ದಾರೆ.

**– ಕರುನಾಡ ಕಂದ**

ಕರುನಾಡ ಕಂದ
ಸಂಪುಟ 04 । ಸಂಚಿಕೆ 16
ದಿನಾಂಕ: 01-07-2025 ಪುಟಗಳು:16


# ಕರ್ನಾಟಕದ ಕಿರಣ್ ಬೇಡಿ :ಡಾ. ಶೋಭಾರಾಣಿ ವಿ.ಜೆ.
# ಬಳ್ಳಾರಿಯ ಮೊದಲ ಮಹಿಳಾ ಎಸ್.ಪಿ.

**ವಿಶೇಷ ವರದಿ : ಜಿಲಾನಸಾಬ್ ಬಡಿಗೇರ್, ಕಂಪ್ಲಿ**

ಬಳ್ಳಾರಿ ಜಿಲ್ಲೆಯ ಮೊದಲ ಮಹಿಳಾ ಪೊಲೀಸ್ ವರಿಷ್ಠಾಧಿಕಾರಿಯಾಗಿ ಡಾ. ಶೋಭಾರಾಣಿ ವಿ. ಜೆ. ಕಳೆದ ವರ್ಷದ ಜುಲೈ ನಲ್ಲಿ ಅಧಿಕಾರ ವಹಿಸಿಕೊಂಡರು.

ನಗರದ ಜಿಲ್ಲಾ ಪೊಲೀಸ್ ಕಚೇರಿಯಲ್ಲಿ ನಿರ್ಗಮಿತ ಎಸ್. ಪಿ. ರಂಜಿತ್ ಕುಮಾರ್ ಬಂಡಾರು ಅವರು ಡಾ. ಶೋಭಾರಾಣಿ ವಿ. ಜೆ. ಅವರಿಗೆ ಅಧಿಕಾರ ಹಸ್ತಾಂತರಿಸಿದರು. ಈಗ ಇವರು ರಾಜ್ಯದಲ್ಲಿ ಕರ್ನಾಟಕದ ಕಿರಣ್ ಬೇಡಿ, ಲೇಡಿ ಸಿಂಗಂ ಎಂದೇ ಪ್ರಸಿದ್ಧರಾಗಿದ್ದಾರೆ. ಹಾಗಾದರೆ ಇವರ ಪರಿಚಯ ನೋಡೋಣ

ನಟ ದರ್ಶನ್ ಬಳ್ಳಾರಿ ಜೈಲಿಗೆ ಶಿಫ್ಟಾದಾಗ ಎಸ್. ಪಿ. ಡಾ. ಶೋಭಾರಾಣಿ ವಿ.ಜೆ. ಭಾರೀ ಸುದ್ದಿಯಲ್ಲಿದ್ದರು. ದರ್ಶನ್ ಜೈಲಿಗೆ ಎಂಟ್ರಿ ಕೊಟ್ಟಾಗ ಖಡಕ್ ವಾರ್ನಿಂಗ್ ಕೊಟ್ಟಿದ್ದರು. ದರ್ಶನ್ ಬಳ್ಳಾರಿ ಜೈಲಿಗೆ ಎಂಟ್ರಿಯಾಗುತ್ತಿದ್ದಂತೆ ಶೋಭಾರಾಣಿಯವರು ಶಾಕ್ ಕೊಟ್ಟಿದ್ದರು. ಬೆಂಗಳೂರಿನಲ್ಲಿದ್ದಷ್ಟು ಫ್ರೀಯಾಗಿ ಇಲ್ಲಿರೋದಕ್ಕೆ ಆಗಲ್ಲ



ಅನ್ನೋದು ಇದ್ರಿಂದ ನಟ ದರ್ಶನ್ ಗೊತ್ತಾಗಿತ್ತು.

**ಬಳ್ಳಾರಿ ಎಸ್. ಪಿ. ಡಾ. ಶೋಭಾರಾಣಿ ವಿ. ಜೆ. ಅವರ ಪರಿಚಯ**

ಇವರನ್ನು ಕರ್ನಾಟಕದ ಕಿರಣ್ ಬೇಡಿ ಎಂದು ಕರೆಯಲಾಗುತ್ತಿದೆ. ಡಾ. ಶೋಭಾರಾಣಿ ಐ.ಪಿ.ಎಸ್ ವಿ. ಜೆ. ಇವರು ಬೆಂಗಳೂರು ಹೊರವಲಯದ ನೆಲಮಂಗಲದವರಾಗಿದ್ದು ತಾಯಿಗೆ ಮಗಳು ಡೆಂಟಿಸ್ಟ್ ಆಗಬೇಕೆಂಬ ಕನಸಿತ್ತು.

ಹೀಗಾಗಿ ತಾಯಿಯ ಕನಸನ್ನು ನೆರವೇರಿಸಲು 10ನೇ ತರಗತಿಯಾದ ನಂತರ ದಂತವೈದ್ಯರಾಗುವ ಕನಸನ್ನು ಹೊತ್ತು ವಿದ್ಯಾಭ್ಯಾಸ ಮಾಡಿದರು ದಂತವೈದ್ಯೆ ಕೂಡಾ ಆದರು.

ಹಲವಾರು ವರ್ಷ ಡೆಂಟಿಸ್ಟ್ ಆಗಿ ಕೂಡಾ ಕೆಲಸವನ್ನು ಮಾಡಿದರು. ಆದರೆ ನಾಲ್ಕು ಗೋಡೆಗಳ ಮಧ್ಯೆ ಕೂತು ಕೆಲಸ ನಿರ್ವಹಿಸುವುದರಲ್ಲಿ ಅವರಿಗೆ ತೃಪ್ತಿ ಇರಲಿಲ್ಲ ಈ ನಡುವೆ ಮನೆಯವರು ಡಾ. ಶೋಭಾರಾಣಿ ಅವರಿಗೆ ಮದುವೆಯನ್ನು ಮಾಡಿದರು.

ಡಾ. ಶೋಭಾರಾಣಿ ಅವರಿಗೆ ಪೊಲೀಸ್ ಆಗುವ ಕನಸಿತ್ತು, ಈ ನಡುವೆ ಅವರಿಗೆ ಒಂದು ಮಗು ಕೂಡಾ ಆಯ್ತು ಒಂದು ಕಡೆ ಮಗು ಇನ್ನೊಂದು ಕಡೆ ಐಪಿಎಸ್ ಪರೀಕ್ಷೆ 2010ರಲ್ಲಿ ಅಂದ್ರೆ ತಮ್ಮ ಮಗುವಿಗೆ ಒಂದು ವರ್ಷ ಇದ್ದಾಗ ಐಪಿಎಸ್ ಪರೀಕ್ಷೆಗೆ ಸಿದ್ಧತೆಯನ್ನು ನಡೆಸಿದರು.

ಇವರು ಡೆಂಟಿಸ್ಟ್ ಓದಿದ್ದು ಐಪಿಎಸ್ ಪರೀಕ್ಷೆಗೆ ಯಾವ ರೀತಿಯ ಸಹಾಯಕ್ಕೆ ಬರಲಿಲ್ಲ, ಸಣ್ಣ ಮಗು ಇದ್ದದರಿಂದ ಕೋಚಿಂಗ್ ಕ್ಲಾಸ್ ಗೆ ಹೋಗಲು ಆಗಲಿಲ್ಲ ಅದನ್ನೇ ಸವಲಾಗಿ ತೆಗೆದುಕೊಂಡು ಡಾ. ಶೋಭಾರಾಣಿ ಕಷ್ಟಪಟ್ಟು ಓದಿದರು. ಐಪಿಎಸ್ ಪ್ರಿಲಿಮ್ಸ್ ಹಾಗೂ ಮೇನ್ ಎಕ್ಸಾಮ್ ಪಾಸ್ ಮಾಡಿದ್ರು ಟ್ರೈನಿಂಗ್ ಗಾಗಿ ಸಣ್ಣ ಮಗುವನ್ನು ಬಿಟ್ಟು ಹೋಗಬೇಕಾದ ಅನಿವಾರ್ಯತೆ ಎದುರಾಯಿತು. ಆದ್ರೂ ಛಲ ಬಿಡದ ಶೋಭಾರಾಣಿ ಟ್ರೈನಿಂಗ್ ಗೆ ಹೋದರು. 2016 ನೇ ಬ್ಯಾಚ್‌ನ ಐಪಿಎಸ್ ಅಧಿಕಾರಿಯಾದರು.

ಮೊದಲಿಗೆ ಮಂಡ್ಯ ಡಿ ಎಸ್ ಪಿ ಆಗಿ ಕೆಲಸ ನಿರ್ವಹಣೆ ನಂತರ ಕಬ್ಬನ್ ಪಾರ್ಕ್ ಎಸ್ ಪಿ ಆಗಿ ಕರ್ತವ್ಯ ನಿರ್ವಹಿಸಿದ್ದರು. ನಂತರ ಪ್ರಮೋಷನ್ ಪಡೆದು ಹಾಸನದ ಹೆಚ್ಚುವರಿ ಎಸ್ ಪಿ ಆಗಿ ಬೆಂಗಳೂರು ಪಶ್ಚಿಮ ಸಂಚಾರ (ಟ್ರಾಫಿಕ್) ಪೊಲೀಸ್ ವಲಯದ ಡಿಸಿಪಿಯಾಗಿಯೂ ಕರ್ತವ್ಯ ನಿರ್ವಹಿಸಿದ್ದರು.

ಡಾ. ಶೋಭಾರಾಣಿ ವಿ. ಜೆ. ಬೆಂಗಳೂರು ಮಹಾನಗರ ಕಾರ್ಯಪಡೆ (ಬಿಎಂಟಿಎಫ್) ಎಸ್. ಪಿ. ಯಾಗಿ ಕಾರ್ಯ ನಿರ್ವಹಿಸಿದ್ದಾರೆ. ಇದಕ್ಕೂ ಮೊದಲು ತುಮಕೂರು, ಹಾಸನ, ಮಂಡ್ಯ ಜಿಲ್ಲೆಗಳಲ್ಲಿ ಹೆಚ್ಚುವರಿ ಎಸ್. ಪಿ.ಯಾಗಿ ಕರ್ತವ್ಯ ನಿರ್ವಹಿಸಿದ್ದರು. ಬೆಸ್ಕಾಂ ವಿಚಕ್ಷಣ ದಳ, ಕೇಂದ್ರ ವಲಯ ಎ. ಸಿ. ಬಿಯ ಎಸ್. ಪಿ. ಯಾಗಿದ್ದರು. ಸದ್ಯ ಇವರು ಬಳ್ಳಾರಿಯ ಮೊದಲ ಮಹಿಳಾ ಎಸ್. ಪಿ. ಯಾಗಿದ್ದಾರೆ.

ಸವಾಲು ನಿಭಾಯಿಸಿದ್ದ ಡಾ. ಶೋಭಾರಾಣಿ ವಿ. ಜೆ. 2019ರ ಜನವರಿಯಲ್ಲಿ ಸಿದ್ದಗಂಗಾ ಮಠದ ಶಿವಕುಮಾರ ಸ್ವಾಮೀಜಿಗಳು ಲಿಂಗೈಕ್ಯರಾದಾಗ ಶೋಭಾರಾಣಿ ತುಮಕೂರು ಜಿಲ್ಲೆಯ ಹೆಚ್ಚುವರಿ ಎಸ್. ಪಿ. ಯಾಗಿದ್ದರು. ಶೋಭಾರಾಣಿಯವರು ಜಿಲ್ಲೆಯಲ್ಲಿ ನಿರಂತರ ಮೂರು ದಿನಗಳ ಕಾಲ ಬಂದೋಬಸ್ತ್ ಬಿಗಿಗೊಳಿಸಿ ಯಾವುದೇ ಅಹಿತಕರ ಘಟನೆಗಳು ನಡೆದಂತೆ ಎಚ್ಚರಿಕೆ ವಹಿಸಿದ್ದರು. ಇದಕ್ಕಾಗಿ ಭಾರೀ ಮೆಚ್ಚುಗೆಗೂ ಅವರು ಪಾತ್ರರಾಗಿದ್ದರು.

ಇದರ ಜತೆಗೆ ಆನ್‌ಲೈನ್ ವಂಚನೆಗೆ ಜಿಲ್ಲೆಯಲ್ಲಿ ಬಹಳಷ್ಟು ಜನ ಕೋಟ್ಯಂತರ ಹಣ ಕಳೆದುಕೊಂಡಿದ್ದಾರೆ. ಇವುಗಳ ನಿಯಂತ್ರಣದ ನಿಟ್ಟಿಯಲ್ಲಿ ಶೋಭಾರವರು ಉತ್ತಮ ಕಾರ್ಯ ನಿರ್ವಹಿಸಿದ್ದಾರೆ. ಸಾರ್ವಜನಿಕರ ವಲಯದಲ್ಲಿ ಉತ್ತಮ ಹೆಸರನ್ನು ಸಂಪಾದಿಸುತ್ತಿದ್ದಾರೆ.





**ಬೆಳಗಾವಿ ಜಿಲ್ಲೆಯ ಯರಗಟ್ಟಿ ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿಗಳಾದ ಶ್ರೀ ಮಹೇಶ ಎಚ್. ಭಜಂತ್ರಿ ಅವರೊಂದಿಗೆ ಕರುನಾಡ ಕಂದ.**

# ಅಪ ಪ್ರಚಾರದಿಂದ ಚುನಾವಣೆ ಸೋತಿದ್ದೇನೆ ಮತ್ತೆ ಗೆದ್ದು ಉಪಮುಖ್ಯಮಂತ್ರಿಯಾಗುವೆ–ಬಾಬುರಾವ್ ಚಿಂಚನಸೂರ್

**ಯಾದಗಿರಿ/ಗುರುಮಠಕಲ್:** ಪಟ್ಟಣದ ಬ್ಲಾಕ್ ಕಾಂಗ್ರೆಸ್ ಕಚೇರಿಯಲ್ಲಿ ಕಾರ್ಯಕರ್ತರ ಕುಂದು ಕೊರತೆಗಳ ಸಭೆಯನ್ನುದ್ದೇಶಿಸಿ ಮಾಜಿ ಸಚಿವ ಹಾಗೂ ನಿಜ ಶರಣ ಅಂಬಿಗರ ಚೌಡಯ್ಯ ನಿಗಮದ ಅಧ್ಯಕ್ಷ ಬಾಬುರಾವ್ ಚಿಂಚನಸೂರ್ ಮಾತನಾಡಿ ನಂತರ ಸಾರ್ವಜನಿಕರ ಸಮಸ್ಯೆಗಳನ್ನು ಆಲಿಸಿದರು.

ಗುರುಮಠಕಲ್ ಮತಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರು ಹಲವಾರು ದಶಕಗಳಿಂದ ಪಕ್ಷಕ್ಕೆ ತಮ್ಮ ಅಭೂತಪೂರ್ವ ಪರಿಶ್ರಮದಿಂದ ಪಕ್ಷ ಸದೃಢವಾಗಿ ಬೆಳೆಯಲು ಸಹಕರಿಸಿದ್ದಾರೆ, ಕಾರ್ಯಕರ್ತರ ಕುಂದು ಕೊರತೆಗಳ ಬಗೆಹರಿಸಲು ತಿಂಗಳಿಗೆ ಎರಡು ಬಾರಿ ಸಭೆಯನ್ನು ಆಯೋಜಿಸಿ ಮನೋ ಧೈರ್ಯ ಬೆಳೆಸಿ ಪಕ್ಷದ ಸಂಘಟನೆಗೊಳಿಸಿ ಮುಂಬರುವ ಚುನಾವಣೆಯಲ್ಲಿ ಜಯಗಳಿಸುತ್ತೇನೆ, ಎಮ್. ಎಲ್. ಸಿ ಮಾಡುವಂತೆ ನಾನು ಕೇಳುವುದಿಲ್ಲ, ಅನ್ಯಮಾರ್ಗದ ದಾರಿ ಹಿಡಿಯುವುದಿಲ್ಲ ಚುನಾವಣೆ ಮುಖಾಂತರ ಆಯ್ಕೆಯಾಗಿ ಉನ್ನತ ಸ್ಥಾನಮಾನ ಗಳಿಸುವೆ ಎಂದು ಅವರು ಹೇಳಿದರು.



ಗುರುಮಠಕಲ್ ತಾಲೂಕು ಸೇರಿದಂತೆ ಮತಕ್ಷೇತ್ರದ ಎಲ್ಲಾ ಗ್ರಾಮಗಳ ಸರ್ವಾಂಗೀಣ ಅಭಿವೃದ್ಧಿಗಾಗಿ ಪರಿಶ್ರಮ ಪಡುವೆ ಹಾಗೂ ಅದಕ್ಕೆ ಬೇಕಾಗಿರುವ ಅನುದಾನವನ್ನು ನಾನು ರಾಜ್ಯದ ವರಿಷ್ಠ ನಾಯಕರೊಂದಿಗೆ ಚರ್ಚಿಸಿ ಕಾರ್ಯ ರೂಪದ ಮುಖಾಂತರ ಅಭಿವೃದ್ಧಿಗೆ ನಾಂದಿ ಹಾಡಲು ಮುಂದಾಗಿದ್ದೆ, ಅಪಪ್ರಚಾರದ ಮೂಲಕ ನನ್ನನ್ನು ಚುನಾವಣೆಯಲ್ಲಿ ಸೋಲಿಸಿರಬಹುದು ನಾನು ಚುನಾವಣೆಯಲ್ಲಿ ವಿಜಯಶಾಲಿಯಾಗಿದ್ದರೆ ಸದ್ಯ ಉನ್ನತ ಸ್ಥಾನಮಾನದ ಜೊತೆ ಕ್ಷೇತ್ರದ ಅಭಿವೃದ್ಧಿಯನ್ನು ಸಹ ಶರವೇಗದಲ್ಲಿ ಮಾಡಲು ಸಹಕಾರಿಯಾಗುತ್ತಿತ್ತು ಆದ–'ರೆ ದುರದೃಷ್ಟವಶಾತ್ ಜನ ಕೈಹಿಡಿಯಲಿಲ್ಲ ಎಂದು ಅವರು ವಿಷಾಧ ವ್ಯಕ್ತಪಡಿಸಿದರು.

ಚುನಾವಣೆಯಲ್ಲಿ ಸೋತಿರಬಹುದು ಆದ–'ರೆ ಜನಸೇವೆ ಮಾಡುವ ಇಚ್ಛಾಶಕ್ತಿ ಕಡಿಮೆಯಾಗಿಲ್ಲ, ಕ್ಷೇತ್ರದ ಜನತೆಯ ಜೊತೆ ಸದಾ ಸಕ್ರಿಯವಾಗಿ ಪಾಲ್ಗೊಂಡು ನಿಮ್ಮ ಸೇವೆ ಮಾಡುತ್ತೇನೆ ಎಂದು ಆಶಾ ನುಡಿ ನುಡಿದರು. ಮಾಜಿ ಕಾಡಾ ನಿರ್ದೇಶಕ ವಿಜಯ ಕುಮಾರ್ ನೀರೆಟಿ ನಿರೂಪಣೆ ಮಾಡಿದರು, ಕೃಷ್ಣ ಚೆಪೆಟ್ಲಾ ಬ್ಲಾಕ್ ಅಧ್ಯಕ್ಷರು, ಶ್ರೀನಿವಾಸ ಗುಮಡಲ್ ಖಜಾಂಚಿ, ಶ್ರೀಮತಿ ರೇಣುಕಾ ಪಡಿಗೆ ಪುರಸಭೆ ಉಪಾಧ್ಯಕ್ಷರು, ಬಾಲಪ್ಪ ನೀರೆಟಿ, ಸಂಜೀವ ಕುಮಾರ್ ಚಂದಾಪುರ, ಲಕ್ಷ್ಮೀರೆಡ್ಡಿ ನಜರಾಪುರ ಸೇರಿದಂತೆ ಪುರಸಭೆಯ ಸದಸ್ಯರು, ನಾಮ ನಿರ್ದೇಶಕ ಸದಸ್ಯರು, ಪಕ್ಷದ ಮುಖಂಡರುಗಳು, ಕಾರ್ಯಕರ್ತರು ಹಾಜರಿದ್ದರು.

**ವರದಿ: ಜಗದೀಶ್ ಕುಮಾರ್ ಭೂಮಾ**

ಕರುನಾಡ ಕಂದ
ಸಂಪುಟ 04 | ಸಂಚಿಕೆ 16
ದಿನಾಂಕ: 01-07-2025 ಪುಟಗಳು:16

**ಧರ್ಮ, ಜನಾಂಗ ( ಜಾತಿ ), ಜನ್ಮಸ್ಥಳ, ವಾಸಸ್ಥಳ, ಭಾಷೆ ಇತ್ಯಾದಿಗಳ ಆಧಾರದ ಮೇಲೆ ವಿವಿಧ ಗುಂಪುಗಳ ನಡುವೆ ದ್ವೇಷವನ್ನು ಉತ್ತೇಜಿಸುವ ಕೃತ್ಯಗಳನ್ನು ಮಾಡಿದರೆ ಜೈಲು ಶಿಕ್ಷೆ.**

# ಏನಿದು ಭಾರತೀಯ ನ್ಯಾಯ ಸಂಹಿತೆ ಸೆಕ್ಷನ್ 196

ದ್ವೇಷ ಭಾಷಣ, ಕೋಮು ಉದ್ವಿಗ್ನತೆ ಮತ್ತು ಸಾಮಾಜಿಕ ಸಾಮರಸ್ಯವನ್ನು ಭಂಗಗೊಳಿಸುವ ಕೃತ್ಯಗಳು ಭಾರತೀಯ ನ್ಯಾಯ ಸಂಹಿತೆಯ ಪ್ರಕಾರ ಒಂದು ಅಪರಾಧ ಕೃತ್ಯವಾಗಿದೆ ಹಾಗೂ ಈ ರೀತಿಯ ಕೃತ್ಯಗಳು ಆಗದಂತೆ ತಡೆಗಟ್ಟಲು ಕಾನೂನು ರಕ್ಷಣೆ ಒದಗಿಸುತ್ತದೆ ಹಾಗೂ ಸಾರ್ವಜನಿಕ ಶಾಂತಿಯನ್ನು ಕಾಪಾಡಿಕೊಳ್ಳುವುದನ್ನು ಖಚಿತಪಡಿಸುತ್ತದೆ.



ಭಾರತೀಯ ನ್ಯಾಯ ಸಂಹಿತೆ ಸೆಕ್ಷನ್ 196 ದ್ವೇಷವನ್ನು ತಡೆಗಟ್ಟುವಲ್ಲಿ ಮತ್ತು ಸಾರ್ವಜನಿಕ ಸಾಮರಸ್ಯವನ್ನು ಕಾಪಾಡಿಕೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಇದು ಸಮಾಜವನ್ನು ದ್ವೇಷ ಭಾಷಣ ಮತ್ತು ಹಿಂಸೆಯಿಂದ ರಕ್ಷಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಹಾಗೂ ಗೌರವಯುತ ಮತ್ತು ಶಾಂತಿಯುತ ಸಮಾಜವನ್ನು ನಿರ್ಮಿಸಲು ಸಹಾಯ ಮಾಡುತ್ತದೆ.

**ಹಾಗಾದರೆ ಏನಿದು ಭಾರತೀಯ ನ್ಯಾಯ ಸಂಹಿತೆ ಸೆಕ್ಷನ್ 196**

ಧರ್ಮ, ಜನಾಂಗ ( ಜಾತಿ ), ಜನ್ಮಸ್ಥಳ, ವಾಸಸ್ಥಳ, ಭಾಷೆ ಇತ್ಯಾದಿಗಳ ಆಧಾರದ ಮೇಲೆ ವಿವಿಧ ಗುಂಪುಗಳ ನಡುವೆ ದ್ವೇಷವನ್ನು ಉತ್ತೇಜಿಸುವುದು ಮತ್ತು ಸಾಮರಸ್ಯವನ್ನು ಕಾಪಾಡಿಕೊಳ್ಳಲು ಪೂರ್ವಾಗ್ರಹ ಪೀಡಿತ ಕೃತ್ಯಗಳನ್ನು ಮಾಡುವುದು ಶಿಕ್ಷಾರ್ಹ ಅಪರಾಧ.



**ಕಿರಣ್.ಕೆ.ಟಿ ವಕೀಲರು**
ಅಂಕಣ
**ನಿಮ್ಮ ಬದುಕಿಗೆ ಕಾನೂನು ಕವಚ**

ಯಾರೇ ಆಗಿರಲಿ, ಮಾತನಾಡುವ ಅಥವಾ ಬರೆಯುವ ಪದಗಳ ಮೂಲಕ, ಅಥವಾ ಸಂಜ್ಞೆಗಳ ಮೂಲಕ ಅಥವಾ ಗೋಚರ ಪ್ರಾತಿನಿಧ್ಯಗಳ ಮೂಲಕ ಅಥವಾ ಎಲೆಕ್ಟ್ರಾನಿಕ್ ಸಂವಹನದ ಮೂಲಕ ಅಥವಾ ಬೇರೆ ಇನ್ನಾವುದೇ ರೀತಿಯಲ್ಲಿ, ಧರ್ಮ, ಜನಾಂಗ ( ಜಾತಿ ), ಜನ್ಮಸ್ಥಳ, ವಾಸಸ್ಥಳ, ಭಾಷೆ, ಜಾತಿ ಅಥವಾ ಸಮುದಾಯ ಅಥವಾ ಯಾವುದೇ ಇತರ ಆಧಾರದ ಮೇಲೆ, ವಿವಿಧ ಧಾರ್ಮಿಕ, ಜನಾಂಗೀಯ, ಭಾಷೆ ಅಥವಾ ಪ್ರಾದೇಶಿಕ ಗುಂಪುಗಳು ಅಥವಾ ಜಾತಿಗಳು ಅಥವಾ ಸಮುದಾಯಗಳ ನಡುವೆ ಅಸಂಗತತೆ ಅಥವಾ ದ್ವೇಷ ಅಥವಾ ಕೆಟ್ಟ ಭಾವನೆಗಳನ್ನು ಉತ್ತೇಜಿಸುವುದು ಅಥವಾ ಉತ್ತೇಜಿಸಲು ಪ್ರಯತ್ನಿಸುವುದು ಮಾಡಿದರೆ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ಅಥವಾ ದಂಡ ಅಥವಾ ಎರಡನ್ನೂ ವಿಧಿಸಲಾಗುತ್ತದೆ. ವಿವಿಧ ಧಾರ್ಮಿಕ, ಜನಾಂಗೀಯ, ಭಾಷಾ ಅಥವಾ ಪ್ರಾದೇಶಿಕ ಗುಂಪುಗಳು ಅಥವಾ ಜಾತಿಗಳು ಅಥವಾ ಸಮುದಾಯಗಳ ನಡುವಿನ ಸಾಮರಸ್ಯವನ್ನು ಕಾಪಾಡಿಕೊಳ್ಳಲು ಹಾನಿಕರವಾದ ಮತ್ತು ಸಾರ್ವಜನಿಕ ನೆಮ್ಮದಿಯನ್ನು ಕದಡುವ ಅಥವಾ ಭಂಗಗೊಳಿಸುವ ಸಾಧ್ಯತೆಯಿರುವ ಯಾವುದೇ ಕೃತ್ಯವನ್ನು ಮಾಡಿದರೆ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ಅಥವಾ ದಂಡ ಅಥವಾ ಎರಡನ್ನೂ ವಿಧಿಸಲಾಗುತ್ತದೆ. ಯಾವುದೇ ಚಟುವಟಿಕೆ, ಚಲನೆ, ಡ್ರಿಲ್ ಅಥವಾ ಇತರೆ ರೀತಿಯ ಚಟುವಟಿಕೆಯನ್ನು ಆಯೋಜಿಸಿ ಅಂತಹ ಚಟುವಟಿಕೆಯಲ್ಲಿ ಭಾಗವಹಿಸುವವರು ಕ್ರಿಮಿನಲ್ ಬಲ (ಹೊಡೆದಾಡುವುದು) ಅಥವಾ ಹಿಂಸೆಯನ್ನು ಮಾಡಲಾಗುವುದು ಅಥವಾ ಹಿಂಸೆಯ ತರಬೇತಿ ಪಡೆಯಲಾಗುವುದು ಎಂದು ತಿಳಿದಿದ್ದರೆ ಹಾಗೂ ಯಾವುದೇ ಧಾರ್ಮಿಕ, ಜನಾಂಗೀಯ, ಭಾಷೆ ಅಥವಾ ಪ್ರಾದೇಶಿಕ ಗುಂಪು ಅಥವಾ ಜಾತಿ ಅಥವಾ ಸಮುದಾಯದ ವಿರುದ್ಧ ಕ್ರಿಮಿನಲ್ ಬಲ ಅಥ-'ವಾ ಹಿಂಸೆಯನ್ನು ಬಳಸುವ ಸಾಧ್ಯತೆ ಇದೆ ಎಂದು ತಿಳಿದಿದ್ದರೆ ಹಾಗೂ ಅಂತಹ ಚಟುವಟಿಕೆಯನ್ನು ಆಯೋಜಿಸಿದರೆ, ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ಅಥವಾ ದಂಡ ಅಥವಾ ಎರಡನ್ನೂ ವಿಧಿಸಲಾಗುತ್ತದೆ.

ಯಾವುದೇ ಪೂಜಾ ಸ್ಥಳದಲ್ಲಿ ಅಥವಾ ಧಾರ್ಮಿಕ ಪೂಜೆ ಅಥವಾ ಧಾರ್ಮಿಕ ಸಮಾರಂಭಗಳಲ್ಲಿ ತೊಡಗಿರುವ ಯಾವುದೇ ಸಭೆಯಲ್ಲಿ ಮೇಲೆ ತಿಳಿಸಿದ ರೀತಿಯಲ್ಲಿ ನಿರ್ದಿಷ್ಟಪಡಿಸಿದ ಅಪರಾಧವನ್ನು ಮಾಡುವ ಯಾರೇ ಆಗಲಿ, ಅವರಿಗೆ ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ಮತ್ತು ದಂಡಕ್ಕೂ ಗುರಿಯಾಗಬೇಕಾಗುತ್ತದೆ.

---

# ಬೆಳಗಾವಿ: ಸಂಬಳ ನನ್ನ ಹಕ್ಕು, ಗಿಂಬಳ ನನ್ನ ತಾಕತ್ತು, ಕೆಲಸ ನನ್ನ ಮರ್ಜಿ

## ಸುವರ್ಣ ಸೌಧಕ್ಕೆ ನುಗ್ಗಿ ಭ್ರಷ್ಟ ಅಧಿಕಾರಿಗೆ ಸನ್ಮಾನಿಸಿ ತಿಳಿ ಹೇಳಿದ ಕೆ.ಆರ್.ಎಸ್ ಪಕ್ಷ

ಬೆಳಗಾವಿ ಲೋಕಾಯುಕ್ತ ವ್ಯಾಪ್ತಿಯ ಮೂರು ಕಡೆಗಳಲ್ಲಿ ಈ ಹಿಂದೆ ಕೆಲವು ಸರಕಾರಿ ಅಧಿಕಾರಿಗಳ ಮನೆ ಹಾಗೂ ಕಚೇರಿಗಳ ಮೇಲೆ ದಾಳಿ ನಡೆಸಿದ್ದರು.




ಬೆಳಗಾವಿ ಲೋಕಾಯುಕ್ತ ಎಸ್.ಪಿ ಹನುಮಂತರಾಯ ನೇತೃತ್ವದಲ್ಲಿ ದಾಳಿ ನಡೆಸಿದ್ದ ಲೋಕಾಯುಕ್ತ ಅಧಿಕಾರಿಗಳು ಬೆಳಗಾವಿಯ ದೇವರಾಜ ಅರಸು ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ಸಿದ್ದಲಿಂಗಪ್ಪ ಬಾನಸಿ ರವರ ಬೆಳಗಾವಿ ವಿದ್ಯಾನಗರದಲ್ಲಿರುವ ಮನೆ ಹಾಗೂ ರಾಯಬಾಗ ತಾಲೂಕಿನ ಬೆಕ್ಕೇರಿ ಗ್ರಾಮದಲ್ಲಿರುವ ಮನೆ ಹಾಗೂ ಕಚೇರಿಯಲ್ಲಿ ಲೋಕಾಯುಕ್ತ ಅಧಿಕಾರಿಗಳು ದಾಖಲೆ ಪರಿಶೀಲಿಸಿದ ಸಂದರ್ಭದಲ್ಲಿ ದೇವರಾಜ್ ಅರಸು ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ಸಿದ್ದಲಿಂಗಪ್ಪ ಬಾನಸಿ ನಿವಾಸದಲ್ಲಿ ಲಕ್ಷಾಂತರ ರೂಪಾಯಿ ಮೌಲ್ಯದ ಆಸ್ತಿ ಪತ್ತೆಯಾಗಿದ್ದು ಇದರಲ್ಲಿ 1,02,66,000 ರೂ. ಮೌಲ್ಯದ ಅಕ್ರಮ ಪತ್ತೆಯಾಗಿದ್ದು 37.66 ಲಕ್ಷ ರೂಪಾಯಿ ಮೌಲ್ಯದ 4 ನಿವೇಶನಗಳು, 65 ಲಕ್ಷ ರೂಪಾಯಿ ಮೌಲ್ಯದ ಮನೆ 34.64 ಲಕ್ಷ ರೂಪಾಯಿ ಮೌಲ್ಯದ ಚಿನ್ನಾಭರಣ 10.60 ಲಕ್ಷ ರೂಪಾಯಿ ಮೌಲ್ಯದ ವಾಹನ ಪತ್ತೆಯಾಗಿದ್ದವು.

ಇಷ್ಟೆಲ್ಲಾ ಅಕ್ರಮಗಳು ಬಯಲಿಗೆ ಬಂದರೂ ಸಹ ಈ ಅಧಿಕಾರಿಯನ್ನು ಅಮಾನತ್ತು ಮಾಡದೆ ಸರಕಾರ ಭಂಡತನ ಮೆರೆದಿದ್ದು ನೋಡಿದರೆ ಭ್ರಷ್ಟ ಅಧಿಕಾರಿಗಳಿಗೆ ಸರಕಾರ ನೇರವಾಗಿ ಶ್ರೀರಕ್ಷೆ ನೀಡುತ್ತಿದ್ದು ಇದು ಖಂಡನೀಯ ಎಂದು ಬೆಳಗಾವಿ ಜಿಲ್ಲೆಯ ಕೆ. ಆರ್. ಎಸ್ ಪಕ್ಷದ ಪದಾಧಿಕಾರಿಗಳು ಆಕ್ರೋಶ ಹೊರ ಹಾಕಿದ್ದಾರೆ.

ಆಡಳಿತ ವ್ಯವಸ್ಥೆಯಲ್ಲಿ ಸುಧಾರಣೆ ತರಬೇಕಾದರೆ ಭ್ರಷ್ಟಾಚಾರ ಮುಕ್ತ ಕರ್ನಾಟಕ ನಿರ್ಮಾಣ ಅವಶ್ಯಕ ಈ ನಿಟ್ಟಿನಲ್ಲಿ ಕರ್ನಾಟಕದಾದ್ಯಂತ ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ ಅನೇಕ ಹೋರಾಟಗಳ ಮೂಲಕ ಆಡಳಿತ ವ್ಯವಸ್ಥೆಯಲ್ಲಿ ಸುಧಾರಣೆ ತರಲು ಹೋರಾಟ ನಡೆಸುತ್ತಿದೆ, ಆದರೆ ಅಧಿಕಾರದಲ್ಲಿರುವ ರಾಜಕೀಯ ನಾಯಕರು, ಪಕ್ಷಗಳು ಇಂತಹ ಘಟನೆಗಳು ನಡೆದಾಗ ಭ್ರಷ್ಟ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳದೆ ಅವರಿಗೆ ಪರೋಕ್ಷವಾಗಿ ರಕ್ಷಣೆ ನೀಡುತ್ತಿರುವುದು ನಾಚಿಕೆಗೇಡಿನ ಸಂಗತಿ ಎಂದು ರಾಜ್ಯ ಸಂಘಟನಾ ಕಾರ್ಯದರ್ಶಿ ಬಿ. ಜಿ ಕುಂಬಾರ ಆಕ್ರೋಶ ವ್ಯಕ್ತಪಡಿಸಿದರು.

ಘಟನೆ ಖಂಡಿಸಿ ಬೆಳಗಾವಿ ಸುವರ್ಣ ವಿಧಾನಸೌಧದ ಮುಂಭಾಗದಲ್ಲಿರುವ ದೇವರಾಜ ಅರಸು ಅಭಿವೃದ್ಧಿ ನಿಗಮದ ಕಚೇರಿ ಮುಂದೆ ನಿಗಮದ ವ್ಯವಸ್ಥಾಪಕ ಸಿದ್ದಲಿಂಗಪ್ಪ ಬಾನಸಿ ಯವರಿಗೆ ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಬೆಳಗಾವಿ ಜಿಲ್ಲೆಯ ಪದಾಧಿಕಾರಿಗಳು ಭ್ರಷ್ಟ ಅಧಿಕಾರಿಗೆ ಸನ್ಮಾನಿಸಿ ಇನ್ನಾದರೂ ಉತ್ತಮವಾಗಿ ಕಾರ್ಯ ನಿರ್ವಹಿಸಿ ಉತ್ತಮ ಆಡಳಿತ ನೀಡುವಂತೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಬೆಳಗಾವಿ ಜಿಲ್ಲಾ ಗೌರವಾಧ್ಯಕ್ಷ ಸಿದ್ದು ಕನಬುರಗಿ ಸರಕಾರಿ ಅಧಿಕಾರಿಗಳಿಗೆ ಸಾರ್ವಜನಿಕರು ಕಷ್ಟ ಪಟ್ಟು ದುಡಿದ ತೆರಿಗೆ ಹಣದಲ್ಲಿ ಸಂಬಳ ನೀಡುತ್ತಾರೆ ಇಲಾಖೆಯು ಈ ಅಧಿಕಾರಿಗಳಿಗೆ ಎಲ್ಲಾ ರೀತಿಯ ಸೌಲಭ್ಯ ಕಲ್ಪಿಸುತ್ತದೆ ಸರಕಾರಿ ಕೆಲಸ ದೇವರ ಕೆಲಸ ಎಂದು ತಿಳಿದು ಸಾರ್ವಜನಿಕರಿಗೆ ನ್ಯಾಯ ನೀಡುವ ನಿಟ್ಟಿನಲ್ಲಿ ಕರ್ತವ್ಯ ನಿರ್ವಹಿಸಬೇಕಾದ ಅಧಿಕಾರಿಗಳು ಇತ್ತೀಚಿನ ದಿನಗಳಲ್ಲಿ " ಸಂಬಳ ನನ್ನ ಹಕ್ಕು, ಗಿಂಬಳ ನನ್ನ ತಾಕತ್ತು, ಕೆಲಸ ನನ್ನ ಮರ್ಜಿ" ಎನ್ನುವ ಹಂತಕ್ಕೆ ತಲುಪಿದ್ದು ವಿಷಾಧನೀಯ ಸಂಗತಿ.

ಅಧಿಕಾರಿಗಳ ಭ್ರಷ್ಟಾಚಾರ ಕಂಡು ಬಂದಾಗಲಾದರೂ ಕ್ರಮ ಕೈಗೊಳ್ಳಬೇಕಾದ ಸರಕಾರ ಈ ರೀತಿ ವರ್ತನೆ ಮಾಡುತ್ತಿರುವುದು ನೋಡಿದರೆ ಇವರ ನೈತಿಕತೆ ಪ್ರಶ್ನೆ ಮಾಡುವ ಸಮಯ ಬಂದಿದ್ದು ಸಾರ್ವಜನಿಕರು ಈ ಕುರಿತು ಚಿಂತಿಸಿ ಒಳ್ಳೆಯ ಜನ ಪ್ರತಿನಿಧಿಗಳನ್ನು ಆರಿಸುವತ್ತ ಗಮನ ಹರಿಸಬೇಕಿದೆ ಎಂದು ವಿಷಾದ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಚಿಕ್ಕೋಡಿ ಜಿಲ್ಲಾಧ್ಯಕ್ಷರಾದ ಕುಮಾರ ಡೊಂಗರೆ, ಚಿಕ್ಕೋಡಿ ಗೌರವಾಧ್ಯಕ್ಷರಾದ ವಿನೋದ ಪಾಟೀಲ, ಬೆಳಗಾವಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಡಿವಾಳಪ್ಪ ಕಿತ್ತೂರ, ಕಾರ್ಯದರ್ಶಿ ಸಿದ್ದು ಬನ್ನೋಡಿ, ಸಿದ್ದಪ್ಪ ಡಾಂಗೆ, ಸುರೇಶ ಭಜಂತ್ರಿ, ತಾಲೂಕಾ ಯುವ ಘಟಕದ ಅಧ್ಯಕ್ಷ ಅಜಿತ ಧೋತರ, ತಾಲೂಕ ಅಧ್ಯಕ್ಷ ಸಂತೋಷ ಮಂಗಳಗಟ್ಟಿ, ಕಾರ್ಯದರ್ಶಿ ರಾಜು ಮಲಕೇರಿ, ದ್ಯಾಮಣ್ಣ ಕಿತ್ತೂರ, ಮುನ್ನಾ ಹಾಗೂ ಇನ್ನಿತರು ಉಪಸ್ಥಿತರಿದ್ದರು.

**ವರದಿ. ಭೀಮಸೇನ ಕಮ್ಮಾರ**

ಕರುನಾಡ ಕಂದ
ಸಂಪುಟ 04 । ಸಂಚಿಕೆ 16
ದಿನಾಂಕ: 01-07-2025 ಪುಟಗಳು:16

# ಸರ್ಕಾರಿ ಭೂಗಳ್ಳರ ವಿರುದ್ಧ ಜಿಲ್ಲಾಡಳಿತ ದಿಟ್ಟ ಕ್ರಮ

## ಅಕ್ರಮ ಶೆಡ್ ನಿರ್ಮಾಣ ತೆರವುಗೊಳಿಸುವಲ್ಲಿ ಯಶಸ್ವಿ ಕಾರ್ಯಾಚರಣೆ ಮಾಡಿದ ಗ್ರೇಡ್ ಒನ್ ತಹಸೀಲ್ದಾರ್ ವೈ. ಕೆ. ಗುರುಪ್ರಸಾದ್ ತಂಡ



**ಚಾಮರಾಜನಗರ:** ಹನೂರು ತಾಲ್ಲೂಕಿನ ಮಲೆ ಮಹದೇಶ್ವರ ಬೆಟ್ಟ ಮುಖ್ಯ ರಸ್ತೆ ಹಾಗೂ ಕೊಳ್ಳೇಗಾಲ ಮುಖ್ಯರಸ್ತೆ ಬದಿಯ ಉಳಿಸುಗುಡ್ಡೆ ಬಳಿ ಬರುವ ವಿಕಾಸ ಸೌಧ ನಿರ್ಮಾಣ ಮಾಡುವ ಸ್ಥಳದ ಸಮೀಪದಲ್ಲಿಯೇ ಮಂಗಲ ಗ್ರಾಮದ ವಿಶ್ವೇಶ್ವರ ಪ್ರಸಾದ್ ಸರ್ಕಾರಿ ಜಮೀನನ್ನು ಭೂಕಬಳಿಕೆ ಮಾಡಿ ಅದರಲ್ಲಿ ನಕಲಿ ದಾಖಲೆಗಳನ್ನು ನೀಡಿ ಸರ್ಕಾರದ ಸವಲತ್ತು ಪಡೆದು ಮೇಕೆ ಶೆಡ್ ಹಾಗೂ ವಾಸದ ಮನೆ ಗುಡಿಸಲು ಕಟ್ಟಿರುವುದನ್ನು ಹಿಂದಿನಿಂದಲೂ ಸಾರ್ವಜನಿಕರು ಮತ್ತು ಚಲವಾದಿ ಮಹಾಸಭಾ ತಾಲೂಕು ಘಟಕದ ವತಿಯಿಂದ ಲೋಕಾಯುಕ್ತರಿಗೆ ಹಾಗೂ ಜಿಲ್ಲಾಧಿಕಾರಿ ತಾಲೂಕು ದಂಡಾಧಿಕಾರಿಗಳಿಗೆ ದೂರು ಸಲ್ಲಿಸಿ ಸರ್ಕಾರಿ ಆಸ್ತಿ ಸಂರಕ್ಷಿಸುವಂತೆ ಮನವಿ ಮಾಡಲಾಗಿತ್ತು.

ಸರ್ಕಾರಿ ಜಾಗದಲ್ಲಿ ಅಕ್ರಮ ಮೇಕೆ ಶೆಡ್, ವಾಸದ ಮನೆ ನಿರ್ಮಾಣ ಮಾಡಿಕೊಂಡಿರುವುದನ್ನು ತಾಲೂಕು ದಂಡಾಧಿಕಾರಿಗಳ ಸಮ್ಮುಖದಲ್ಲಿ ವಿವಿಧ ಇಲಾಖೆಯ ಅಧಿಕಾರಿಗಳು ಸೇರಿದಂತೆ ಪೊಲೀಸ್ ಇಲಾಖೆ ಸೂಕ್ತ ರಕ್ಷಣೆಯೊಂದಿಗೆ ಎರಡು ಜೆಸಿಬಿಗಳ ಮೂಲಕ ಅಕ್ರಮವಾಗಿ ನಿರ್ಮಾಣ ಮಾಡಲಾಗಿದ್ದ ಶೆಡ್ ಗಳನ್ನು ತೆರವುಗೊಳಿಸಿದರು.

**ಅಕ್ರಮ ಕಟ್ಟಡಗಳ ನೆಲಸಮ**

ಹುಣಸುಗುಡ್ಡೆ ಉಲ್ಲೇಪುರ ಸರ್ವೆ ನಂಬರ್ 355/1 5.50 ಎಕರೆ 355 / ಎ ನಲ್ಲಿ 5.94 ಎಕರೆ 356 ಸಿ ನಲ್ಲಿ 2.58 ಸೇರಿ ಒಟ್ಟು 14 ಎಕರೆ ಸರ್ಕಾರಿ ಜಮೀನಿನಲ್ಲಿ ಅಕ್ರಮವಾಗಿ ನಕಲಿ ದಾಖಲೆಗಳನ್ನು ನೀಡಿ ವಿದ್ಯುತ್ ಸಂಪರ್ಕವನ್ನು ಸಹ ಪಡೆದು ಮೇಕೆ ಶೆಡ್ ನಿರ್ಮಾಣ ಮಾಡಿ ಸರ್ಕಾರದಿಂದ ಸಿಗುವ ಸವಲತ್ತುಗಳನ್ನು ಪಡೆಯುವುದರ ಜೊತೆಗೆ 30 ಕೋಟಿ ರೂಪಾಯಿ ಬೆಲೆ ಬಾಳುವ ಸರ್ಕಾರಿ ಆಸ್ತಿಯನ್ನು ಕಬಳಿಸಲು ತನ್ನ ರಾಜಕೀಯ ಪ್ರಭಾವ ಬಳಸಿ ಅಧಿಕಾರಿಗಳಿಗೆ ದೂರವಾಣಿ ಕರೆ ಮೂಲಕ ಪ್ರಭಾವ ಬೀರುವ ಮೂಲಕ ಮಂಗಲ ವಿಶ್ವೇಶ್ವರ ಪ್ರಸಾದ್ ಜಮೀನನ್ನು ಅಕ್ರಮವಾಗಿ ಕಬ್ಜಾಗೊಳಿಸಲು ಮುಂದಾಗಿದ್ದ ಬಗ್ಗೆ ಮಾಹಿತಿ ಪಡೆದ ಜಿಲ್ಲಾಡಳಿತ ದಿಟ್ಟ ಕ್ರಮದಿಂದ 70ಕ್ಕೂ ಹೆಚ್ಚು ಸರ್ಕಾರಿ ಅಧಿಕಾರಿ, ಸಿಬ್ಬಂದಿ ವರ್ಗದವರ ಭಾರೀ ಭದ್ರತೆಯೊಂದಿಗೆ ಅಕ್ರಮ ಶೆಡ್ ಗಳನ್ನು ನೆಲಸಮಗೊಳಿಸಿ ಕಾರ್ಯಾಚರಣೆಯನ್ನು ಯಶಸ್ವಿಯಾಗಿ ನಡೆಸಿದರು.

**ಅಕ್ರಮ ಶೆಡ್ ಗಳಲ್ಲಿ ಟೆಲಿಫೋನ್ ಕಂಬಗಳ ದಾಸ್ತಾನು :ಅಕ್ರಮ ಶೆಡ್ ತೆರವುಗೊಳಿಸಲು ಮುಂದಾಗಿದ್ದ ಅಧಿಕಾರಿಗಳೇ ಶಾಕ್**

ಹಲವು ವರ್ಷಗಳಿಂದ ಮಂಗಲ ವಿಶ್ವೇಶ್ವರ ಪ್ರಸಾದ್ ಸರ್ಕಾರಿ ಜಮೀನಿನ ಅಕ್ರಮ ಶೆಡ್ ಗಳನ್ನು ಬಳಸಲು ಕೇಂದ್ರ ಸರ್ಕಾರದ ಸಂಯಮದ ಟೆಲಿಫೋನ್ ಕಂಬಗಳನ್ನು ಮಂಗಲ ಗ್ರಾಮದಿಂದ ಹನೂರು ಪಟ್ಟಣದವರೆಗೆ ದೂರವಾಣಿ ಸಂಪರ್ಕ



ನೀಡಲು ಬಳಸಲಾಗಿದ್ದ ಟೆಲಿಫೋನ್ ಕಂಬಗಳ ದಾಸ್ತಾನು ಕಂಡು ಅಧಿಕಾರಿಗಳು ಬೆಚ್ಚಿ ಬಿದ್ದರು. ಸಾರ್ವಜನಿಕರು ಸಹ ಈತನ ವಿರುದ್ಧ ಕೇಂದ್ರ ಸರ್ಕಾರ ಹಾಗೂ ಅಧಿಕಾರಿಗಳು ಕಂಬಗಳನ್ನು ವಶಕ್ಕೆ ಪಡೆದು ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

**ವಿದ್ಯುತ್ ಸಂಪರ್ಕ ಆಕ್ರಮ :**

ಅಧಿಕಾರಿಗಳ ತಪ್ಪಿನಿಂದಾಗಿ ಮಂಗಲ ವಿಶ್ವೇಶ್ವರ ಪ್ರಸಾದ್ ಸರ್ಕಾರಿ ಜಮೀನಿನ ಅಕ್ರಮ ಕಟ್ಟಡಗಳಿಗೆ ಬೇರೆ ಜಮೀನಿನ ಪಹಣಿ ಮತ್ತು ನಕಲಿ ದಾಖಲೆಗಳನ್ನು ನೀಡಿ ಈ ಸರ್ಕಾರಿ ಜಾಗದ ಕಟ್ಟಡಗಳಿಗೆ ಅಕ್ರಮ ವಿದ್ಯುತ್ ಸಹ ಪಡೆದಿರುವ ಬಗ್ಗೆ ಮಾಹಿತಿ ಇದ್ದು ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಪ್ರಜ್ಞಾವಂತ ನಾಗರೀಕರು ಒತ್ತಾಯಿಸಿದ್ದಾರೆ.

**ಬೋರ್ಡ್ ಅಳವಡಿಕೆ :**

ತಾಲೂಕು ದಂಡಾಧಿಕಾರಿಗಳು ಸರ್ಕಾರಿ ಜಮೀನನ್ನು ತೆರವುಗೊಳಿಸಿ ನಂತರ ಅಲ್ಲಿನ ನಿವೇಶನದ ಬಳಿ ಹಿರಿಯ ಅಧಿಕಾರಿಗಳ ಮಾರ್ಗದರ್ಶನದಲ್ಲಿ ಈ ಸ್ವತ್ತು ಸರ್ಕಾರದ ಕಂದಾಯ ಇಲಾಖೆಗೆ ಸೇರಿದ್ದು ಹೀಗಾಗಿ ಈ ಜಮೀನನ್ನು ಯಾರೂ ಸಹ ಒತ್ತುವರಿ ಮಾಡದೆ ಇರುವ ಎಚ್ಚರಿಕೆ ನಾಮಫಲಕವನ್ನು ಸಹ ಸ್ಥಳದಲ್ಲಿ ಅಳವಡಿಸಲಾಗಿದೆ ಎಂದರು.

**ಛಲವಾದಿ ಮಹಾಸಭಾ ತಾಲೂಕು ಘಟಕ ದೂರು : ಯಶಸ್ವಿ ಕಾರ್ಯಾಚರಣೆ**

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮಂಗಲ ವಿಶ್ವೇಶ್ವರ ಪ್ರಸಾದ್ ಸರ್ಕಾರಿ ಜಮೀನಿನಲ್ಲಿ ಅಕ್ರಮವಾಗಿ ಶೆಡ್ ಗಳನ್ನು ನಿರ್ಮಾಣ ಮಾಡಿ ಸರ್ಕಾರವನ್ನು ವಂಚಿಸಿ ಸವಲತ್ತು ಪಡೆಯುತ್ತಿರುವ ಬಗ್ಗೆ ಲೋಕಾಯುಕ್ತ ಅಧಿಕಾರಿಗಳಿಗೆ, ಜಿಲ್ಲಾ ಮತ್ತು ತಾಲೂಕು ಆಡಳಿತ ಅಧಿಕಾರಿಗಳಿಗೆ ದೂರು ಸಲ್ಲಿಸಿದ ಹಿನ್ನೆಲೆಯಲ್ಲಿ ದಿಟ್ಟ ಕ್ರಮದೊಂದಿಗೆ ಅಧಿಕಾರಿಗಳು ಕಾರ್ಯಾಚರಣೆ ನಡೆಸಿ 30 ಕೋಟಿ ಬೆಲೆ ಬಾಳುವ ಸರ್ಕಾರಿ ಆಸ್ತಿ ಸಂರಕ್ಷಿಸುವಲ್ಲಿ ಯಶಸ್ವಿಯಾಗಿದ್ದಾರೆ.

**ವಿವಿಧ ಇಲಾಖೆಯ ಅಧಿಕಾರಿಗಳ ತಂಡ ಉಪಸ್ಥಿತಿ :**

ಕೋಟ್ಯಾಂತರ ರೂಪಾಯಿ ಬೆಲೆ ಬಾಳುವ ಸರ್ಕಾರಿ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲು ತಾಲೂಕು ದಂಡಾಧಿಕಾರಿ ಗುರುಪ್ರಸಾದ್ ಹಾಗೂ ರಾಜಸ್ವ ನಿರೀಕ್ಷಕರುಗಳಾದ ಶೇಷಣ್ಣ ಮಹದೇವಸ್ವಾಮಿ ಶಿವಕುಮಾರ್ ಹಾಗೂ ಗ್ರಾಮ ಲೆಕ್ಕಿಗರಾದ ವಿನೋದ್ ನವೀನ್ ಮತ್ತು ಪೊಲೀಸ್ ಇನ್ಸ್ ಪೆಕ್ಟರ್ ಪಿ ಆನಂದ್ ಕುಮಾರ್ ಪಿಎಸ್ಐ ಮಂಜುನಾಥ ಪ್ರಸಾದ್ ಸೇರಿದಂತೆ ಪೊಲೀಸ್ ಸಿಬ್ಬಂದಿ ವರ್ಗದವರು ಹಾಗೂ ಚಾಮರಾಜನಗರ ಜಿಲ್ಲಾ ಮೀಸಲು ಸಶಸ್ತ್ರ ಪಡೆಯ ಒಂದು ವಾಹನ ಹಾಗೂ ಅಗ್ನಿಶಾಮಕ ದಳದ ಅಧಿಕಾರಿ ಸಿಬ್ಬಂದಿ ವರ್ಗದವರು ಮತ್ತು ಆರೋಗ್ಯ ಇಲಾಖೆಯ ಒಂದು ಆಂಬುಲೆನ್ಸ್, ಪಟ್ಟಣ ಪಂಚಾಯಿತಿ ಅಧಿಕಾರಿ ನೌಕರ ವರ್ಗದವರು ಮತ್ತು ಇನ್ನೂ ವಿವಿಧ ಇಲಾಖೆಯ ಅಧಿಕಾರಿ ಸಿಬ್ಬಂದಿ ವರ್ಗದವರು ಕಾರ್ಯಾಚರಣೆಯಲ್ಲಿ ಇದ್ದರು.

**ವರದಿ :ಉಸ್ಮಾನ್ ಖಾನ್**

# ಮಾದಕ ವಸ್ತುಗಳ ಸೇವನೆ: ಆರೋಗ್ಯದ ಮೇಲೆ ದುಷ್ಪರಿಣಾಮ : ಪಿ. ಎಸ್. ಐ ಅವಿನಾಶ್ ಕಾಂಬಳೆ

**ಬಳ್ಳಾರಿ / ಕಂಪ್ಲಿ :** ಮಾದಕ ವಸ್ತುಗಳ ಸೇವನೆಗೆ ಒಮ್ಮೆ ಒಳಗಾದರೆ, ಅದರಿಂದ ಹೊರಬರುವುದು ಕಷ್ಟ. ಇದು ಮಾನವನ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಲಿದೆ ಎಂದು ಕಂಪ್ಲಿ ಪೊಲೀಸ್ ಠಾಣೆಯ ಪಿ. ಎಸ್. ಐ ಅವಿನಾಶ ಕಾಂಬಳೆ ಹೇಳಿದರು.

ಕಂಪ್ಲಿ ಪೊಲೀಸ್ ಠಾಣೆಯ ವತಿಯಿಂದ ನಗರದ ಡಿಎಚ್ಎಸ್ ಪದವಿ ಪೂರ್ವ ಕಾಲೇಜಿನಲ್ಲಿ ಮಾದಕ ವಸ್ತುಗಳಿಂದಾಗುವ ದುಷ್ಪರಿಣಾಮಗಳ ಕುರಿತು ಆಯೋಜಿಸಿದ್ದ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದ ಅವರು ಮದ್ಯಪಾನ, ಧೂಮಪಾನದಂತಹ ದುಶ್ಚಟಗಳಿಗೆ ಹದಿಹರೆಯದ ವಯಸ್ಸಿನವರು ಒಳಗಾಗುತ್ತಾರೆ. ಒಮ್ಮೆ ಮಾದಕ ವಸ್ತುಗಳ ಸೇವನೆಗೆ ಒಳಗಾದರೆ ಅದರಿಂದ ಹೊರಬರುವುದು ತುಂಬಾ ಕಷ್ಟ, ತಂಬಾಕು, ಡ್ರಗ್ಸ್, ಗಾಂಜಾ, ಅಫೀಮು ಮಾದಕ



ವಸ್ತುಗಳಾಗಿವೆ. ಇವುಗಳ ಸೇವನೆಯಿಂದ ಮೆದುಳಿನಲ್ಲಿ ಅಸ್ಪಷ್ಟತೆ ಉಂಟಾಗುತ್ತದೆ. ತನ್ನ ಮೇಲೆ ನಿಯಂತ್ರಣ ಕಳೆದುಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗುತ್ತದೆ ಎಂಬುದನ್ನು ತಿಳಿ ಹೇಳಬೇಕಿದೆ ಎಂದರು. ಎ. ಎಸ್. ಐ ಬಿ. ಬಸವರಾಜ ಮಾತನಾಡಿ, ಕಾಲೇಜು ವಿದ್ಯಾರ್ಥಿಗಳಿಗೆ ತಂಬಾಕು ಸೇವನೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಮಕ್ಕಳಲ್ಲಿ ಜಾಗೃತಿ ಮೂಡಿಸುವ ಬಗ್ಗೆ ಉಪಯುಕ್ತವಾದ ಮಾರ್ಗದರ್ಶನ ನೀಡಿದರು.

ಕಾಲೇಜ್ ನ ಪ್ರಾಂಶುಪಾಲ ಬಸವರಾಜಸ್ವಾಮಿ ಅವರು ಮಾತನಾಡಿ, ಭಾರತದಲ್ಲಿ 3 ಕೋಟಿ ಮಂದಿ ಮಾದಕ ವ್ಯಸನದಿಂದ ಹೊರ ಬರಲು ಚಿಕಿತ್ಸೆ ಪಡೆಯುತ್ತಿದ್ದಾರೆ. ಹಲವರಿಗೆ ವ್ಯಸನದಿಂದ ಹೊರ ಬರಲು ಚಿಕಿತ್ಸೆ ಪಡೆಯಬೇಕು ಎಂಬ ಅರಿವು ಇಲ್ಲ. 10 ವರ್ಷದಲ್ಲಿ ಶೇ.70 ಗಾಂಜಾ ಸೇವನೆ ಹೆಚ್ಚಾಗಿದೆ ಈ ಮಾದಕ ವಸ್ತುಗಳ ಸೇವನೆಯಿಂದ ದೂರ ಉಳಿಯಬೇಕಿದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಪೊಲೀಸ್ ಸಿಬ್ಬಂದಿ ಮುತ್ತುರಾಜ್, ಕಾಲೇಜ್ ನ ಆಡಳಿತ ಆಶಿಕಾರಿ ಡಾ. ಸಂದೀಪ್ ಕುಮಾರ್, ಉಪನ್ಯಾಸಕರಾದ ರಾಘವೇಂದ್ರ, ಅರ್. ಸುಭಾನ್, ಮೆಹಬೂಬ್ ಬಿ ಮತ್ತಿತರರು ಭಾಗವಹಿಸಿದ್ದರು.

**ವರದಿ ಜಿಲಾನಸಾಬ್ ಬಡಿಗೇರ್**

# ನನ್ನಮ್ಮ...



ನನ್ನ ಜನ್ಮ ದಿನವೇ ಅವಳ ಪುನರ್ಜನ್ಮ
ಹೇಗೆ ಹೇಳಲಿ ನಿನಗೆ ಧನ್ಯವಾದವ
ಹೇಗೆ ವರ್ಣಿಸಲಿ ನಿನ್ನ ಅಂತರಾತ್ಮವ
ನಿನ್ನ ಪ್ರೀತಿ ವಾತ್ಸಲ್ಯಕ್ಕೆ ಪದಗಳೇ ಸಿಗುತ್ತಿಲ್ಲಮ್ಮ

ನೀ ಕಂಡೆ ನನ್ನ ಖುಷಿಯಲ್ಲೇ ಸ್ವರ್ಗವ
ನೀ ತೋರಿಸಿದೆ ಪ್ರತಿ ಹೆಜ್ಜೆಗೂ ಸನ್ಮಾರ್ಗವ
ನೀ ನೀಡಿದೆ ಎನ್ನ ಬದುಕಿಗೆ ಸಂಸ್ಕಾರದ ಮೋಕ್ಷವ
ನೀ ತೋರಿದ ಮಾರ್ಗವೇ ನನಗೆ ಸೃಜನಾತ್ಮಕವಮ್ಮ

ಅನಕ್ಷರಸ್ಥಳಾದರೂ ಜ್ಞಾನದ ಬೆಳಕು ನೀಡಿದವಳು
ಮಮತೆಯ ಮಮಕಾರ ತುತ್ತು ಕೊಟ್ಟವಳು
ಪ್ರೀತಿಯ ಜ್ಯೋತಿ ಬೆಳಗಿಸಿದವಳು
ಬದುಕಿಗೆ ಸದಾ ನಗುವ ಚೆಲ್ಲುತ್ತಾ ಬಂದವಳು
ನನಗಾಗಿ ಇಡಿ ಜೀವನವೇ ಮೀಸಲಿಟ್ಟವಳು

ನಾ ಸೋತಾಗ ಕೈ ಹಿಡಿದು ಮುನ್ನಡೆಸಿದವಳು
ನಾ ಗೆದ್ದಾಗ ಕೈ ತಟ್ಟಿ ಪ್ರೋತ್ಸಾಹಿಸಿದಳು
ನನ್ನ ಉಸಿರು ನಿನ್ನ ಆದರ್ಶದಲ್ಲಿದೆ ಎಂದವಳು
ನನ್ನ ಕೀರ್ತಿ ಸ್ಪೂರ್ತಿ ನೀನೆಂದು ಜಗ ಮಗ ಎನಿಸಿದಳು ಅಮ್ಮ

ಅಮ್ಮ ನೀ ಕೊಟ್ಟ ಜನ್ಮ ನಿನಗೆ ಮೀಸಲಮ್ಮ
ಅಮ್ಮ ಅಂತ ಕೂಗಿದರೆ ಬಾ ಕಂದ ಅಂದೆಮ್ಮ
ನಿನ್ನಿಂದಲೇ ಈ ಜನ್ಮ ಸಾರ್ಥಕವಮ್ಮ
ನಿನ್ನ ಪಾದ ಸ್ಪರ್ಶಕ್ಕೆ ಸದಾ ಚಿರಸ್ಮರಣೀಯ ನೋಡಮ್ಮ.

**– ಅನುರಾಧ ಡಿ ಸನ್ನಿ, ಹೂಲಗೇರಿ.**
**ಕುಷ್ಟಗಿ ತಾ. ಕೊಪ್ಪಳ ಜಿಲ್ಲೆ.**

# ಉರಗ ರಕ್ಷಣೆಗೆ ಸದಾ ಸಿದ್ದ ಅಂಜಪ್ಪ ಕಂದೂರ್

## ಹಾವನ್ನು ಕೊಲ್ಲದೆ ಸಂರಕ್ಷಿಸಲು ಉರಗ ರಕ್ಷಕ ಅಂಜಪ್ಪ ಕಂದೂರ್ ಮನವಿ

**ಯಾದಗಿರಿ/ಗುರುಮಠಕಲ್:** ಮಳೆಗಾಲ ಬಂತೆಂದರೆ ಅಲ್ಲಲ್ಲಿ ಜೀವಜಂತುಗಳು ಜನವಸತಿ ಪ್ರದೇಶದತ್ತ ನುಗ್ಗುವುದು ಸಾಮಾನ್ಯವಾಗಿದೆ, ನಗರೀಕರಣದ ಹೆಸರಿನಲ್ಲಿ ಅರಣ್ಯ ಪ್ರದೇಶದ ನಾಶದಿಂದ ಹಾವುಗಳು ಅಲ್ಲಲ್ಲಿ ಕಂಡು ಬರುತ್ತವೆ, ಜನರಿಗೆ ಹಾವಿನ ಕುರಿತು ಕಡಿಮೆ ತಿಳುವಳಿಕೆ ಮತ್ತು ಅನಗತ್ಯ ಭಯ ಇರುವ ಕಾರಣದಿಂದ ಜನವಸತಿ ಪ್ರದೇಶಗಳಲ್ಲಿ ಹಾವುಗಳು ಕಂಡು ಬಂದರೆ ಮೊದಲು ಸಾಯಿಸಲು ಮುಂದಾಗುತ್ತಾರೆ. ಆದರೆ ಗುರುಮಠಕಲ್ ಪಟ್ಟಣದ 20 ವರ್ಷದ ಯುವಕ ಅಂಜಪ್ಪ ಹಾವುಗಳನ್ನು ಹಿಡಿದು ರಕ್ಷಣೆ ಮಾಡಿ ಕಾಡಿಗೆ ಬಿಡುವ ಮಾನವೀಯ ಕೆಲಸಕ್ಕೆ ತೊಡಗಿಸಿಕೊಂಡಿರುವುದು ಶ್ಲಾಘನೀಯ ಸಂಗತಿ.

ಹಾವುಗಳು ಕಂಡರೆ ಧೈರ್ಯಗೆಡುವವರೇ ಹೆಚ್ಚು, ಇದಕ್ಕೆ ಅಪವಾದವೆಂಬಂತೆ ಅಂಜಪ್ಪ ಕಂದೂರ್ ಯಾವ ಭಯವೂ ಇಲ್ಲದೇ ನಾಗರ ಹಾವು, ಕೇರೆ ಹಾವು, ಹಸಿರು ಹಾವು, ಕೊಳಕು ಮಂಡಲ, ನೀರ ಹಾವು ಸೇ-ರಿದಂತೆ ನಾನಾ ಜಾತಿಯ 2,000 ಸಾವಿರಕ್ಕೂ ಅಧಿಕ ಹಾವುಗಳನ್ನು ಹಿಡಿದು ಸುರಕ್ಷಿತ ಸ್ಥಳಕ್ಕೆ ಬಿಡುವ ಮೂಲಕ ಸೈ ಎನಿಸಿಕೊಂಡಿದ್ದಾರೆ. ಅವುಗಳಿಗೆ ಯಾವುದೇ ಗಾಯ ಮಾಡದೇ ಪ್ಲಾಸ್ಟಿಕ್ ಚೀಲ, ಡಬ್ಬಗಳಲ್ಲಿ ಹಾಕಿ ಸುರಕ್ಷಿತವಾಗಿ ಕಾಡಿಗೆ ಬಿಟ್ಟು ಬರುತ್ತಾರೆ.

ಹಾವುಗಳ ರಕ್ಷಣೆ ಸಮಯದಲ್ಲಿ ಮೂರು ಬಾರಿ ಅವುಗಳಿಂದ ಕಚ್ಚಿಸಿಕೊಂಡು ಚಿಕಿತ್ಸೆ ಪಡೆದು ಮತ್ತೆ ಅದೇ ಪ್ರವೃತ್ತಿಯಲ್ಲಿ



ಮುಂದುವರೆದಿದ್ದಾರೆ, ಹಾವು ಬಂದಿದೆ ಎಂದು ಯಾರೇ ಕರೆ ಮಾಡಿದರೂ ಸ್ಥಳಕ್ಕೆ ಧಾವಿಸಿ, ಹಿಡಿದು ಹಾವುಗಳನ್ನು ಸಾಯಿಸದೇ ಅವುಗಳಿಗೂ ಬದುಕುವ ಅವಕಾಶ ನೀಡಿ ಎಂದು ಜನರಿಗೆ ತಿಳಿ ಹೇಳುತ್ತಾನೆ, ಹಾವನ್ನು ಬರಿ ಕೈಯಿಂದಲೇ ಅದರ ಬಾಲ ಹಿಡಿದು ಅದನ್ನು ಚೀಲಕ್ಕೆ ಹಾಕಿ ಊರಿನ ಹೊರ ವಲಯದಲ್ಲಿ ಬಿಟ್ಟು ಬರುವುದು ನಾಲ್ಕು ವರ್ಷಗಳಿಂದ ಮಾಡುತ್ತಿರುವುದು ನನಗೆ ಖುಷಿ ತಂದಿದೆ ಎಂದು ನಗುತ್ತಾ ಹೇಳುತ್ತಾರೆ ಅಂಜಪ್ಪ.

ಅಂಜಪ್ಪನ ಸೇವೆಗೆ ನಾಗರೀಕರು ಪ್ರಶಂಸೆ ಸಲ್ಲಿಸಿದ್ದಾರೆ, ನಿಮ್ಮ ಸೇವೆಗೆ ನಮ್ಮದೊಂದು ಸಲಾಮ್.. ನಿಮ್ಮ ಈ ಸೇವೆ ಹೀಗೆಯೇ ಮುಂದುವರೆಯಲಿ ಎಂಬುದು ಎಲ್ಲರ ಮನದಾಶಯ.

**ವರದಿ: ಜಗದೀಶ್ ಕುಮಾರ್ ಭೂಮಾ**

# ಸಮಾಜದಲ್ಲಿ ಶಾಂತಿ ಸುವ್ಯವಸ್ಥೆಗೆ ನಾಗರಿಕರ ಸಹಕಾರ ಅವಶ್ಯ- ವ್ಯಸನ ಮುಕ್ತ ಯುವ ಪೀಳಿಗೆ ಸಶಕ್ತರಾಗಲು ದೊಡ್ಡಮನಿ ಕರೆ





**ಯಾದಗಿರಿ/ ಗುರುಮಠಕಲ್ :** ಅಹಿತಕರ ಘಟನೆಗಳು ನಡೆಯದಂತೆ ಮೊಹರಂ ಹಬ್ಬವನ್ನು ಆಚರಿಸಬೇಕು ಎಂದು ಪಿ.ಐ ವೀರಣ್ಣ ದೊಡ್ಡಮನಿ ಸಲಹೆ ನೀಡಿದ ನಂತರ ಕಳೆದ ಬಾರಿ ಶಾಂತಿ ಸುವ್ಯವಸ್ಥೆ ಕಾಪಾಡದ ಮೂರು ಗ್ರಾಮಗಳಲ್ಲಿ ಈ ಬಾರಿ ಮೊಹರಂ ನಿಷೇಧ ಹೇರಲು ಚಿಂತನೆ ನಡೆದಿದೆ ಎಂದು ಹೇಳಿದರು.

ಪಟ್ಟಣದ ಪೊಲೀಸ್ ಠಾಣೆ ಆವರಣದಲ್ಲಿ ಇತ್ತೀಚೆಗೆ ಮೊಹರಂ ಹಿನ್ನೆಲೆಯಲ್ಲಿ ಶಾಂತಿ ಸಭೆ ಹಾಗೂ ಅಂತರ್ ರಾಷ್ಟ್ರೀಯ ಮಾದಕ ವ್ಯಸನ ನಿವಾರಣಾ ದಿನದ ಅಂಗವಾಗಿ ಅವರು ಮಾತನಾಡಿ ನಮ್ಮ ದೇಶದಲ್ಲಿ ಹಬ್ಬಗಳು ಭಾವೈಕ್ಯತೆಯ ಸಂಕೇತವಾಗಿವೆ, ಈ ಹಬ್ಬವನ್ನು ಸರ್ವಧರ್ಮೀಯರು ಸಮಸ್ಯೆಯಾಗದಂತೆ ಹಳೆಯ ವೈಷಮ್ಯಗಳನ್ನು ಹಬ್ಬದ ನೆಪದಲ್ಲಿ ಕಲಹಕ್ಕೆ ಕಾರಣವಾಗದಂತೆ ಆಚರಿಸಬೇಕು, ಹಬ್ಬಗಳು ಜೀವನದಲ್ಲಿ ಖುಷಿ ಮೂಡಿಸುವಂತಾಗಬೇಕೇ ವಿನಃ ವಿಕೋಪಕ್ಕೆ ದಾರಿ ಮಾಡಬಾರದು ಎಂದು ಹೇಳಿದರು.

ಅಂತರರಾಷ್ಟ್ರೀಯ ಮಾದಕ ವ್ಯಸನ ವಿರೋಧಿ ದಿನ ಹಾಗೂ ಮುಂಬರುವ ಮೊಹರಂ ಹಬ್ಬದ ಕುರಿತು ಪಟ್ಟಣದ ಪೊಲೀಸ್ ಠಾಣೆಯಲ್ಲಿ ಸಭೆ ಕರೆಯಲಾಗಿತ್ತು.

ಮಾದಕ ವ್ಯಸನದಿಂದ ಯುವ ಪೀಳಿಗೆ ತನ್ನ ಸ್ವಾಸ್ಥ್ಯವನ್ನು ಹಾಳು ಮಾಡುಕೊಳ್ಳುತ್ತಿದೆ, ದುಷ್ಪರಿಣಾಮಗಳ ಬಗ್ಗೆ ಯುವಕರಲ್ಲಿ ವ್ಯಾಪಕವಾಗಿ ಜಾಗೃತಿ ಮೂಡಿಸುವುದು ಎಲ್ಲರ ಜವಾಬ್ದಾರಿಯಾಗಿದೆ ಸುತ್ತಮುತ್ತಲಿನ ಗ್ರಾಮಗಳಲ್ಲಿ ಗಾಂಜಾ ಬೆಳೆಯುತ್ತಿರುವ ಬಗ್ಗೆ ಮಾಹಿತಿ ಇದೆ ಹಂತ ಹಂತವಾಗಿ ದಾಳಿ ಮಾಡಲಾಗುವುದು, ಸಾರ್ವಜನಿಕರು ಇಲಾಖೆಗೆ ಮಾಹಿತಿ ತಿಳಿದಿದ್ದಲ್ಲಿ ಸಹಕರಿಸಬೇಕು ಎಂದು ಅವರು ಹೇಳಿದರು.

ಇದೇ ಸಂಧರ್ಭದಲ್ಲಿ ಆರೋಗ್ಯ ವೈದ್ಯಾಧಿಕಾರಿ ಡಾ. ಶಿವಪ್ರಸಾದ್ ಮೈತ್ರಿ ಮಾತನಾಡಿ, ಚಿಕ್ಕ ವಯಸ್ಸಿನಿಂದಲೇ ಮಕ್ಕಳಿಗೆ ಮಾದಕ ವಸ್ತುಗಳ ಅಪಾಯಗಳ ಬಗ್ಗೆ ತಿಳಿವಳಿಕೆ ನೀಡಬೇಕು, ಅವರಲ್ಲಿ ಮಾನಸಿಕ ಸ್ಥೈರ್ಯ ಮತ್ತು ಒತ್ತಡ ನಿಭಾಯಿಸುವ ಸಾಮರ್ಥ್ಯವನ್ನು ಬೆಳೆಸಬೇಕು, ಆಲ್ಕೋಹಾಲ್, ಕೆಫೀನ್, ಗಾಂಜಾ, ಓಪಿಯಾಯ್ಡ್‌ಗಳು, ತಂಬಾಕು, ಇನ್ಹಲೇಂಟ್‌ಗಳು, ಭ್ರಮೆಕಾರಕಗಳು, ಓವರ್ ದಿ ಕೌಂಟರ್ ಡ್ರಗ್‌ಗಳು, ಕೋರೆಕ್ಸ ಮುಂತಾದ ಹಾನಿಕಾರಕ ಮಾದಕ ವಸ್ತುಗಳ ಬಳಕೆ ನಿಲ್ಲಿಸಬೇಕು. ವ್ಯಸನಕ್ಕೆ ಬಲಿಯಾದವರನ್ನು ತಿರಸ್ಕರಿಸುವ ಬದಲು ಅವರಿಗೆ ಬೆಂಬಲ ನೀಡಿ ಚಿಕಿತ್ಸೆ ಪಡೆಯಲು ಸಹಾಯವಾಗಬೇಕು. ಯುವಕರು ಕ್ರೀಡೆ, ಕಲೆ, ಸಂಗೀತದಂತಹ ರಚನಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಪ್ರೋತ್ಸಾಹಿಸುವುದರಿಂದ ಕೆಟ್ಟ ಹವ್ಯಾಸಗಳಿಂದ ದೂರವಿರಲು ಸಹಾಯವಾಗುತ್ತದೆ ಎಂದು ಅವರು ಅಭಿಪ್ರಾಯಪಟ್ಟರು.

ಕಾರ್ಯಕ್ರಮದ ನಿರೂಪಣೆ ಮಾಡಿ ಪ್ರಾಸ್ತಾವಿಕ ನುಡಿಗಳನ್ನಾಡಿದ ನರೇಂದ್ರ ರೆಡ್ಡಿ ಅವರು ಮಾದಕ ವಸ್ತುಗಳ ಪಿಡುಗನ್ನು ನಿರ್ಮೂಲನೆ ಮಾಡಲು ಸಾರ್ವಜನಿಕರು ಸಹ ಒಟ್ಟಾಗಿ ಸೇರಿ ಈ ಪಿಡುಗಿನ ವಿರುದ್ಧ ಕೈ ಜೋಡಿಸಬೇಕು, ಕುಡಿದು ವಾಹನ ಚಾಲನೆ ಮಾಡಿ ಆಗುವ ಅನಾಹುತಗಳಿಂದ ಬಲಿಯಾಗಬೇಡಿ ಎಂದು ಹೇಳಿದರು. ಈ ವೇಳೆ ಊರಿನ ಪ್ರಮುಖರಾದ ಅಕ್ಬರ್, ಆಶಣ್ಣ ಬುದ್ಧ, ಜಗದೀಶ್ ಮೆಂಗಜಿ, ಭೀಮಶಪ್ಪ ಗುಡ್ಸೆ, ಬಾಬಾ ಮೊಹರಂ ಹಬ್ಬ ಹಾಗೂ ಮಾದಕ ವ್ಯಸನ ನಿರ್ಮೂಲನೆ ಕುರಿತಾಗಿ ಮಾತನಾಡಿದರು.

ಈ ಸಂದರ್ಭದಲ್ಲಿ ಅಬಕಾರಿ ಇಲಾಖೆಯ ಅಧಿಕಾರಿ ಪಾಂಡುರಂಗ ಮೇಧಾ, ಪುರಸಭೆ ಸದಸ್ಯ ನವಾಜರೆಡ್ಡಿ ಪೋ. ಪಾಟೀಲ್, ಮುಖಂಡರುಗಳಾದ ಸಾಯಬಣ್ಣ ಅಜಲಾಪುರ, ಶಿವಾಜಿ ಬಡಿಗೇರ್, ಸಾಬಲಪ್ಪ ತಲಾರಿ, ಭಾನುಪ್ರಕಾಶ್ ಮೇಧಾ, ಲಾಲಪ್ಪ ತಲಾರಿ, ಅಶೋಕ, ಹಣಮಂತು ಶನಿವಾರಂ, ನರಸಪ್ಪ ಬೋಯ, ಲಕ್ಷ್ಮಪ್ಪ ಲಿಕ್ಕಿ ಸೇರಿದಂತೆ ಪೊಲೀಸ್ ಇಲಾಖೆಯ ಸಿಬ್ಬಂದಿ ಚಂದ್ರ ರೆಡ್ಡಿ, ಶಿವರಾಮರೆಡ್ಡಿ, ರಾಜು ಕಲಾಲ್ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

**ವರದಿ: ಜಗದೀಶ್ ಕುಮಾರ್ ಭೂಮಾ**

ಕರುನಾಡ ಕಂದ
ಸಂಪುಟ 04 । ಸಂಚಿಕೆ 16
ದಿನಾಂಕ: 01–07–2025 ಪುಟಗಳು:16

# ವಾಸ್ತವ!

## (ಪ್ರಸ್ತುತ ಭಾರತದ ವಿಚಿತ್ರ ಸತ್ಯ ಕಥೆ)





ಜಿ.ಎಲ್.ನಾಗೇಶ್
ಧನ್ನೂರ (ಆರ್.)
ಬಸವಕಲ್ಯಾಣ ತಾಲೂಕು
ಬೀದರ್ ಜಿಲ್ಲೆ 585330
ಮೊ.9945686234
glnagesh1985@gmail.com

ಕೃಷಿ ವಿಜ್ಞಾನ, ತಂತ್ರಜ್ಞಾನದಲ್ಲಿ ಅಮೋಘವಾದ ಸಾಧನೆಗೈದು, ಪ್ರಪಂಚದ ಬಡ ರಾಷ್ಟ್ರಗಳಿಗೆ ಆರ್ಥಿಕವಾಗಿ ಅಭಿವೃದ್ಧಿ ಹೊಂದಲೆಂದು ಡಾಲರ್ ಲೆಕ್ಕದಲ್ಲಿ ಧನ ಸಹಾಯ ಮಾಡಿ ಪ್ರಪಂಚದ ಹಿರಿಯ ಅಣ್ಣ ಎಂದು ಕರೆಸಿಕೊಂಡಿದೆ ಅಮೆರಿಕ. ಗಗನಚುಂಬಿ ಕಟ್ಟಡಗಳು ನಿರ್ಮಾಣಗೊಂಡು ಮರಳುಗಾಡು ಪ್ರವಾಸಿ ತಾಣವಾಗಿ ಮಾರ್ಪಟ್ಟು ಪ್ರಪಂಚದ ಪ್ರವಾಸಿಗರನ್ನು ಕೈ ಬೀಸಿ ಕರೆಯುತ್ತಿದೆ ದುಬೈ. ಕೃತಕ ಚಂದ್ರ ಗ್ರಹ ಸೃಷ್ಟಿಸಿ, ಸೂರ್ಯ ಚಂದ್ರರನ್ನೇ ಕಾಪಿ ಮಾಡಿ ಇಡೀ ಪ್ರಪಂಚಕ್ಕೆ ವಿಸ್ಮಯಗೊಳಿಸಿದ್ದಾರೆ ಚೀನಾದ ವಿಜ್ಞಾನಿಗಳು. ತಲೆ ಕೆಳಗೆ ಮಾಡಿ ಉಲ್ಟಾ ಚಲಿಸುವ ರೈಲು, ಸ್ವಯಂಚಾಲಿತ ಕಾರು ಮತ್ತು ರಸ್ತೆಯ ಮೇಲೆ ಚಲಿಸುತ್ತಲೇ ಆಕಾಶದಲ್ಲಿ ಹಾರಾಡುವ ಕಾರುಗಳು ತಯಾರಿಸುವುದರಲ್ಲಿ ಬಿಜಿಯಾಗಿದೆ ಜಪಾನ್ ಎಂಬ ದೇಶ.

**ಪ್ರಪಂಚಕ್ಕೆ ನಾಗರಿಕತೆಯ ಪಾಠ ಕಲಿಸಿದ ಈ ನಮ್ಮ ಭವ್ಯ ಭಾರತ ಇವತ್ತೇನಾಗಿದೆ... ?**

ಮನುಷ್ಯರನ್ನು ಮನುಷ್ಯರಂತೆಯೇ ಕಾಣದೆ.. ಜಾತಿ ಧರ್ಮದ ಹೆಸರಿನಲ್ಲಿ ಮನುಷ್ಯರನ್ನು ನಾಯಿ ಹಂದಿಗಳಿಗಿಂತಲೂ ಕೀಳಾಗಿ ಕಾಣುತ್ತಾ ನಾಯಿ ಹಂದಿಗಳನ್ನು ಪೂಜಿಸುವ ಭಾರತವಾಗಿದೆ! ಹೆತ್ತ ತಾಯಿಯನ್ನು ನಾಯಿಯಂತೆ ಕಡೆಗಾಣಿಸಿ, ಆಕಳು ಎಂಬ ಪಶುವನ್ನು ಗೋಮಾತೆ ಎಂದು ಪೂಜಿಸಿ ಅದರ ಮೂತ್ರ ಕುಡಿದು ಸಗಣಿ ತಿಂದು ಸಂತೋಷ ಪಡುವ ಮೂರ್ಖ ಅಂ–ಧಭಕ್ತರ ಭಾರತವಾಗಿ ವಿಜೃಂಭಿಸುತ್ತಿದೆ ಭವ್ಯ ಭಾರತ....! ದಿನ ಬೆಳಗಾದರೆ ಸಾಕು, ಹಿಂದೂ– ಮುಸ್ಲಿಂ! ಪಾಕಿಸ್ತಾನ–ಚೀನಾ...! "ಚೀನಾದಲ್ಲಿ ಹಾವು ಕಪ್ಪೆ ಚೇಳು... ಏನೆಲ್ಲಾ ಹೊಲಸು ತಿನ್ನುತ್ತಾರೆ. ವಿಚಿತ್ರ ಜನಗಳು " ಎಂದು ಕೆಲ ಭಾರತೀಯರು ಚೀನಾದವರನ್ನು ತಿರಸ್ಕಾರದಿಂದ ಹೀಯಾಳಿಸಿದರೆ, ಚೀನಾದವರು–"ಭಾರತದಲ್ಲಿ ಕೆಲವರು ಆಕಳ ಉಚ್ಚೆ ಮತ್ತು ಅದರ ಸಗಣೆ ತಿನ್ನುತ್ತಾರೆ. ಛೀ.. ಥೂ! ವಿಚಿತ್ರ ಹೊಲಸು ಜನಗಳು!"ಎಂದು ಉಗಿಯುತ್ತಾರೆ. ಇವರಲ್ಲಿ ಹೊಲಸು ತಿನ್ನುವ ಅತಿ ವಿಚಿತ್ರ ಜನಗಳು ಯಾರು ಎಂಬುವುದು ಓದುಗರ ವಿವೇಚನೆಗೆ ಬಿಡುತ್ತೇನೆ.

**ಈಗ ನಾನು ಬರೆಯಲು ಆರಿಸಿಕೊಂಡಿರುವ ಕಥೆ ಚಂದಮಾಮ, ಬಾಲಮಿತ್ರ, ಕಾಗಕ್ಕ ಗುಬ್ಬಕ್ಕರ ಕಲ್ಪನೆ ಬರಹ ಅಲ್ಲ. ಇದು... ಪ್ರಸ್ತುತ ಭಾರತದ ವಿಚಿತ್ರ ಸತ್ಯ ಕತೆ! ಇದನ್ನು ಈಗ ಒಂದು ಸಲ ಓದಿ...**

ಅದು ಕಾಡು!

ಸುಂದರವಾದ ಕಾಡು !

ಸಂಪತ್ತುಭರಿತ...ಹಚ್ಚ ಹಸಿರಾದ ಕಾಡು !

ಅಲ್ಲಿ...ಕಾಡಿನಲ್ಲಿ ಜಿಂಕೆಯೊಂದು ಓಡಿ ಬರುತ್ತಿದೆ.

ಹುಲ್ಲನ್ನು ಮೇಯುತಿದ್ದ ಹಸು ಭಯ ಗಾಬರಿಯಿಂದ ಬೆಚ್ಚಿಬಿದ್ದು ಓಡಿ ಬರುತ್ತಿರುವ ಜಿಂಕೆಯನ್ನು ಕಂಡು– "ಯಾಕೆ ಈ ರೀತಿ ಭಯ, ಗಾಬರಿಯಿಂದ ಓಡಿ ಬರುತ್ತಿದ್ದೀಯಾ?"ಎಂದು ಕೇಳಿತು. ಅದಕ್ಕೆ – **ಜಿಂಕೆ**

" ಪೊಲೀಸರು ಕಾಡಲ್ಲಿರುವ ಹುಲಿ ಸಿಂಹ ಚಿರತೆಯಂಥ ಬಲಿಷ್ಠ–ಕ್ರೂರ ಮೃಗಗಳನ್ನು ಮತ್ತು ಆನೆಗಳಂತ ದೊಡ್ಡ ದೊಡ್ಡ ಪ್ರಾಣಿಗಳನ್ನು ಹಿಡಿದುಕೊಂಡು ಹೋಗಿ ಜೈಲಲ್ಲಿ ಹಾಕುತ್ತಿದ್ದಾರೆ. ಅದಕ್ಕೆ ನಾನು ಹೆದರಿ ಈ ರೀತಿ ಓಡಿ ಬರುತ್ತಿದ್ದೇನೆ" ಎಂದು ಹೇಳಿತು ಜಿಂಕೆ.

**ಹಸು**–"ಪೊಲೀಸರು ಜೈಲಿಗೆ ಹಾಕುತ್ತಿರುವುದು ದೊಡ್ಡ ದೊಡ್ಡ ಪ್ರಾಣಿಗಳನ್ನು ಮತ್ತು ಕ್ರೂರ ಮೃಗಗಳನ್ನು, ನೀನು ಕ್ರೂರ ಮೃಗ ಅಲ್ವಲ್ಲ.ಮತ್ತೆ ನೀನ್ಯಾಕೆ ಈ ರೀತಿ ಭಯ ಗಾಬರಿಯಿಂದ ಓಡಿ ಬರ್ತಿದ್ದೀಯಾ?" "ನಾನು ಕ್ರೂರ ಮೃಗ ಅಲ್ಲ. ಆನೆ ಅಂತಹ ದೊಡ್ಡ ಪ್ರಾಣಿಯೂ ಸಹ ಅಲ್ಲ. ನಾನು ಸಾಧು ಪ್ರಾಣಿ ಅಂತ ನನಗೆ ಮತ್ತು ನಿನಗೆ ಗೊತ್ತು. ಆದರೆ ಇದು ಇಂಡಿಯಾ... ಭಾರತ ಇದು! ನಾನು ಸಾಧು ಪ್ರಾಣಿ ಅಂತ ಪ್ರೂ ಮಾಡೋಕ್ಕೆ ಇಲ್ಲಿ ಹತ್ತಾರು ವರ್ಷಗಳು ಕೋರ್ಟು ಕಚೇರಿ ಅಂತ ಅಲೆಯಬೇಕಾಗಬಹುದು. ಅದಕ್ಕೆ, ಎಲ್ಲಿಯ ಕಿರಿಕಿರಿ ಅಂತ ಹೆದರಿ ಈ ರೀತಿ ಓಡಿ ಬರುತ್ತಿದ್ದೇನೆ" ಎಂದು ಹೇಳಿತು ಜಿಂಕೆ. ಜಿಂಕೆಯ ಮಾತನ್ನು ಕೇಳಿದ ಹಸು, ಅದೂ ಸಹ ಓಡಲಾರಂಭಿಸಿತು.

ಆಗ ಜಿಂಕೆ ಹಸುವಿನ ಜೊತೆಗೆ ಓಡುತ್ತಾ ಕೇಳಿತು –

"ಅರೆ... ಮತ್ತೆ ನೀನೇಕೆ ಓಡಿ ಹೋಗ್ತಿದ್ದೀಯಾ? ನಿನ್ನನ್ನು ಗೋಮಾತೆ ಎಂದು ಪೂಜಿಸುತ್ತಾರೆ. ನಿನ್ನ ಮೂತ್ರ ಅಮೃತವೆಂದು ಕುಡಿಯುತ್ತಾರೆ. ಸಗಣೆ ಪ್ರಸಾದ ಎಂದು ತಿನ್ನುತ್ತಾರೆ. ನೀನು ಭಯ ಪಡುವ ಅವಶ್ಯಕತೆ ಇಲ್ಲ ಆಕಳಕ್ಕ." "ಇಲ್ಲ... ನನಗೆ ಈ ದುಷ್ಟರ ಬಗ್ಗೆ ನಂಬಿಕೆ ಇಲ್ಲ. ಯಾವಾಗ ಇವರು ಗೋಮಾತೆ ಎಂದು ಪೂಜಿಸ್ತಾರೋ, ಯಾವಾಗ ನನ್ನ ಮಾಂಸಕ್ಕಾಗಿ, ದುಡ್ಡಿಗಾಗಿ ಕಟುಕರಿಗೆ ವಿದೇಶಕ್ಕೆ ಮಾರಿಕೊಳ್ಳುತ್ತಾರೋ ಗೊತ್ತಿಲ್ಲ. ಯಾವುದಕ್ಕೂ ಹುಷಾರಾಗಿರಬೇಕು. ಕೊಟ್ಟಿಗೆಯಲ್ಲಿ ಹಾಲು ಕುಡಿಯುವ ನನ್ನ ಹಸುಗರು ಇದೆ. ನಾನು ಹೋಗ್ತೇನೆ ಜಿಂಕೆ" ಎಂದು ಹೇಳುತ್ತಾ ಹಸು ಓಡಿ ಬಂದು ತನ್ನ ಕೊಟ್ಟಿಗೆ ಸೇರಿಕೊಂಡಿತ್ತು. ಜಿಂಕೆ ಮತ್ತು ಹಸು ಓಡಿ ಹೋಗಿದ್ದನ್ನು ಕಂಡು ಕಾಡಿನಲ್ಲಿದ್ದ ಇತರೆ ಚಿಕ್ಕಪುಟ್ಟ ಪ್ರಾಣಿಗಳೂ ಸಹ ಗಾಬರಿಯಿಂದ ಹೆದರಿ ತಮ್ಮ ತಮ್ಮ ಬಿಡಾರವನ್ನು ಸೇರಿಕೊಂಡು ಅಡಗಿ ಕುಳಿತವು.

"ಲೇ ಕತ್ತೆ, ನಿನಗೆ ಎಷ್ಟು ಅಂತ, ಎಲ್ಲಿ ಅಂತ ಹುಡುಕೋದು! ನೀನು ಇಲ್ಲಿ ಕುಳಿತಿದ್ದೀಯಾ?" "ಯಾಕೆ ನರಿ ಅಣ್ಣ, ನನ್ನನ್ನು ಯಾಕೆ ಹುಡುಕುತ್ತಿದ್ದೀಯಾ? ಏನು ವಿಷಯ? ತಿಪ್ಪೆಯಲ್ಲಿನ ಕಸ ಕಡ್ಡಿ ತಿಂದು ರಸ್ತೆ ಬದಿಯಲ್ಲಿ ಬೆಳೆದಿರೋ ಹುಲ್ಲನ್ನು ಮೈಕೊಂಡು ಹೊಳೆಯಲ್ಲಿ ನೀರು ಕುಡಿದು ಬಂದು ಈಗ್ತಾನೆ ಆರಾಮಾಗಿ ಕುಳಿತು ವಿಶ್ರಾಂತಿ ಪಡೆಯುತ್ತಿದ್ದೇನೆ. ನನ್ನನೇಕೆ ಹುಡುಕೊಂಡು ಬಂದೆ ನರಿ ಅಣ್ಣ?" "ನಿನಗೀಗ ರಾಜಯೋಗ ಕೂಡಿ ಬಂದಿದೆ ಕಣೋ ಕತ್ತೆ." "ನೀನೇನು ಹೇಳುತ್ತಿದ್ದೀಯ ನರಿ ?" "ನೀನು ಈ ಕಾಡಿನ ರಾಜ ಆಗಿ ಮೆರೆಯುವುದರಲ್ಲಿದ್ದೀಯ ಅಂತ ಹೇಳುತ್ತಿದ್ದೇನೆ ಕಣೋ ಕತ್ತೆ."

"ಏನು ತಮಾಷೆ ಮಾಡ್ತೀಯಾ ನರಿ ? ನಾನು ಈ ಕಾಡಿನ ರಾಜ ಆದರೆ ಇಲ್ಲಿರುವ ಸಿಂಹ ಹುಲಿ ಚಿರತೆ ಆನೆ ನನ್ನ ಸೇವಕರಾಗಲು ಸಾಧ್ಯನಾ?" "ನೀನು ರಾಜ ಆದ್ಮೇಲೆ ಸಿಂಹ ಯಾಕೆ, ಅದರ ಅಮ್ಮ ಕೂಡಾ ನಿನ್ ಸೇವೆಗೆ ಬರ್ತಾಳೆ ಕಣೋ ಕತ್ತೆ." "ತಮಾಷೆ ಮಾಡೋದಕ್ಕೂ ಒಂದು ಮಿತಿ ಇರುತ್ತದೆ. ಸುಮ್ನೆ ತಮಾಷೆ ಮಾಡಬೇಡ ಅಣ್ಣ" "ತಮಾಷೆ ಅಲ್ಲ ಕಣೋ ಸ್ನೇಹಿತ ಸೀರಿಯಸ್ ಆಗಿ ಹೇಳ್ತಾ ಇದ್ದೇನೆ. ನಾನು ಹೇಳುವ ಹಾಗೆ ನೀನು ಕೇಳುವುದಾದರೆ ಈ ಕಾಡಿಗೆ ನೀನೇ ರಾಜ, ನಾನೇ ಪ್ರಧಾನಿ." "ಏನ್ ಹೇಳ್ತಿದ್ದೀಯಾ ನರಿ ನೀನು! ನಿನ್ನ ಬುದ್ಧಿ ನೆಟ್ಟಗಿದೆಯಾ? ಈ ಕಾಡಲ್ಲಿ ಹುಲಿ ಸಿಂಹ ಚಿರತೆ ಆನೆ ಅಂತಹ ಬುದ್ಧಿವಂತ ದೊಡ್ಡ ದೊಡ್ಡ ಪ್ರಾಣಿಗಳಿರುವಾಗ ನನ್ನಂಥ ಕತ್ತೆ ಮತ್ತು ನಿನ್ನಂಥ ನರಿ ರಾಜ – ಪ್ರಧಾನಿಯಾಗಲು ಸಾಧ್ಯನಾ?" "ಅದಕ್ಕೆ ನೋಡು ನಿನ್ನನ್ನು ಮೂರ್ಖ ಕತ್ತೆ ಅನ್ನೋದು! ನಿನಗೆ ಈ ವಿಷಯ ಇನ್ನೂ ಗೊತ್ತಿಲ್ವಾ?"

"ಯಾವ ವಿಷಯ?"

"ಆನೆ ಚಿರತೆ ಹುಲಿ ಸಿಂಹ... ಇಂಥ ದೊಡ್ಡ ದೊಡ್ಡ ಪ್ರಾಣಿಗಳನ್ನೆಲ್ಲಾ ನ್ಯಾಯ, ನೀತಿ, ಜಾತಿ, ಧರ್ಮದ ಹೆಸ–ರಿನಲ್ಲಿ ಷಡ್ಯಂತ್ರ ರಚಿಸಿ ಅವುಗಳನ್ನೆಲ್ಲಾ ಈಗಾಗಲೇ ಜೈಲಿಗೆ ಹಾಕಿಸಿದ್ದೇವೆ. ಇನ್ನುಳಿದವುಗಳನ್ನೆಲ್ಲಾ ನಮ್ಮವರು ತಮ್ಮ ಕಂಟ್ರೋಲ್ ನಲ್ಲಿ ಇಟ್ಟುಕೊಂಡಿದ್ದಾರೆ. ಇದನ್ನು ಹೀಗೆ ಮುಂದುವರಿಸಬೇಕು ಅಂದ್ರೆ ನಿನ್ನಂತ ಕತ್ತೆ ರಾಜನಾಗಬೇಕು. ನನ್ನಂತಹ ಠಕ್ಕ ನರಿ ತೆರೆ ಮರೆಯಲ್ಲಿ ನಿನ್ನ ಹೆಸರಲ್ಲಿ ರಾಜ–ಕೀಯ ಮಾಡಬೇಕು..." ಎಂದು ನರಿ ತನ್ನ ಸ್ನೇಹಿತ ಕತ್ತೆಗೆ ಇನ್ನೂ ಅದೇನೇನೋ ಹೇಳಿ ಮಂಕುಬೂದಿ ಎರಚಿ ಮರಳು ಮಾಡಿತ್ತು.

"ಕೇಳ್ರಪ್ಪೋ ಕೇಳಿ... ನಾಳೆ ರಾತ್ರಿ 12 ಗಂಟೆಗೆ ಸರಿಯಾಗಿ ಕಾಡಿನ ರಾಜ್ಯ ಯಾರಾಗಬೇಕೆಂಬರುವುದರ ಕು–ರಿತು ಸಭೆ ನಡೆಸಲಾಗುತ್ತಿದೆ; ಆದ ಕಾರಣ ಕಾಡಿನ ರಾಜ ಆಗ ಬಯಸುವವರು ಮತ್ತು ಕಾಡಿನ ನಿವಾಸಿಗಳಿಗೆಲ್ಲರೂ ಬರಬೇಕಂತೆ ನೋಡ್ರಪ್ಪೋ..." ಎಂದು ಕೋಣ ಕಾಡಿನ ತುಂಬ ಓಡಾಡಿ ಡಂಗುರ ಸಾರಿತು. ತೋಳ ಮತ್ತು ನರಿ ಒಂದುಗೂಡಿ ನಾಯಿ ಅಥವಾ ಕತ್ತೆಗೆ ಕಾಡಿನ ರಾಜನಾಗಿಸುವಂತೆ ಅದೇನೋ ಸಂಚು ಮಾಡಿದವು. ದಿಲ್ಲಿ ಎಂಬ ದೊಡ್ಡ ಕಾಡಿನವರೆಗೂ ಓಡಬೇಕು. ಓಟದ ಸ್ಪರ್ಧೆಯಲ್ಲಿ ಯಾರು ಗೆಲುವು ಸಾಧಿಸುತ್ತಾರೋ ಅವರಿಗೆ ಕಾಡಿನ ರಾಜ್ಯ ಎಂದು ಘೋಷಿಸಲಾಗುತ್ತದೆ ಎಂದು ನಿರ್ಧರಿಸಲಾಯಿತು.

ಓಟದ ಸ್ಪರ್ಧೆ ಪ್ರಾರಂಭಗೊಂಡಿತು. ನಾಯಿ ಮತ್ತು ಕತ್ತೆ ಒಡಲಾರಂಭಿಸಿದವು. ನಾಯಿ ಮೊದಲಿಗೆ ತುಂಬಾ ವೇಗವಾಗಿ ಓಡಲಾರಂಭಿಸಿತ್ತು. ಕತ್ತೆ ಹಿಂದೆ ಬಿದ್ದಿತ್ತು. ನಾಯಿ ಪಟ್ಟಣವೆಂಬ ದಟ್ಟವಾದ ಕಾಡಿನವರೆಗೂ ಓಡಿ ಬಂದಾಗ ಅಲ್ಲೇನು ನಡಿತು?

ತನ್ನದೇ ಜಾತಿಯ ಅಲ್ಲಿನ ಹತ್ತಾರು ನಾಯಿಗಳು ಸಮಸ್ತ ಕಾಡಿನ ರಾಜನಾಗುವ ಕನಸನ್ನು ಹೊತ್ತು ಓಡಿ ಬರುತ್ತಿರುವ ನಾಯಿ ಮೇಲೆ ಕೆಟ್ಟದಾಗಿ ಬೊಗಳುತ್ತಾ ನುಗ್ಗಿದ್ದವು. ತುಂಬಾ ಸಮಯದವರೆಗೂ ತನ್ನ ಪ್ರಾಣದ ಹಂಗನ್ನು ತೊರೆದು ಸಮಸ್ತ ಕಾಡಿನ ರಾಜ ತಾನು ಆಗಲೇಬೇಕು ಎಂಬ ನಿರ್ಧಾರದಿಂದ ಹೋರಾಟ ಮಾಡಿ ಅಲ್ಲಿಂದ ಮುನ್ನುಗಿ ನಗರವೆಂಬ ಕಾಡಿನವರಿಗೂ ಓಡಿ ಬಂದಿತ್ತು ಆಗ ಅಲ್ಲಿಯೂ ಸಹ ತನ್ನದೇ ಜಾತಿಯ ಬಲಿಷ್ಟವಾದ ಅನೇಕ ನಾಯಿಗಳು ರಾಜನಾಗಲು ಹೊರಟಿರುವ ನಾಯಿಯ ಮೇಲೆ ಭೀಕರ ದಾಳಿ ಮಾಡಿದವು.

ನಾಯಿ – ನಾಯಿಗಳ ಮಧ್ಯ ಕಿತ್ತಾಟ ಬಡಿದಾಟ ಹೊಡೆದಾಟ ನಡೆಯಿತು ...! ಇದರ ಲಾಭವನ್ನು ಪಡೆದ ಕತ್ತೆ ದಿಲ್ಲಿ ಎಂಬ ಮಹಾ ಕಾಡನ್ನು ತಲುಪಿ ಅಮೋಘವಾದ ವಿಜಯ ಸಾಧಿಸಿ ಕಾಡಿನ ರಾಜಗದ್ದುಗೆ ತನ್ನದಾಗಿಸಿಕೊಂಡಿತ್ತು. ತೋಳ ನರಿಗಳು ಬಂದು ಗೆದ್ದ ಕತ್ತೆ ರಾಜನನ್ನು ಸಕಲ ರಾಜ್ಯ ಗೌರವದೊಂದಿಗೆ ಮಾನ ಸನ್ಮಾನ ಗೈದವು. ಸನ್ಮಾನ ಸ್ವೀಕರಿಸಿದ ಕತ್ತೆ ರಾಜ ಗದ್ದುಗೆಯ ಮೇಲೆ ಕುಳಿತು ತೋಳ ಮತ್ತು ನರಿಗಳ ಸಲಹೆಯಂತೆ ರಾಜ್ಯಭಾರ ಮಾಡತೊಡಗಿತ್ತು. ದೇಶ ವಿದೇಶದ ಕಾಡು ಮೇಡುಗಳಿಗೆ ಅಲೆಯುತ್ತಾ– ಶೋಕಿ ಮಾಡುತ್ತಾ ಕಾಲ ಕಳೆಯಲಾರಂಭಿಸಿತ್ತು. ತೋಳ ಮತ್ತು ನರಿಗಳು ಕಾಡಿನ ಇತರ ಮೂರ್ಖ ಪ್ರಾಣಿಗಳನ್ನು ಮಹಾಮೂರ್ಖಗೊಳಿಸಿ ತಮ್ಮ ಗುಲಾಮರಾಗಿ ಮಾಡಿಕೊಂಡು ದೇವರು ಧರ್ಮದ ಹೆಸರಿನಲ್ಲಿ ಕಾಡಿನ ತುಂಬಾ ಅರಾಜಕತೆ ಹರಡಿಸಿ ಅಟ್ಟಹಾಸದಿಂದ ಮೆರೆಯತೊಡಗಿದವು. ಕಾಡಿನ ಮಹಾ ಮೂರ್ಖ ಗುಲಾಮ ಪ್ರಾಣಿಗಳು ತೋಳ ನರಿಗಳ ಗುಲಾಮಗಿರಿ ಮಾಡಿಕೊಂಡು, ಗುಲಾಮಗಿ–ರಿಯಲ್ಲಿ ಮಜವನ್ನು ಕಾಣುತ್ತಾ ಹೀನಾಯವಾದ ವಿಚಿತ್ರ ಬಾಳು ಬಾಳ ತೊಡಗಿದವು ಎಂದು ಹೇಳಲು ಬಹಳ ವಿಷಾದ ಉಂಟಾಗುತ್ತದೆ ಬಂಧುಗಳೇ...!

**ವಿಶೇಷ ಸೂಚನೆ :**

ಪ್ರಿಯ ಓದುಗ ಮಿತ್ರರೆ, ಕಲ್ಪನೆ ಬರಹದಂತೆ ಕಂಡು ಬರುವ ಈ ಕಥೆ, ಕಲ್ಪನೆ ಬರಹ ಅಲ್ಲ. ಇದು... ಪ್ರಸ್ತುತ ಭಾರತದ, ನೈಜ ಭಾರತದ, ದುಷ್ಟ ಮತ್ತು ಮೂರ್ಖ ಭಾರತೀಯರ ವಿಚಿತ್ರ ಸತ್ಯ ಕತೆ ಇದಾಗಿದೆ! ಈ ಕಥೆ ಸೋಶಿಯಲ್ ಮೀಡಿಯಾದಿಂದ ಸ್ಫೂರ್ತಿ ಪಡೆದು ಮೂರ್ಖ ಭಾರತೀಯರ ಜಾಗೃತಿಗಾಗಿ ಇದನ್ನು ವಿಶಿಷ್ಟ ವಿಧಾನದಲ್ಲಿ ಬರೆಯಲಾಗಿದೆ. ಇದರಲ್ಲಿ ಯಾವುದೇ ರೀತಿ ದುರುದ್ದೇಶ ಇರುವುದಿಲ್ಲವೆಂದು ಸ್ಪಷ್ಟಪಡಿಸುತ್ತೇನೆ.

ಕರುನಾಡ ಕಂದ
ಸಂಪುಟ 04 । ಸಂಚಿಕೆ 16
ದಿನಾಂಕ: 01-07-2025 ಪುಟಗಳು:16

### ಗ್ರಾ.ಪಂ. ಸದಸ್ಯರ ಮಹಾ ಒಕ್ಕೂಟದ ವತಿಯಿಂದ ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮನವಿ

# ಪಂಚಾಯತಿಗಳಲ್ಲಿನ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಲು ಗಡುವು

**ಯಾದಗಿರಿ/ ಗುರುಮಠಕಲ್:** ತಾಲೂಕಿನ ಚಿನ್ನಕಾರ ಗ್ರಾಮ ಪಂಚಾಯತಿ ಸೇರಿದಂತೆ 18 ಗ್ರಾಮ ಪಂಚಾಯತಿಗಳ ಪ್ರತಿ ಕೆಲಸಕ್ಕೂ ಲಂಚ ಪಡೆಯುವ ಭ್ರಷ್ಟ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮಕ್ಕೆ ಆಗ್ರಹಿಸಿ ಕ.ರಾ.ಗ್ರಾ.ಪಂ.ಸ.ಮ. ಒಕ್ಕೂಟದ ಅಧ್ಯಕ್ಷ ಸುರೇಶ ಚಿನ್ನಾ ರಾಠೋಡ ತಾ. ಪಂ. ಕಾರ್ಯನಿರ್ವಾಹಕ ಅಧಿಕಾರಿ ಅಂಬರೀಷ ಪಾಟೀಲ ಅವರಿಗೆ ಮನವಿ ನೀಡಿದರು.



ತಾಲೂಕ ಪಂಚಾಯತ್ ಆವರಣದಲ್ಲಿ ಮನವಿ ನೀಡಿ ಮಾತನಾಡಿದ ಅವರು, ಗ್ರಾಮ ಪಂಚಾಯತ ಪಿಡಿಓ ಮತ್ತು ಎಲ್ಲಾ ಸಿಬ್ಬಂದಿ ವರ್ಗಾದವರ ಬೇಡಿಕೆ ಮತ್ತು ಲಂಚ ಪಡೆಯುವ ಪ್ರಯುಕ್ತ ಎಲ್ಲಾ ಕಾಮಗಾರಿಗಳು ಕುಂಠಿತವಾಗಿದೆ ಎಂದು ಖಾರವಾಗಿ ಆರೋಪ ಮಾಡಿದರು.

**ಹೀಗೂ ಉಂಟು ನೋಡಿ ಲಂಚದ ಪಟ್ಟಿ...**

ಚಿನ್ನಕಾರ ಗ್ರಾಮ ಪಂಚಾಯತ್ ನಲ್ಲಿ ಪ್ರಧಾನ ಮಂತ್ರಿ ಆವಾಸ್ ಯೋಜನೆಯ ವಸತಿ ಯೋಜನೆಯಲ್ಲಿ ಪ್ರತಿ ಮನೆಗೆ 3,000 ರೂಪಾಯಿ ಲಂಚದ ಬೇಡಿಕೆಯಿದೆ ರೈತರಿಂದ ಜಮೀನಿನ 9-11 ಮಾಡಲು 12,000 ರೂಪಾಯಿ ಲಂಚದ ಬೇಡಿಕೆ ಇದೆ.

ಚಿನ್ನಾಕಾರ ಸೇರಿದಂತೆ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ 15 ನೇ ಹಣಕಾಸು ಕಾಮಗಾರಿ ಮಾಡಿದರೆ ಪಿಡಿಓ-5% ಹಣ, ಅಧ್ಯಕ್ಷರು- 5%ಹಣ, ಎಇ-5%ಹಣ, ಎಇಇ- 2%ಹಣ, ಕಂಪ್ಯೂಟರ್ ನಿರ್ವಾಹಕ - 2%ಹಣ, ಅಂದಾಜು ಮಾಡುವವರು 1000 ರೂಪಾಯಿ ಹಣ, ಜಿ.ಎಸ್.ಟಿ (ಎಮ್.ಬಿ) ಮಾಡುವವರು 1000 ರೂಪಾಯಿ, ಜಿ.ಪಿ.ಎಸ್ ಮಾಡುವವರು 1000 ರೂಪಾಯಿ ಲಂಚದ ಬೇಡಿಕೆ ಇಡುತ್ತಿದ್ದಾರೆ.

ಯಾವುದೇ ಸಭೆ ಮಾಡದೇ ಚಿನ್ನಕಾರ ಗ್ರಾಮ ಪಂಚಾಯತಿಯಲ್ಲಿ ಒಂದೇ ತಿಂಗಳಿನಲ್ಲಿ ಸುಮಾರು 5-6 ಲಕ್ಷ ರೂ.ಗಳ ಬಿಲ್ ಪಾವತಿ ಮಾಡಿದ್ದಾರೆ ಎಂದು ಆರೋಪಿಸಿದರು. ನೀರಿನ ಸಮಸ್ಯೆಗೆ ಪರಿಹಾರ ಕಲ್ಪಿಸಿದ ರೈತ ಜನರಿಗೆ (ತಮ್ಮ ಬೋರವೆಲ್ ಮುಖಾಂತರ) 1 ವರ್ಷ ಕಳೆದರೂ ಅವರಿಗೆ ಬಿಲ್ ಪಾವತಿ ಮಾಡಿರುವುದಿಲ್ಲ. ನರೇಗಾ ಕಾಮಗಾರಿಯ ಕುರಿತು ಯಾವುದೇ ಒಂದು ಪಂಚಾಯತಿಯಲ್ಲಿ ಸಭೆ ಕರೆದಿರುವುದಿಲ್ಲ ಹಾಗೂ ಕಾಮಗಾರಿ ಮುಗಿದು 6 ತಿಂಗಳು ಕಳೆದರೂ ಪಾವತಿ ಇಲ್ಲ. ಚಿನ್ನಕಾರ ಗ್ರಾಮ ಪಂಚಾಯತಿಯಲ್ಲಿ ಎಲ್ಲಾ ಸದಸ್ಯರಿಗೆ ಒಂದೇ ತರಹದ ಗೌರವದಿಂದ ನೋಡುವುದಿಲ್ಲ, ಬದಲಾಗಿ ಕೆಲವರಿಗೆ ಏಕವಚನ ಶಬ್ಧ ಬಳಕೆ ಮಾಡುತ್ತಿದ್ದಾರೆ. ಸರಿಯಾದ ಸಮಯಕ್ಕೆ ಗ್ರಾಮ ಪಂಚಾಯತ ಗೌರವಧನ ಪಾವತಿ ಮಾಡುತ್ತಿಲ್ಲ ಎಂದು ಅವರು ಆರೋಪಿಸಿ ಇವುಗಳ ಸುಧಾರಣೆಗೆ ಆಗ್ರಹ ಮಾಡಿ 10 ದಿನಗಳಲ್ಲಿ ಗಡುವು ನೀಡಿ, ಪ್ರತಿಕ್ರಿಯಿಸದಿದ್ದಲ್ಲಿ ಜಿಲ್ಲಾ ಪಂಚಾಯತ್ ಗೆ ಮುತ್ತಿಗೆ ಹಾಕಲಾಗುವುದು ಎಂದು ಅವರು ಹೇಳಿದರು.

ಈ ಸಂದರ್ಭದಲ್ಲಿ ಮಹಾ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಆನಂದ ಭಜಂತ್ರಿ, ಭೀಮರಾಯ, ಹಣಮಂತ, ಆನಂದ ವಿಶ್ವಕರ್ಮ, ನಾರಾಯಣ, ಆನಂದ ಎಂಪಾಡ ಸೇರಿದಂತೆ ವಿವಿಧ ಗ್ರಾಮದ ಸದಸ್ಯರು ಹಾಜರಿದ್ದರು.

**ವರದಿ: ಜಗದೀಶ್ ಕುಮಾರ್ ಭೂಮಾ**

# ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ವತಿಯಿಂದ ಸಮಾಜಮುಖಿ ಸೇವೆಗಳು

**ಬಳ್ಳಾರಿ / ಕಂಪ್ಲಿ :** ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ವತಿಯಿಂದ ಎಮ್ಮಿಗನೂರಿನಲ್ಲಿ ವಿಶ್ವ 'ತಂಬಾಕು ವಿರೋಧಿ' ದಿನ ಆಚರಿಸಲಾಯಿತು.





ತಂಬಾಕು ಸೇವನೆಯು ಮನುಷ್ಯನ ಮೇಲೆ ಉಂಟುಮಾಡುವ ದುಷ್ಪರಿಣಾಮಗಳನ್ನು ಯುವ ಸಮುದಾಯಕ್ಕೆ ಮನಮುಟ್ಟುವಂತೆ ತಿಳಿಸಿ ಹೇಳಬೇಕಾಗಿರುವುದು ಇಂದಿನ ಅಗತ್ಯವಾಗಿದೆ, ತಂಬಾಕು ಸೇವನೆಯಿಂದ ಯುವ ಪೀಳಿಗೆಯನ್ನು ರಕ್ಷಿಸುವುದು ಹೇಗೆ ಎಂಬ ಬಗ್ಗೆ ಯೋಜನೆಗಳನ್ನು ರೂಪಿಸುವುದರ ಜತೆಗೆ ಅವರಲ್ಲಿ ಈ ಬಗ್ಗೆ ಅರಿವು ಮೂಡಿಸಿ, ತಂಬಾಕು ನಿಯಂತ್ರಣದ ವಿಚಾರದಲ್ಲಿ ನೂತನ ಯೋಜನೆಗಳನ್ನು ಕಾರ್ಯಕ್ರಮವನ್ನು ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ. ಸಿ. ಟ್ರಸ್ಟ್ ಸಂಸ್ಥೆಯು ಹಮ್ಮಿಕೊಂಡಿತ್ತು.

ಕಂಪ್ಲಿ ತಾಲೂಕಿನ ಯೋಜನಾಧಿಕಾರಿಗಳಾದ ಶ್ರೀ ರಾಘವೇಂದ್ರ ಪ್ರಾಸ್ತಾವಿಕವಾಗಿ ಮಾತನಾಡಿ 'ಮನೆಯೇ ಮೊದಲ ಪಾಠ ಶಾಲೆ, ತಾಯಿಯೇ ಮೊದಲ ಗುರು'. ತಾಯಂದಿರು ಮನಸ್ಸು ಮಾಡಿದರೆ ಮಕ್ಕಳು ದುಶ್ಚಟಗಳಿಗೆ ಬಲಿಯಾಗುವುದನ್ನು ತಡೆಗಟ್ಟಲು ಸಾಧ್ಯ' ಎಂದು ತಿಳಿಸಿ ವಿವಿಧ ಯೋಜನೆಗಳ ವಿವಿಧ ಸೌಲಭ್ಯಗಳಡಿಯಲ್ಲಿ, ಸುಜ್ಞಾನ ನಿಧಿ, ಶಿಷ್ಯವೇತನ, ವಿದ್ಯಾರ್ಥಿಗಳು ಐ.ಟಿ.ಐ, ಡಿಪ್ಲೋಮಾ, ಇಂಜಿನಿಯರಿಂಗ್, ನರ್ಸಿಂಗ್, ಟಿ.ಸಿ.ಎಚ್, ಎಲ್ ಎಲ್ ಬಿ, ಈ ರೀತಿಯ ಇನ್ನೂ ಹಲವು 3 ವರ್ಷದ ಕೋರ್ಸ್ ಗಳಿಗೆ ಪ್ರತಿ ತಿಂಗಳು 400/- ರಂತೆ 5 ವರ್ಷದ ವೃತ್ತಿಪರ ಕೋರ್ಸ್ ಗಳಿಗೆ ಪ್ರತಿ ತಿಂಗಳು 1000/- ರಂತೆ ವಿದ್ಯಾರ್ಥಿಗಳಿಗೆ ಸ್ಕಾಲರ್ಶಿಪ್ ನೀಡುತ್ತಿರುವ ಬಗ್ಗೆ ಮತ್ತು ಶಾಲೆಗಳಿಗೆ ಜ್ಞಾನದೀಪ ಶಿಕ್ಷಕರನ್ನು ನೀಡುತ್ತಿರುವ ಬಗ್ಗೆ ಶಾಲೆಗಳಿಗೆ ಕುಡಿಯುವ ನೀರಿನ ವ್ಯವಸ್ಥೆ, ಆಟೋಪಕರಣ ಮತ್ತು ಪೀಠೋಪಕರಣ ನೀಡಲು ವ್ಯವಸ್ಥೆಗಳು ಇರುವ ಬಗ್ಗೆ ಮಾಹಿತಿ ನೀಡಿದರು.

ಸಂಪನ್ಮೂಲ ವ್ಯಕ್ತಿಗಳಾಗಿ ಶಿಕ್ಷಕರಾದ ರಾಮು ಅವರು ಮಾತನಾಡಿ ಕಾಲೇಜು ವಿದ್ಯಾರ್ಥಿಗಳಿಗೆ ತಂಬಾಕು ಸೇವನೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಮಕ್ಕಳಲ್ಲಿ ಜಾಗೃತಿ ಮೂಡಿಸುವ ಬಗ್ಗೆ ಉಪಯುಕ್ತವಾದ ಮಾರ್ಗದರ್ಶನ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷ ಸ್ಥಾನವನ್ನು ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರಾದ ಶ್ರೀಮತಿ ರಾಧಾ ವಹಿಸಿಕೊಂಡಿದ್ದರು, ಮುಖ್ಯ ಅತಿಥಿಗಳಾಗಿ ಎಮ್ಮಿಗನೂರ ಪ್ರಾಥಮಿಕ ಆರೋಗ್ಯ ಕೇಂದ್ರದ ಆರೋಗ್ಯ ಸಂರಕ್ಷಣಾಧಿಕಾರಿಗಳಾದ ಗೀತಾ ಹಾಗೂ ತಾಲೂಕು ಹಸಿರು ಸೇನೆ ರೈತ ಸಂಘದ ಅಧ್ಯಕ್ಷರಾದ ವೀರೇಶ್ ವಿ . ಅವರು ಮತ್ತು ಒಕ್ಕೂಟದ ಅಧ್ಯಕ್ಷರಾದ ಹನುಮವ್ವ ಹಾಗೂ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಸಂಸ್ಥೆಯ ತಾಲೂಕಿನ ಕೃಷಿ ಅಧಿಕಾರಿಗಳಾದ ಸಂಜುಕುಮಾರ್, ವಲಯದ ಮೇಲ್ವಿಚಾರಕರಾದ ಮಂಜುನಾಥ, ಸೇವಾ ಪ್ರತಿನಿಧಿಗಳಾದ ಲಕ್ಷ್ಮಿ, ಶಾಹಿದಾ, ಸಿ.ಎಸ್.ಸಿ ಸೇವಾದಾರರಾದ ಶಶಿಕುಮಾರ್, ಶಿಕ್ಷಣ ಸಂಸ್ಥೆಯ ಸಹ ಶಿಕ್ಷಕರು ಮತ್ತು ಕಾಲೇಜ್ ವಿದ್ಯಾರ್ಥಿಗಳ ಉಪಸ್ಥಿತಿಯಲ್ಲಿ ಯಶಸ್ವಿಯಾಗಿ ಕಾರ್ಯಕ್ರಮ ಜರುಗಿತು. ಶಾಲಾ ಮಕ್ಕಳು ತಂಬಾಕು ಸೇವನೆ ಮಾಡದೇ ಇರುವ ಬಗ್ಗೆ ಎಲ್ಲರಿಗೂ ಒಂದು ಪ್ರತಿಜ್ಞಾವಿಧಿ ಬೋಧಿಸಲಾಯಿತು.

ಕೊಟ್ಟಾಲ್ ಗ್ರಾಮದ ಶ್ರೀ ಪಾಂಡುರಂಗ ದೇವಸ್ಥಾನ ಆವರಣದಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಪರಿಸರ ಜಾಗೃತಿ ಬಗ್ಗೆ ಮಾಹಿತಿ ಮತ್ತು ಗಿಡಗಳ ನಾಟಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಕಂಪ್ಲಿ ಪುರಸಭೆ ಮಾಜಿ ಅಧ್ಯಕ್ಷರಾದ ಎಂ. ಸುಧೀರ ಅವರು ಭಾಗವಹಿಸಿ ಮಾನವನ ದುರಾಸೆಯಿಂದ ಪರಿಸರ ಹಾಳಾಗುತ್ತಿದ್ದು, ಇದು ಮಾನವನಿಂದಲೇ ಸರಿಯಾಗಬೇಕಿದೆ. ಮುಂದಿನ ಪೀಳಿಗೆಗೆ ಪರಿಸರದ ಬಗ್ಗೆ ಕಾಳಜಿ ಮೂಡಿಸದಿದ್ದರೆ ಮುಂದೆ ಹೆಚ್ಚಿನ ಅಪಾಯ ಎದುರಾಗಲಿದೆ ಹೀಗಾಗಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮ ಅಭಿವೃದ್ಧಿ ಸಂಸ್ಥೆಯ ಪರಿಸರ ಜಾಗೃತಿ ಹಾಗೂ ದಿನಾಚರಣೆ ನಿರಂತರವಾಗಿರಲಿ ಎಂದು ತಿಳಿಸಿದರು.

ಬಳ್ಳಾರಿ ಜಿಲ್ಲೆಯ ನಿರ್ದೇಶಕರಾದ ರೋಹಿತಾಕ್ಷ ಅವರು ಭಾಗವಹಿಸಿ ಜನರಿಗೆ ಪರಿಸರ ಜಾಗೃತಿ ಬಗ್ಗೆ ಮಾಹಿತಿ ನೀಡಿ ಪ್ರತಿ ಶುಭ ಕಾರ್ಯಗಳ ನೆನಪಿಗಾಗಿ ಒಂದು ಗಿಡ ನೆಟ್ಟು ಪರಿಸರವನ್ನು ಉಳಿಸುವ ಬಗ್ಗೆ ಬೆಳೆಸುವ ಬಗ್ಗೆ ಹಾಗೂ ಯೋಜನೆಯ ವಿವಿಧ ಕಾರ್ಯಕ್ರಮಗಳಾದ ದೇವಸ್ಥಾನ ಜೀರ್ಣೋದ್ಧಾರಕ್ಕೆ ನೀಡುವ ಸಹಾಯದಿಂದ ಬಗ್ಗೆ, ವಿಕಲಚೇತನರಿಗೆ ಉಚಿತವಾಗಿ ಪರಿಕರಗಳನ್ನು ನೀಡುತ್ತಿರುವ ಬಗ್ಗೆ, ಶುದ್ಧ ಗಂಗಾ ಘಟಕ ನಿರ್ಮಾಣ ಬಗ್ಗೆ, ಹಿಂದೂ ರುದ್ರಭೂಮಿ ಅಭಿವೃದ್ಧಿ ಬಗ್ಗೆ ಮಾರ್ಗದರ್ಶನ ನೀಡಿದರು. ಸದ್ರಿ ಕಾರ್ಯಕ್ರಮದಲ್ಲಿ ಕಂಪ್ಲಿ ಪುರಸಭೆ ಮಾಜಿ ಅಧ್ಯಕ್ಷರಾದ ಶ್ರೀ ಸುಧೀರ್ ಅವರು ಭಾಗವಹಿಸಿ ಧರ್ಮಸ್ಥಳ ಸಂಸ್ಥೆ ಮಾಡುತ್ತಿರುವ ಸಮಾಜಮುಖಿ ಕೆಲಸ ಕಾರ್ಯಗಳ ಬಗ್ಗೆ ಸಂತೋಷವನ್ನು ವ್ಯಕ್ತಪಡಿಸಿದರು.

ಪಾಂಡುರಂಗ ದೇವಸ್ಥಾನ ಕಮಿಟಿ ಸದಸ್ಯರಿಗೆ ಸುಮಾರು 80 ಗಿಡಗಳ ವಿತರಣೆ ಮಾಡಿ ಆವರಣದಲ್ಲಿ ಸಾಂಕೇತಿಕವಾಗಿ ಗಿಡಗಳ ನಾಟಿ ಮಾಡಲಾಯಿತು. ತಾಲೂಕಿನ ಯೋಜನಾಧಿಕಾರಿಗಳಾದ ರಾಘವೇಂದ್, ಪಾಂಡುರಂಗ ದೇವಸ್ಥಾನದ ಅಧ್ಯಕ್ಷರಾದ ಶ್ರೀನಿವಾಸ್ ರೆಡ್ಡಿ, ಕಮಿಟಿ ಸದಸ್ಯರಾದ ಕೆ. ಚಂದ್ರಶೇಖರ, ಶ್ರೀನಿವಾಸ್, ದೇವಸ್ಥಾನ ಅರ್ಚಕರಾದ ಶ್ರೀ ರಾಘವೇಂದ್ರ ಹಾಗೂ ದೇವಸ್ಥಾನ ಸಮಿತಿ ಸರ್ವ ಸದಸ್ಯರು ಮತ್ತು ತಾಲೂಕಿನ ಕೃಷಿ ಮೇಲ್ವಿಚಾರಕರಾದ ಸಂಜುಕುಮಾರ್, ಎಮ್ಮಿಗನೂರು ವಲಯದ ಮೇಲ್ವಿಚಾರಕರಾದ ಮಂಜುನಾಥ್, ಸೇವಾ ಪ್ರತಿನಿಧಿಯಾದ ಪದ್ಮಾವತಿ ಹಾಗೂ ಸ್ವ ಸಹಾಯ ತಂಡದ ಸದಸ್ಯರು ಹಾಜರಿದ್ದರು.

**ವರದಿ : ಜಿಲಾನಸಾಬ್ ಬಡಿಗೇರ್**

ಕರುನಾಡ ಕಂದ
ಸಂಪುಟ 04 । ಸಂಚಿಕೆ 16
ದಿನಾಂಕ: 01-07-2025 ಪುಟಗಳು:16

# ಮೂಲ ಉದ್ದೇಶವನ್ನೇ ಮರೆತ ಸರ್ಕಾರಿ ಆಸ್ಪತ್ರೆ..!?

## ಬೀಗ ಹಾಕಿ ಕರ್ತವ್ಯ ಲೋಪ ತೋರುವವರ ವಿರುದ್ಧ ಕ್ರಮ ತೆಗೆದುಕೊಳ್ಳುವರೇ ತಾಲೂಕ ಆರೋಗ್ಯ ಅಧಿಕಾರಿಗಳು

**ಗುರುಮಠಕಲ್:** ಕೊಟಗೇರಾ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಬಂದ ರೋಗಿಗಳು ಆಸ್ಪತ್ರೆಗೆ ಬೀಗ ಹಾಕಿರುವುದನ್ನು ಕಂಡು ಸಂಕಷ್ಟಕ್ಕೆ ಒಳಗಾಗಿದ್ದಾರೆ, ಚಿಕಿತ್ಸೆಗೆ ಬರುವ ರೋಗಿಗಳಿಗೆ ಆಸ್ಪತ್ರೆ ನಾಮಫಲಕದಲ್ಲಿ ಮಾತ್ರ 247 ಕಾಣುತ್ತದೆ ಆದರೆ ಇಲ್ಲಿಯ ಸಿಬ್ಬಂದಿಗಳಿಗೆ ಅದು ಅನ್ವಯ ಆಗುವಂತೆ ಕಾಣುತ್ತಿಲ್ಲ, ಸರಿಯಾದ ಚಿಕಿತ್ಸೆ ಸಿಗದೆ ಅನಿವಾರ್ಯವಾಗಿ ಬೇರೆ ಊರುಗಳಿಗೆ/ಖಾಸಗಿ ಆಸ್ಪತ್ರೆಗೆ ಹೋಗುವ ಅನಿವಾರ್ಯತೆ ಎದುರಾಗಿದೆ.




**ಮೂಲ ಉದ್ದೇಶವನ್ನೇ ಮರೆತ ಸರ್ಕಾರಿ ಆಸ್ಪತ್ರೆ**

ಏಕ-ವೈದ್ಯ ಚಿಕಿತ್ಸಾಲಯಗಳಾಗಿರುವ ಆರೋಗ್ಯ ಕೇಂದ್ರಗಳು, ಸಾಮಾನ್ಯವಾಗಿ ಸಣ್ಣ ಶಸ್ತ್ರಚಿಕಿತ್ಸೆಗಳಿಗೆ ಸೌಲಭ್ಯಗಳನ್ನು ಹೊಂದಿರುತ್ತವೆ, ವೈದ್ಯಕೀಯ ಆರೈಕೆಯನ್ನು ಒದಗಿಸುವುದು, ಕುಟುಂಬ ಯೋಜನೆ ಸೇರಿದಂತೆ ತಾಯಿ-ಮಗುವಿನ ಆರೋಗ್ಯ, ಸುರಕ್ಷಿತ ನೀರು ಸರಬರಾಜು ಮತ್ತು ಮೂಲಭೂತ ನೈರ್ಮಲ್ಯ, ಸ್ಥಳೀಯವಾಗಿ ಸ್ಥಳೀಯ ರೋಗಗಳ ತಡೆಗಟ್ಟುವಿಕೆ ಮತ್ತು ನಿಯಂತ್ರಣ, ಪ್ರಮುಖ ಅಂಕಿಅಂಶಗಳ ಸಂಗ್ರಹಣೆ ಮತ್ತು ವರದಿ ಮಾಡುವಿಕೆ ಆರೋಗ್ಯದ ಬಗ್ಗೆ ಶಿಕ್ಷಣ ನೀಡುವುದು ಪ್ರಮುಖ ಉದ್ದೇಶವಾಗಿದ್ದು, 24 ಗಂಟೆ ತೆರೆಯಬೇಕಾದ ಆಸ್ಪತ್ರೆಯನ್ನು ಬೆಳಿಗ್ಗೆ 10 ಅಥವಾ 11ಕ್ಕೆ ತೆರೆಯಲಾಗುತ್ತದೆ, ಸಂಜೆಯಾಗುತ್ತಿದ್ದಂತೆ ಮುಚ್ಚುತ್ತಾರೆ, ವೈದ್ಯರು ಸರ್ಕಾರದ ನಿಯಮಗಳನ್ನು ಗಾಳಿಗೆ ತೂರಿ ತಮಗಿಷ್ಟ ಬಂದಂತೆ ವರ್ತಿಸುತ್ತಿದ್ದಾರೆ. ಸಾಮಾನ್ಯವಾಗಿ ದಿನ ನಿತ್ಯ ಒಬ್ಬ ಮುಖ್ಯ ವೈದ್ಯಾಧಿಕಾರಿ, ಇಬ್ಬರು ನರ್ಸ್‌ಗಳು, ಲ್ಯಾಬ್ ಟೆಕ್ನಿಷಿಯನ್ ಇರಬೇಕು. ಆದರೆ ಒಬ್ಬ ನರ್ಸ್ ಮಾತ್ರ ಇರುತ್ತಾರೆ. ಔಷಧಿ, ಮಾತ್ರೆ, ತುರ್ತು ಚಿಕಿತ್ಸಾ ಸೌಲಭ್ಯ ಇಲ್ಲ. ಹೆಚ್ಚಿನ ಚಿಕಿತ್ಸೆಗೆ ಗುರುಮಠಕಲ್ ತೆರಳಬೇಕು ಎಂದು ನಿವಾಸಿಗಳು ತಮ್ಮ ಅಳಲು ಹೇಳಿಕೊಂಡಿದ್ದಾರೆ.

ತಾಲ್ಲೂಕಿನ ಕೊಟಗೇರಾ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಸಮಯಕ್ಕೆ ಸರಿಯಾಗಿ ವೈದ್ಯರು, ಸಿಬ್ಬಂದಿ ಹಾಜರಾಗದೆ ಕರ್ತವ್ಯಲೋಪ ಎಸಗುತ್ತಿರುವುದರಿಂದ ಸಂಕಷ್ಟ ಎದುರಿಸುವಂತಾಗಿದೆ ಕರ್ತವ್ಯ ನಿರತ ವೈದ್ಯರು ರಜೆಯಲ್ಲಿದ್ದು ಕೇವಲ ಒಬ್ಬ ಆರೈಕೆ ಸಿಬ್ಬಂದಿ ಮಾತ್ರ ಬಂದಿರುವುದಾಗಿ ಸ್ಥಳೀಯರು ದೂರಿದ್ದಾರೆ.

ಗಡಿ ಭಾಗದ ಬಹುತೇಕ ಯಾದಗಿರಿ ಜಿಲ್ಲೆ ಹಾಗೂ ಕಲಬುರಗಿ ಜಿಲ್ಲೆಯ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಪರಿಸ್ಥಿತಿ ಇದಕ್ಕೆ ಹೊರತಾಗಿಲ್ಲ. ವೈದ್ಯರು ಮತ್ತು ಸಿಬ್ಬಂದಿ ಕರ್ತವ್ಯ ಲೋಪವೆಸಗಿ ಬೇಜವಾಬ್ದಾರಿಯಿಂದ ವರ್ತಿಸುತ್ತಿರುವ ಕಾರಣ ಆರೋಗ್ಯ ಸೇವೆಗಳು ಜನಸಾಮಾನ್ಯರಿಗೆ ತಲುಪುತ್ತಿಲ್ಲ.

ಹಬ್ಬಗಳ ಪ್ರಯುಕ್ತ ಆಸ್ಪತ್ರೆ ವೈದ್ಯರಾದ ಡಾ. ಮನಿಶಾ ಮೇಲಾಧಿಕರಿಗಳ ಅನುಮತಿ ಪಡೆದು ರಜೆಯಲ್ಲಿರುವುದು ತಿಳಿದು ಬಂದಿದೆ, ಉಳಿದ ಸಿಬ್ಬಂದಿಯನ್ನು ಕಾರಣ ಕೇಳಿ ಕೂಡಲೇ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು, ಇಲ್ಲದಿದ್ದರೆ ಆಸ್ಪತ್ರೆ ಮುಂದೆ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಶ್ರೀಕಾಂತ ತಲಾರಿ ಅಂಬೇಡ್ಕರ್ ಯುವ ಸೇನೆ ಅಧ್ಯಕ್ಷರು ಗುರುಮಠಕಲ್ ಎಚ್ಚರಿಕೆ ನೀಡಿದ್ದಾರೆ.

ಕಳೆದ ತಿಂಗಳ 14 ರಂದು ಯಾದಗಿರಿ ನಗರದಲ್ಲಿ ಮುಖ್ಯಮಂತ್ರಿಗಳು 400 ಕೋಟಿ ವೆಚ್ಚದಲ್ಲಿ ಆರೋಗ್ಯ ಆವಿಷ್ಕಾರ ಯೋಜನೆಗೆ ಚಾಲನೆ ನೀಡಿರುವುದು ವಿಶೇಷ, ಸುಮರು 3 ಸಾವಿರ ಜನಸಂಖ್ಯೆ ಉಳ್ಳ ಕೊಟಗೇರಾ ಗ್ರಾಮಸ್ಥರ ಅನುಕೂಲಕ್ಕಾಗಿ ನಿರ್ಮಾಣವಾದ ಆರೋಗ್ಯ ಕೇಂದ್ರ ಜನರ ಪರ ಕಾರ್ಯ ನಿರ್ವಹಿಸಿದರೆ ಸಾಕು ಎನ್ನುವುದು ಸಾರ್ವಜನಿಕರ ಹಾಗೂ **"ಕರುನಾಡ ಕಂದ"** ಬಳಗದ ಆಶಯ.

**ವರದಿ: ಜಗದೀಶ್ ಕುಮಾರ್ ಭೂಮಾ**

# ನೂತನ ನಫೀಸಾ ಕೌಸರ್ ಮಸೀದಿ ಉದ್ಘಾಟನೆ ಹಾಗೂ ಸಾಮೂಹಿಕ ವಿವಾಹ ಸಮಾರಂಭ

**ಗದಗ:** ಜಿಲ್ಲೆಯ ಕುರುಡಗಿ ಗ್ರಾಮದಲ್ಲಿ ಅಂಜುಮಾನ್ ಇಸ್ಲಾಂ ಕಮಿಟಿ ವತಿಯಿಂದ ಹಮ್ಮಿಕೊಂಡಿದ್ದ ನೂತನ ನಫೀಸಾ ಕೌಸರ್ ಮಸೀದಿ ಉದ್ಘಾಟನೆ ಹಾಗೂ ಸಾಮೂಹಿಕ ವಿವಾಹ ಸಮಾರಂಭ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ವಿಧಾನ ಪರಿಷತ್ ಸದಸ್ಯ ಹಾಗೂ ಸರ್ಕಾರದ ಮುಖ್ಯ ಸಚೇತಕ ಸಲೀಂ ಅಹ್ಮದ್ ಅವರು ಸಾಮೂಹಿಕ ಮದುವೆಗಳಿಂದ ಸಾಮಾಜಿಕ ಸಾಮರಸ್ಯ ಬೆಳೆಯುವ ಜೊತೆಗೆ ದುಂದು ವೆಚ್ಚಕ್ಕೆ ಕಡಿವಾಣ ಹಾಕಬಹುದು, ನವ ದಂಪತಿಗಳ ಭವಿಷ್ಯದ ಬದುಕು ಉಜ್ವಲವಾಗಿರಲಿ ಎಂದು ಶುಭ ಹಾರೈಸಿ, ಇಂತಹ ಸಾಮೂಹಿಕ ಮದುವೆ ಇಡೀ ನಾಡಿಗೆ ಮಾದರಿಯಾಗಲಿ ಈ ಗ್ರಾಮದಲ್ಲಿ ಎಲ್ಲಾ ವರ್ಗದ ಜನರು ಬಹಳಷ್ಟು ಅನ್ಯೋನ್ಯತೆಯಿಂದ ಇದ್ದು ಕಾರ್ಯಕ್ರಮದಲ್ಲಿ ಎಲ್ಲಾ ವರ್ಗದವರು ಭಾಗವಹಿಸಿದ್ದು ಬಹಳ ಸಂತಸ ತಂದಿದೆ, ಈ ಗ್ರಾಮದಲ್ಲಿ ಅಂಜುಮನ್ ಇಸ್ಲಾಂ ಕಮಿಟಿ ವತಿಯಿಂದ ಶಾದಿಮಹಲ್ ನಿರ್ಮಾಣಕ್ಕೆ ಹಿರಿಯರು ಸಹಾಯ ಕೋರಿದ್ದು ಬೇಕಾದ ಅಗತ್ಯ ನೆರವು ನೀಡಲಾಗುವುದು ಎಂದು ತಿಳಿಸಿದರು.




ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಪರಮಪೂಜ್ಯ ಶ್ರೀ ಕಲ್ಲಯ್ಯಜ್ಜನವರು ಪೀಠಾಧ್ಯಕ್ಷರು ವೀರೇಶ್ವರ ಪುಣ್ಯಾಶ್ರಮ ಗದಗ, ಸಾನಿಧ್ಯವನ್ನು ಮೌಲಾನ ಶಬ್ಬೀರ್ ಅಹ್ಮದ್ ನದ್ವಿ ಕಲ್ಮನಿ ಬೆಟಗೇರಿ, ಸಾಮೂಹಿಕ ವಿವಾಹಗಳ ಕಾರ್ಯಕ್ರಮದ ಉದ್ಘಾಟಕರು ಶ್ರೀ ಸಲೀಂ ಅಹಮದ್ ಸದಸ್ಯರು ವಿಧಾನ ಪರಿಷತ್ ಸರ್ಕಾರದ ಮುಖ್ಯ ಸಚೇತಕರು ಕರ್ನಾಟಕ ಸರ್ಕಾರ ,ಕಾರ್ಯಕ್ರಮದ ನೇತೃತ್ವವನ್ನು ಸನ್ಮಾನ್ಯ ಶ್ರೀ ಬಿ. ಆರ್. ಯಾವಗಲ್ ಮಾಜಿ ಜನಪ್ರಿಯ ಸಚಿವರು ನರಗುಂದ ಮತಕ್ಷೇತ್ರ ಇವರುಗಳು ವಹಿಸಿದ್ದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜನಾಬ್ ಹುಚ್ಚೂಸಾಬ್ ಹುಸೇನಸಾಬ್ ಗೋಗೇರಿ ಅಂಜುಮನ್ ಇಸ್ಲಾಂ ಕಮಿಟಿ ಕುರುಡಗಿ ಇವರು ವಹಿಸಿದ್ದರು.

ಈ ಕಾರ್ಯಕ್ರಮದಲ್ಲಿ ಶ್ರೀ ಹಜರತ್ ಅಲಿ ಎಂ. ದೊಡ್ಮನಿ ಮಾಜಿ ನಗರಸಭೆ ಸದಸ್ಯರು ಹುಬ್ಬಳ್ಳಿ ಧಾರವಾಡ , ಡಾ. ರವಿ ಎಲ್. ಗುಂಜೀಕರ್ ಅಧ್ಯಕ್ಷರು ಕರ್ನಾಟಕ ರಾಜ್ಯ ಸರ್ಕಾರ ನೌಕರರ ಗೃಹ ನಿರ್ಮಾಣ ಮಂಡಳಿ ಗದಗ ಜಿಲ್ಲೆ , ಪೀರ್ ಸಾಬ್ ಪಿ. ನದಾಫ್ ನಿವೃತ್ತ ಶಿಕ್ಷಕರು ಧಾರವಾಡ ಹಾಗೂ ಎಫ್. ರಂಜಾನ್ ಸಾಬ್ ನದಾಫ್ ಸಾಕಿನ್ ಕುಮಾರಪಟ್ಟಣಂ, ಹರಿಹರ ಹಾಗೂ ಎಸ್. ಕೆ. ನದಾಫ್ ವಕೀಲರು, ಕೆ ಎಫ್ ಹಳ್ಯಾಳ ಅಧ್ಯಕ್ಷರು ನದಾಫ್ ಪಿಂಜಾರ್ ಸಂಘ ಗದಗ ಜಿಲ್ಲೆ, ಶ್ರೀ ವಿವೇಕ್ ಯಾವಗಲ್ ರಾಷ್ಟ್ರೀಯ ಕಾರ್ಯದರ್ಶಿಗಳು ಕಾಂಗ್ರೆಸ್, ಜನಾಬ್ ಕಾಸೀಮ್ ಸಾಬ್ ಹೊಸಳ್ಳಿ ಪಿಂಜಾರ್ ಸಂಘದ ತಾಲೂಕು ಅಧ್ಯಕ್ಷರು, ಶ್ರೀ ಪ್ರವೀಣ್ ಯಾವಗಲ್ ಅಧ್ಯಕ್ಷರು ನರಗುಂದ ಹೊಳೆಆಲೂರು ಬ್ಲಾಕ್ ಕಾಂಗ್ರೆಸ್, ಶ್ರೀ ಶಿವನಗೌಡ ಸಿದ್ದನಗೌಡ ಗ್ರಾಮ ಪಂಚಾಯತ್ ಅಧ್ಯಕ್ಷರು ಕುರುಡಗಿ ,ಶ್ರೀ ಎಸ್ ಆರ್ ನದಾಫ್ ಗ್ರಾಮ ಪಂಚಾಯತಿ ಸದಸ್ಯರು, ಶ್ರೀ ವಿ. ಕೆ. ಸವಡಿ ಗ್ರಾಮದ ಹಿರಿಯರು , ಶ್ರೀ ಪ್ರಭುರಾಜ್ ಮ. ಅಯ್ಯನಗೌಡ್ರು ಶಿಕ್ಷಕರು, ಶ್ರೀ ಷಣ್ಮುಖ ಬಿ. ಲಮಾಣಿ ಪ್ರೌಢಶಾಲಾ ಶಿಕ್ಷಕರು , ಶ್ರೀ ಶರಣಪ್ಪ ಗವಾರಿ ಗುತ್ತಿಗೆದಾರರು , ಶ್ರೀ ಮಿಲಿಂದ್ ಕಾಳೆ ಗ್ರಾಮ ಪಂಚಾಯತಿ ಸದಸ್ಯರು ಹುಯಿಲಗೋಳ , ಚಂದ್ರು ಕೋಣಿಮನಿ ಗುತ್ತಿಗೆದಾರರು ಗಾವರವಾಡ, ರಮೇಶ್ ಜಾದವ್ ಇವರುಗಳಿಗೆ ವೇದಿಕೆಯಲ್ಲಿ ಸನ್ಮಾನಿಸಲಾಯಿತು.

ಕುರುಡಗಿ ಗ್ರಾಮದ ಹಿರಿಯರು ಹಾಗೂ ಅಂಜುಮಾನ್ ಇಸ್ಲಾಂ ಕಮಿಟಿ ಸರ್ವ ಸದಸ್ಯರು, ಯುವಕರು, ಗ್ರಾಮಸ್ಥರು, ವಿವಿಧ ಸಂಘ ಸಂಸ್ಥೆಗಳ ಸದಸ್ಯರು - ಪದಾಧಿಕಾರಿಗಳು ಈ ಕಾರ್ಯಕ್ರಮದಲ್ಲಿ ಭಾಗಿಯಾಗಿ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

**- ಕರುನಾಡ ಕಂದ**

ಕರುನಾಡ ಕಂದ
ಸಂಪುಟ 04 | ಸಂಚಿಕೆ 16
ದಿನಾಂಕ: 01-07-2025 ಪುಟಗಳು:16

# ರಾಜ್ಯಮಟ್ಟದ ಭಜನಾ ಸ್ಪರ್ಧೆ



**ಬೆಳಗಾವಿ:** ಅಥಣಿ ನಗರದ ವಿಜಯಪುರ ರಸ್ತೆಗೆ ಹೊಂದಿಕೊಂಡಿರುವ ಶ್ರೀ ದಾನಮ್ಮ ದೇವಸ್ಥಾನದಲ್ಲಿ ಗಾನಸುಧಾಕರ ಮಹಾದೇವಪ್ಪ ಹುಲ್ಯಾಳ ಅವರ ಪ್ರಥಮ ಪುಣ್ಯ ಸ್ಮರಣೋಸ್ತವ ನಿಮಿತ್ಯ ದಿ. 26/06/2025 ರಂದು ಬೆಳಿಗ್ಗೆ 10 ಗಂಟೆಗೆ ರಾಜ್ಯಮಟ್ಟದ ಭಜನಾ ಸ್ಪರ್ಧೆ ಏರ್ಪಡಿಸಲಾಗಿತ್ತು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮುಖಂಡರಾದ ಶ್ರೀ ಶಿವಾನಂದ ದಿವಾನಮಳ ವಹಿಸಿಕೊಂಡಿದ್ದರು. ಮತ್ತೊಬ್ಬ ಮುಖಂಡರು ಹಾಗೂ ಬಿ.ಕೆ.ಟಿ ಟಯರ್ ಅಂಗಡಿಯ ಮಾಲೀಕರಾದ ರಾಜು ಹಳ್ಳದಮಳ ಕೂಡಾ ಉಪಸ್ಥಿತರಿದ್ದರು. ಈ ಭಜನಾ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನವನ್ನು ರಾಮಾನಂದ ಭಜನಾ ಮಂಡಳಿ ಸಾ. ತೋಳಮಟ್ಟಿ ಪಡೆದುಕೊಂಡರು.

ಈ ಕಾರ್ಯಕ್ರಮದಲ್ಲಿ ಮಲ್ಲಿಕಾರ್ಜುನ್ ಹಳ್ಳದಮಳ, ಶಿವಪ್ಪ ಅಲಬಾಳ, ಭೀಮಪ್ಪ ಹೊನ್ನಳ್ಳಿ, ಈರಗೊಂಡ ಔರಸಂಗ ,ಸಂಕೋನಟ್ಟಿ ಗ್ರಾಮ ಪಂಚಾಯತಿಯ ಸದಸ್ಯರು ಕೂಡಾ ಉಪಸ್ಥಿತರಿದ್ದರು. ಇನ್ನೂ ಅನೇಕ ಭಜನಾ ಕಲಾವಿದರು ಭಾಗವಹಿಸಿ ಈ ಕಾರ್ಯಕ್ರಮಕ್ಕೆ ಶೋಭೆ ತಂದು ಕೊಟ್ಟರು.

**ವರದಿ: ವಿಠ್ಠಲ ಖೋಕಾಟೆ**

# ನರೇಗಾ ಯೋಜನೆಯಲ್ಲಿ ಮಹಿಳೆಯರ ಭಾಗವಹಿಸುವಿಕೆ ಅತೀ ಅವಶ್ಯ -ಪಿ.ಡಿ.ಓ ಆಸೀಫ್ ಲತೀಫ್ ಕರೆ



**ಬೆಳಗಾವಿ/ ಬೈಲಹೊಂಗಲ:** ನರೇಗಾ ಯೋಜನೆಯಲ್ಲಿ ಅತೀ ಕಡಿಮೆ ಮಹಿಳೆಯರು ಕೆಲಸಕ್ಕೆ ಬರುವ ಕಾರಣಕ್ಕಾಗಿ ಉಡಿಕೇರಿ ಗ್ರಾಮ ಪಂಚಾಯತಿಯಲ್ಲಿ ವಿಶೇಷ ಮಹಿಳಾ ಗ್ರಾಮ ಸಭೆ ಹಾಗೂ ರೋಜಗಾರ ದಿವಸ್ ಆಚರಣೆ ಮಾಡುವ ಮೂಲಕ ಉದ್ಯೋಗ ಖಾತ್ರಿ ಕೆಲಸಕ್ಕೆ ಮಹಿಳಾ ಭಾಗವಹಿಸುವಿಕೆ ಅತೀ ಅವಶ್ಯ ಎಂದು ಗ್ರಾ.ಪಂ. ಅಭಿವೃದ್ಧಿ ಅಧಿಕಾರಿ ಆಸೀಫ್ ಲತೀಫ್ ಯೋಜನೆಯ ಕರಪತ್ರಗಳನ್ನು ಬಿಡುಗಡೆಗೊಳಿಸಿ ಮಾತನಾಡಿದರು.

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯು ಅಕುಶಲ ಕೂಲಿ ಕಾರ್ಮಿಕರಿಗಾಗಿ ಪ್ರಾರಂಭವಾಗಿರುವಂತಹ ಯೋಜನೆ ಇದು ಬಡ ಕುಟುಂಬಗಳು ಉದ್ಯೋಗವನ್ನು ಆರಿಸಿಕೊಂಡು ಬೇರೆ ನಗರ - ಪಟ್ಟಣಗಳಿಗೆ ವಲಸೆ ಹೋಗುವುದನ್ನು ನಿಲ್ಲಿಸುವ ಕಾರಣಕ್ಕಾಗಿ ಇದ್ದೂರಲ್ಲೇ ಉದ್ಯೋಗ ನೀಡುವ ನಿಟ್ಟಿನಲ್ಲಿ ಪ್ರಾರಂಭವಾಗಿರುವಂತಹ ಯೋಜನೆ, ಇದು ತಾಲೂಕಿನಲ್ಲಿ ಅತೀ ಕಡಿಮೆ ಮಹಿಳೆಯರು ಉದ್ಯೋಗ ಖಾತ್ರಿ ಕೆಲಸಕ್ಕೆ ಅಂದರೆ 41.45% ಪ್ರತಿ ಶತದಷ್ಟು ಕೆಲಸಕ್ಕೆ ಬರುತ್ತಿದ್ದಾರೆ ಈ ಪ್ರಮಾಣ ಕನಿಷ್ಠ 60% ರಷ್ಟು ಇರಬೇಕು ಎಂದು ಮಹಿಳಾ ಕೂಲಿಕಾರರನ್ನು ಉದ್ದೇಶಿಸಿ ಮಾತನಾಡಿದರು.

ತಾ. ಪಂ. ಐಇಸಿ ಸಂಯೋಜಕ ಎಸ್. ವ್ಹಿ. ಹಿರೇಮಠ ಮಾತನಾಡಿ ನರೇಗಾ ಯೋಜನೆಯಲ್ಲಿ ತಾಲೂಕಿನ ಮಹಿಳಾ ಭಾಗವಹಿಸುವಿಕೆ ಬೈಲಹೊಂಗಲದಲ್ಲಿ ಪ್ರತಿಶತ 56.76% ರಷ್ಟು ಇದ್ದು ಇದನ್ನು 60% ಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಆಗಬೇಕು ಆದ್ದರಿಂದ ಎಲ್ಲಾ ಗ್ರಾ.ಪಂ. ಗಳಲ್ಲಿ ಮಹಿಳೆಯರು ಹೆಚ್ಚಿನ ಪ್ರಮಾಣದಲ್ಲಿ ಕೆಲಸಕ್ಕೆ ಬಂದರೆ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಸದೃಢರಾಗಲು ನರೇಗಾ ಸಹಕಾರಿಯಾಗಿದೆ ಎಂದು ತಿಳಿಸಿದರು.


ಪ್ರತೀ ಕುಟುಂಬಕ್ಕೆ 100 ದಿವಸ ಕೆಲಸ ನೀಡುವ ಮೂಲಕ ಪ್ರತಿ ದಿನದ ಕೂಲಿ 370/- ರೂ. ಸಿಗುತ್ತದೆ ಇದರಿಂದ ವರ್ಷಕ್ಕೆ 37,000/- ರೂ. ದೊರೆಯುತ್ತದೆ ಕೌಟುಂಬಿಕ ನಿರ್ವಹಣೆಗಾಗಿ ಇದು ಉಪಯುಕ್ತವಾಗಿದೆ ಎಂದು ತಿಳಿಸಿದರು. ಇದೇ ಸಂದರ್ಭದಲ್ಲಿ ಗ್ರಾ. ಪಂ. ಅಧ್ಯಕ್ಷರು ಶ್ರೀ ಭಾರತಿ ಬ. ಪೂಜೇರ, ಗ್ರಾ. ಪಂ. ಸದಸ್ಯ ಬಸವರಾಜ್ ಹಂಚಿನಮನಿ, ಕಾರ್ಯದರ್ಶಿ ಕಾಳಪ್ಪ ಕಂಬಾರ, ಕ್ಲರ್ಕ್ ಚಂದ್ರಯ್ಯ ಕುಲಕರ್ಣಿ, ಗ್ರಾ. ಪಂ. ಸಿಬ್ಬಂದಿಗಳು, ಮಹಾಂತೇಶ ಹವಾಲ್ದಾರ, ಜಯಶ್ರೀ ಬಾರ್ಕಿ, ಮಂಜುನಾಥ ಪಚ್ಚೇದ, ಸುರೇಶ ಉಗರಖೋಡ, ರಾಜು ಬಡ್ಲಿ, ಅಜ್ಜಪ್ಪ ಹಲಕಿ ಹಾಗೂ ನರೇಗಾ ಕೂಲಿಕಾರರು ಮೇಟಗಳು ಮತ್ತು ಗ್ರಾಮಸ್ಥರು ಹಾಜರಿದ್ದರು.

ವರದಿ. ಭೀಮಸೇನ ಕಮ್ಮಾರ

## ಶ್ರೀ ಶಿವಸಾಯಿ ಹೀಲಿಂಗ್ ಸೇವಾ ಕೇಂದ್ರ, ರಾಮಗೇರಿ

**ಎಲ್ಲಾ ಖಾಯಿಲೆಗಳಿಗೆ ಔಷಧಿ ರಹಿತ ಚಿಕಿತ್ಸೆ ನೀಡಲಾಗುವುದು.**

**ಬಂಜೆತನ, ಲಕ್ವಾ, ಬೆನ್ನು ನೋವು, ಮೊಣಕಾಲು ನೋವು, ಹೊಟ್ಟೆ ನೋವು, ಕೂದಲು ಉದುರುವಿಕೆ, ಮಾನಸಿಕ ಸಮಸ್ಯೆ, ಲೈಂಗಿಕ ಸಮಸ್ಯೆ, ಕಿವುಡುತನ, ಚರ್ಮ ರೋಗ, ಬಿ. ಪಿ, ಥೈರಾಯಿಡ್, ಮಕ್ಕಳ ಓದುವಿಕೆಯಲ್ಲಿ ಸಮಸ್ಯೆ, ಪಿಂಪಲ್ಸ್, ಸಾಯಟಿಕಾ ನೋವು, ಕಿಡ್ನಿ ಸ್ಟೋನ್, ಕಣ್ಣಿನ ಸಮಸ್ಯೆ, ಇನ್ನೂ ಮುಂತಾದ ಸಮಸ್ಯೆಗಳಿಗೆ ಚಿಕಿತ್ಸೆ ನೀಡಲಾಗುವುದು.**



**ಹೆಚ್ಚಿನ ಮಾಹಿತಿ ಹಾಗೂ ನೇರ ಭೇಟಿಗಾಗಿ ಸಂಪರ್ಕಿಸಿ.**
**ಹೀಲರ್ : ಸದಾಶಿವ ಭೀ.ಮುಡೆಮ್ಮನವರ ,ರಾಮಗೇರಿ.**



**ಫೋನ್ - 7019168002, 9538151413.**
**ತಾಲೂಕ - ಲಕ್ಷ್ಮೇಶ್ವರ**
**ಜಿಲ್ಲೆ- ಗದಗ.**


**"ಕರುನಾಡ ಕಂದ ಪತ್ರಿಕೆ" ನ್ಯೂಸ್ ಪೋರ್ಟಲ್ ಹಾಗೂ ಯೂಟ್ಯೂಬ್ ಚಾನೆಲ್ ಗೆ ಪಾರ್ಟ್/ಫುಲ್ ಟೈಮ್ ನಲ್ಲಿ ಕಾರ್ಯ ನಿರ್ವಹಿಸಲು ರಾಜ್ಯಾದ್ಯಂತ ಎಲ್ಲಾ ಜಿಲ್ಲೆ, ತಾಲೂಕು ಮಟ್ಟದಲ್ಲಿ ಸ್ಥಳೀಯ ವರದಿಗಾರರು ಬೇಕಾಗಿದ್ದಾರೆ.**

**18 ವರ್ಷದಿಂದ 45 ವರ್ಷದವರೆಗಿನ ಆಸಕ್ತರು ಸಂಪರ್ಕಿಸಬಹುದು.**

**TARGET ಇರುವುದಿಲ್ಲ**

**ಹೆಚ್ಚಿನ ಮಾಹಿತಿಗಾಗಿ ನಿಮ್ಮ ಹೆಸರು, ತಾಲ್ಲೂಕು ವಾಟ್ಸ್ ಆಪ್ ಮಾಡಿ ಅಥವಾ ಕರೆ ಮಾಡಿ:**

**ಬಸವರಾಜ ಬಳಿಗಾರ, ಸಂಪಾದಕರು**
**Call & WhatsApp:**
**9986366909**
**www.karunadakanda.com**




KARUNADA KANDA Fourthnightly, Printed by, Published by, owned by KARIBASAPPA BALIGAR and Printed at Nikhil offset Printers Ward No 23, Buddha Circle, Hosalli main Road, Gangavati 583227.Tq-Gangavati, Dist:Koppal, and Published at : # 94,at-Post-Gunnal, Tq-Yalaburga,Dst-Koppal,pin-583237,PH:9986366909, 9742776385 Editor-KARIBASAPPA BALIGAR